ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 3 ಸೋಮವಾರ 2023

ಸಂಪುಟ: 44 | ಸಂಚಿಕೆ: 78 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದಿನಿಂದ ವಿಧಾನಮಂಡಲ ಅಧಿವೇಶನ

- ವಿವಾದಾತ್ಮಕ ಕಾಯ್ದೆಗಳ ರದ್ಧತಿಗೆ ಸರ್ಕಾರ ಸಿದ್ಧತೆ
- ಸದನದ ಒಳಗೆ, ಹೊರಗೆ ಬಿಜೆಪಿ ಪ್ರತಿಭಟನೆ
- ಗ್ಯಾರಂಟಿ ಗೊಂದಲ ಬಗ್ಗೆ ಜಟಾಪಟಿ ಸಾಧ್ಯತೆ



ಬೆಂಗಳೂರು, ಜು.2– ರಾಜ್ಯ ವಿಧಾನಮಂಡಲ ಅಧಿವೇಶನ ಸೋಮವಾರದಿಂದ (ಜುಲೈ 3) ಆರಂಭವಾಗಲಿದ್ದು, ಸರಕಾರ ಮತ್ತು ಪ್ರತಿಪಕ್ಷಗಳ ನಡುವೆ ಜಟಾಪಟಿಗೆ ವೇದಿಕೆ ಅಣಿಯಾಗಿದೆ. ಹಿಂದಿನ ಬಿಜೆಪಿ ಸರಕಾರದ ಅವಧಿಯ ಹಲವು ವಿವಾದಿತ ವಿಧೇಯಕಗಳನ್ನು ಹಿಂಪಡೆಯುವ ಸರಕಾರದ ತೀರ್ಮಾನ ಹಾಗೂ 'ಗ್ಯಾರಂಟಿ' ಯೋಜನೆಗಳ ಅನುಷ್ಠಾನದಲ್ಲಿನ ಗೊಂದಲ ಮತ್ತು ಷರತ್ತುಗಳ ವಿರುದ್ಧ ಹೋರಾಟಕ್ಕೆ ಪ್ರತಿಪಕ್ಷಗಳು ಸಿದ್ಧವಾಗಿವೆ.

ಮತಾಂತರ ನಿಷೇಧ ಮತ್ತಿತರ ವಿವಾದಿತ ವಿಧೇಯಕಗಳನ್ನು ಹಿಂಪಡೆಯುವ ಜತೆಗೆ, ಹಿಂದಿನ ಸರಕಾರದ ಅವಧಿಯ ಅವ್ಯವಹಾರ ಮತ್ತು ಭ್ರಷ್ಟಾಚಾರದ ಆರೋಪಗಳನ್ನು ತನಿಖೆ ನಡೆಸುವ ತೀರ್ಮಾನದ ಮೂಲಕ ಪ್ರತಿಪಕ್ಷಕ್ಕೆ ಟಕ್ಕರ್ ನೀಡಲು ಸರಕಾರ ಸಿದ್ಧವಾಗಿದೆ. ಮತ್ತೊಂದೆಡೆ, ಅಧಿಕಾರಕ್ಕೆ ಬಂದ ದಿನದಿಂದಲೂ 'ಗ್ಯಾರಂಟಿ' ಯೋಜನೆಗಳು ತೆವಳುತ್ತಾ ಸಾಗುತ್ತಿದೆಯಲ್ಲದೆ ಷರತ್ತುಗಳ ಮೂಲಕ ಫಲಾನುಭವಿಗಳನ್ನು ವಂಚಿಸಲಾಗುತ್ತಿದೆ ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಪ್ರಮುಖ ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಸಿದ್ಧತೆ ನಡೆಸಿವೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ವೈಫಲ್ಯದ ವಿರುದ್ಧ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಸದನದ ಹೊರಗೆ ಹೋರಾಟಕ್ಕೆ ಅಣಿಯಾಗಿದ್ದರೆ, ಸದನದ ಒಳಗೆ ಹೋರಾಟದ ರೂಪುರೇಷೆ ಕೂಡ ಸಿದ್ಧವಾಗಿದೆ. ಈ ಮಧ್ಯೆ, ಅಭೂತಪೂರ್ವ ಗೆಲುವಿನ ಸಂಭ್ರಮದಲ್ಲೇ ಇರುವ ಆಡಳಿತಾರೂಢ ಕಾಂಗ್ರೆಸ್ ಬಿಜೆಪಿಯನ್ನು ಮುಜುಗರಕ್ಕೆ ಸಿಲುಕಿಸುವ ತಂತ್ರಗಾರಿಕೆಯಲ್ಲಿದೆ. ಸ್ಪಷ್ಟ ಬಹುಮತದ ಜತೆಗೆ, ಉತ್ಸಾಹದಲ್ಲಿರುವ ಆಡಳಿತ ಪಕ್ಷದ ವಿರುದ್ಧ ಮುಗಿಬೀಳಲು ಬಿಜೆಪಿ ತಯಾರಿ ನಡೆಸಿದೆ. ಆದರೆ, ಬಿ.ಎಸ್.ಯಡಿಯೂರಪ್ಪ ಕೆ.ಎಸ್.ಈಶ್ವರಪ್ಪ, ಗೋವಿಂದ ಕಾರಜೋಳ, ಜೆ.ಸಿ.ಮಾಧುಸ್ವಾಮಿ ಅವರಂತಹ ಹಿರಿಯರ ಅನುಪಸ್ಥಿತಿ ಪ್ರತಿಪಕ್ಷದ ಸಾಲನ್ನು ಈ ಬಾರಿ ಕಾಡಲಿದೆ. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಆರ್.ಅಶೋಕ್ ಜತೆಗೆ, ಹೊಸ ತಲೆಮಾರಿನ ನಾಯಕರು ಅಧಿವೇಶನದಲ್ಲಿ ಸರಕಾರಕ್ಕೆ ಮುಖಾಮುಖಿಯಾಗುತ್ತಿದ್ದಾರೆ.

ವರ್ಷಾರಂಭದ ಜಂಟಿ ಅಧಿವೇಶನ ಕಳೆದ ಫೆಬ್ರವರಿಯಲ್ಲಿ ನಡೆದಿತ್ತಾದರೂ, ನೂತನ ಸರಕಾರದ ಗೊತ್ತುಗುರಿ ಬಗ್ಗೆ ರಾಜ್ಯಪಾಲರು ಮತ್ತೊಮ್ಮೆ ಜುಲೈ 3ರಂದು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಜುಲೈ 7ರಂದು ಹಣಕಾಸು ಖಾತೆಯನ್ನೂ ಹೊಂದಿರುವ ಸಿಎಂ ಸಿದ್ದರಾಮಯ್ಯ ಅವರು 2023 –24ನೇ ಸಾಲಿಗೆ ಬಜೆಟ್ ಮಂಡನೆ ಮಾಡುತ್ತಿದ್ದಾರೆ. ಸದ್ಯದ ತೀರ್ಮಾನದಂತೆ ಜುಲೈ 14ರವರೆಗೆ ಅಧಿವೇಶನ ನಡೆಯಲಿದೆ. ಬಿಜೆಪಿ ಸರಕಾರದ ಅವಧಿಯ ವಿವಾದಿತ ಹಾಗೂ ಜನವಿರೋಧಿ ಕಾಯಿದೆಗಳನ್ನು ಹಿಂಪಡೆಯುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಅಂತೆಯೇ, ಸಿಎಂ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯ 2ನೇ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡಿರುವ ಮಹತ್ವದ ತೀರ್ಮಾನಗಳಂತೆ 'ಕರ್ನಾಟಕ ಧಾರ್ಮಿಕ ಹಕ್ಕು ಸಂರಕ್ಷಣಾ ಹಕ್ಕು ಅಧಿನಿಯಮ–2022' (ಮತಾಂತರ ನಿಷೇಧ ಕಾಯಿದೆ) ತಿದ್ದುಪಡಿ ವಿಧೇಯಕವನ್ನು ಮಂಡಿಸಲಾಗುತ್ತಿದೆ. ಜತೆಗೆ, ರೈತ ಸಮುದಾಯದ ವಿರೋಧಿ ಹಾಗೂ ವರ್ತಕರ ಓಲೈಕೆ ತೀರ್ಮಾನ ಎಂದು ▶ 5ನೇ ಪುಟಕ್ಕೆ

ಮಂಡನೆಯಾಗಲಿರುವ ಪ್ರಮುಖ ವಿಧೇಯಕಗಳು

- 'ಕರ್ನಾಟಕ ಧಾರ್ಮಿಕ ಹಕ್ಕು ಸಂರಕ್ಷಣಾ ಹಕ್ಕು ಅಧಿನಿಯಮ–2022' (ಮತಾಂತರ ನಿಷೇಧ ಕಾಯಿದೆ)
- ಎಪಿಎಂಸಿ ಕಾಯಿದೆ ತಿದ್ದುಪಡಿ ವಿಧೇಯಕ
- ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ
- ಸರಕಾರಿ ವ್ಯಾಜ್ಯಗಳ ನಿರ್ವಹಣೆ ವಿಧೇಯಕ
- ಕರ್ನಾಟಕ ಅಗ್ನಿಶಾಮಕ ಮತ್ತು ಸುರಕ್ಷತಾ (ತಿದ್ದುಪಡಿ) ವಿಧೇಯಕ

ಜಾತಿ ಗಣತಿ ವರದಿ ಸ್ವೀಕರಿಸುತ್ತೇವೆ, ಐದೂ ಗ್ಯಾರಂಟಿ ಜಾರಿ ಮಾಡುತ್ತೇವೆ

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಾಖಾ ಮಠದ ಭೂಮಿಪೂಜೆ ಸಲ್ಲಿಸಿ ಸಿಎಂ ಸಿದ್ದರಾಮಯ್ಯ



ಬೆಂಗಳೂರು,ಜು.2–ಜಾತಿ ಗಣತಿಯನ್ನು ಪಡೆಯಬೇಡ ಎಂದು ಆಗ ಪುಟ್ಟರಂಗಶೆಟ್ಟಿಯವರಿಗೆ ಹೇಳಿದ್ದೇ ಆಗಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರು. ಆದರೆ ನಾವು ಜಾತಿಗಣತಿ ವರದಿ ಸ್ವೀಕರಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಾಖಾ ಮಠದ ಭೂಮಿ ಪೂಜೆಯನ್ನು ನೆರವೇರಿಸಿ ಅವರು ಮಾತನಾಡಿದರು. ಎಲ್ಲಾ ಶೋಷಿತ ಸಮುದಾಯಗಳಿಗೂ ಮಹಾಸಂಸ್ಥಾನ ಆಗಬೇಕು ಎಂಬ ಉದ್ದೇಶದಿಂದ ಕಾಗಿನೆಲೆ ಮಹಾಸಂಸ್ಥಾನವನ್ನು ಸ್ಥಾಪಿಸಲಾಗಿದೆ. ಆದ್ದರಿಂದ ಇದು ಕೇವಲ ಒಂದು ಜಾತಿ ಅಥವಾ ಸಮಾಜದ ಮಠವಲ್ಲ, ಎಲ್ಲಾ ಶೋಷಿತ ಸಮಾಜಗಳಿಗೆ ಸೇರಿದ ಮಹಾ ಸಂಸ್ಥಾನ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಶೋಷಿತ ಸಮುದಾಯಗಳಿಗೆ ಧ್ವನಿ ಆಗುವ ಉದ್ದೇಶದಿಂದ ರಾಜ್ಯಾದ್ಯಂತ ಪ್ರವಾಸ ಮಾಡಿ ಸಮುದಾಯವನ್ನು ▶ 5ನೇ ಪುಟಕ್ಕೆ

ಗ್ಯಾರಂಟಿಗಳನ್ನು ಈಡೇರಿಸ್ತಾರೆ, ನುಡಿದಂತೆ ನಡೆಯುತ್ತಾರೆ

ಬೆಂಗಳೂರು, ಜು.2– ಸಿದ್ದರಾಮಯ್ಯ, ಗ್ಯಾರಂಟಿ ಈಡೇರಿಸದೇ ಮಾತು ತಪ್ಪಿದ ನಾಯಕ ಎಂದು ಬಿಜೆಪಿ ನಾಯಕರು ಪ್ರತಿಭಟನೆಗೆ ಮುಂದಾಗಿದ್ದರೇ ಇತ್ತ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಮಾತ್ರ ಸಿದ್ದರಾಮಯ್ಯ ನುಡಿದಂತೆ ನಡೆಯುವವರು, ಗ್ಯಾರಂಟಿಗಳನ್ನು ಜಾರಿ ಮಾಡಿಯೇ ಮಾಡುತ್ತಾರೆ ಎಂದು ಹಾಡಿ ಹೊಗಳಿದ್ದಾರೆ.

ಕಾಗಿನೆಲೆ ಮಹಾ ಸಂಸ್ಥಾನ ಮಠದ ಶಾಖಾ ಮಠದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೇದಿಕೆ ಮೇಲಿದ್ದ ಸಿದ್ದರಾಮಯ್ಯರನ್ನು ನೋಡಿ ತಮ್ಮ ಭಾಷಣದ ಆರಂಭದಲ್ಲೇ, ನಮ್ಮ ನಿಮ್ಮೆಲ್ಲರ ನೆಚ್ಚಿನ ನಾಯಕ, ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಹೊಗಳಿದರು. ಸಿದ್ದರಾಮಯ್ಯರನ್ನು ಜನಪ್ರಿಯ ಮುಖ್ಯಮಂತ್ರಿ ಎನ್ನುತ್ತಿದ್ದಂತೆ ನೆರೆದಿದ್ದ ಜನರೆಲ್ಲಾ ಜಯಘೋಷ ಮೊಳಗಿಸಿದರು.

ಬಳಿಕ ಮಾತನಾಡಿದ ಅವರು, ಸಿದ್ದರಾಮಯ್ಯ ಅವಧಿಯಲ್ಲಿ ನಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಸಿಕ್ಕಿದೆ. ಈ ಕ್ಷೇತ್ರದ ಅಭಿವೃದ್ಧಿಗೆ ಯಾವತ್ತೂ ಸಹ ಹಣ ಇಲ್ಲ ಎಂದು ಹೇಳಿಲ್ಲ. ಅವರ ಅನುದಾನದಲ್ಲಿ ಬೆಳೆದು 2ನೇ ಬಾರಿ ಶಾಸಕನಾದೆ. ಪಕ್ಷಾಂತರ ಹೋಗಿದ್ದರೂ ನಾನು ಯಾವತ್ತೂ ಸಿದ್ದರಾಮಯ್ಯನವರನ್ನು ಮರೆತಿಲ್ಲ. ನುಡಿದಂತೆ ನಡೆದ ವ್ಯಕ್ತಿ ಸಿದ್ದರಾಮಯ್ಯ. ರಾಜ್ಯದ ಜನರ ನಾಡಿ ಮಿಡಿತ ಅವರಿಗೆ ಗೊತ್ತಿದೆ ಎಂದರು.

ರಾಜ್ಯದಲ್ಲಿ YST, VST Tax ಜಾರಿಗೆ ಬಂದಿದೆ

ಹೆಚ್‌ಡಿಕೆ ಹೊಸ ಬಾಂಬ್

ಬೆಂಗಳೂರು: ಕಾಂಗ್ರೆಸ್ ಸರ್ಕಾರದಲ್ಲಿ ವೈಎಸ್‌ಟಿ ಟ್ಯಾಕ್ಸ್ ಮತ್ತು ವಿಎಸ್‌ಟಿ ಟ್ಯಾಕ್ಸ್ ಶುರುವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಬಾಂಬ್ ಸಿಡಿಸಿದ್ದಾರೆ. ಕಳೆದ ವಾರ ಸರ್ಕಾರದ ವಿರುದ್ಧ ವರ್ಗಾವಣೆ ದಂಧೆ ಬಾಂಬ್ ಸಿಡಿಸಿದ್ದ ಅವರು, ಸರ್ಕಾರದ ವಿರುದ್ಧ ವರ್ಗಾವಣೆ ಆರೋಪವನ್ನು ಮುಂದುವರೆಸಿದ್ದಾರೆ.

ಜೆಪಿ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಹೊಸ ಟ್ಯಾಕ್ಸ್ ಜಾರಿಯಾಗಿದೆ. ದೇಶದಲ್ಲಿ ಜಿಎಸ್‌ಟಿ ಟ್ಯಾಕ್ಸ್ ಇರುವ ಹಾಗೆ ಈ ಸರ್ಕಾರದಲ್ಲಿ ವೈಎಸ್‌ಟಿ ಮತ್ತು ವಿಎಸ್‌ಟಿ




ಟ್ಯಾಕ್ಸ್ ಸಂಗ್ರಹವಾಗುತ್ತಿದೆ. ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ವೈಎಸ್‌ಟಿ ಟ್ಯಾಕ್ಸ್ ವಸೂಲಿ ಮಾಡುತ್ತಿದ್ದಾರೆ. ಅದೇ ರೀತಿ ವೇಣುಗೋಪಾಲ್, ಸಿದ್ದರಾಮಯ್ಯ ಅವರ ವಿಎಸ್‌ಟಿ ಟ್ಯಾಕ್ಸ್ ಕೂಡ ಸಂಗ್ರಹವಾಗುತ್ತಿದೆ ಎಂದು ಆರೋಪಿಸಿದ್ದಾರೆ. ನಾನು ಸಿಎಂ ಆಗಿದ್ದಾಗ 5 ರೂ. ಕೂಡ ತೆಗೆದುಕೊಳ್ಳದೆ ವರ್ಗಾವಣೆ ಮಾಡಿದ್ದೇನೆ. ನನಗೆ ನೈತಿಕತೆ ಇದೆ. ನಾನು ಭಯ ಬೀಳುವ ಅಗತ್ಯ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧವೂ ಕಿಡಿಕಾರಿದ್ದಾರೆ.

ಬಿಜೆಪಿಯಲ್ಲಿ ವಿಪಕ್ಷ ನಾಯಕನ ಆಯ್ಕೆ ಕಗ್ಗಂಟು

ದೆಹಲಿಯಲ್ಲಿ ಅಮಿತ್ ಶಾ, ಜೆ.ಪಿ.ನಡ್ಡಾ ಜೊತೆ ಮಾಜಿ ಸಿಎಂ ಯಡಿಯೂರಪ್ಪ ಚರ್ಚೆ

● ಇಂದು ವೀಕ್ಷಕರಾಗಿ ವಿನೋದ್ ದಾವ್ಡೆ, ಮನ್ಸುಖ್ ಮಾಂಡವಿಯ ಬೆಂಗಳೂರಿಗೆ ● ಶಾಸಕರೊಂದಿಗೆ ಚರ್ಚಿಸಿ ಹೈಕಮಾಂಡ್‌ಗೆ ವೀಕ್ಷಕರ ವರದಿ



ಬೆಂಗಳೂರು, ಜು.2–ಬಿಜೆಪಿಯಲ್ಲಿ ವಿಧಾನಸಭೆ ವಿಪಕ್ಷ ನಾಯಕನ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದ್ದು, ಶಾಸಕರ ಅಭಿಪ್ರಾಯ ಪಡೆಯಲು ನಾಳೆ (ಸೋಮವಾರ) ದೆಹಲಿಯಿಂದ ಪಕ್ಷದ ರಾಷ್ಟ್ರೀಯ ಮುಖಂಡರಾದ ವಿನೋದ್ ದಾವ್ಡೆ ಮತ್ತು ಮನ್ಸುಖ್ ಮಾಂಡವಿಯ ವೀಕ್ಷಕರಾಗಿ ಆಗಮಿಸಲಿದ್ದಾರೆ.

ವಿಧಾನಸಭೆ ವಿಪಕ್ಷ ನಾಯಕರ ಆಯ್ಕೆಗಾಗಿ ಕಸರತ್ತು ನಡೆಸುತ್ತಿರುವ ಬಿಜೆಪಿ ಹೈಕಮಾಂಡ್ ಇಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪರನ್ನು ದೆಹಲಿಗೆ ಕರೆಸಿಕೊಂಡಿತ್ತು. ಇಂದು ಬೆಳಗ್ಗೆ ದೆಹಲಿ ತಲುಪಿದ ಯಡಿಯೂರಪ್ಪ ಅವರು ಕೃಷ್ಣ ಮೆನನ್ ಮಾರ್ಗದಲ್ಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ನಿವಾಸ ಹಾಗೂ ಮೋತಿಲಾಲ್ ನೆಹರು ಮಾರ್ಗದಲ್ಲಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನಿವಾಸಕ್ಕೆ ತೆರಳಿ ಚರ್ಚೆ ನಡೆಸಿದರು. ನಡ್ಡಾ ಭೇಟಿ ನಂತರ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಯಡಿಯೂರಪ್ಪ 2ನೇ ಸುತ್ತಿನ ಚರ್ಚೆ ನಡೆಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ಬಿಜೆಪಿ ರಾಷ್ಟ್ರೀಯ ▶ 5ನೇ ಪುಟಕ್ಕೆ

ಮಹಾರಾಷ್ಟ್ರ ರಾಜಕಾರಣದಲ್ಲಿ ಸಂಚಲನ

ಶರದ್ ಪವಾರ್ ಎನ್‌ಸಿಪಿ ಇಬ್ಭಾಗ

● ವಿಪಕ್ಷ ನಾಯಕನಾಗಿದ್ದ ಎನ್‌ಸಿಪಿ ಶಾಸಕ ಡಿಸಿಎಂ ಆಗಿ ಪ್ರಮಾಣ ವಚನ ● ಎನ್‌ಸಿಪಿಯ 8 ಶಾಸಕರು ಸಚಿವರಾದರು

ಮುಂಬೈ,ಜು.2–ಮಹಾರಾಷ್ಟ್ರ ರಾಜಕಾರಣದಲ್ಲಿ ಒಮ್ಮೆಲೇ ಸಂಚಲನ ಉಂಟಾಗಿದೆ. ಶರದ್ ಪವಾರ್ ಅವರ ಎನ್‌ಸಿಪಿ ಇಬ್ಭಾಗವಾಗಿದ್ದು, ಮಧ್ಯಾಹ್ನದವರೆಗೆ ವಿಪಕ್ಷ ನಾಯಕನಾಗಿದ್ದ ಎನ್‌ಸಿಪಿ ಶಾಸಕ ಅಜಿತ್ ಪವಾರ್ ಕೆಲವೇ ಗಂಟೆಗಳಲ್ಲಿ ಏಕನಾಥ್ ಶಿಂಧೆ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇವರೊಂದಿಗೆ ಎನ್‌ಸಿಪಿಯ 8 ಶಾಸಕರೂ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.



ಮಹಾರಾಷ್ಟ್ರದ ವಿಪಕ್ಷ ನಾಯಕನಾಗಿದ್ದ ಎನ್‌ಸಿಪಿಯ ಅಜಿತ್ ಪವಾರ್ ಭಾನುವಾರ ಮಧ್ಯಾಹ್ನ 1.30ರಲ್ಲಿ ಶಾಸಕಾಂಗ ಪಕ್ಷದ ಸಭೆ ಕರೆದಿದ್ದರು. ನಂತರ ಕೆಲ ಶಾಸಕರೊಂದಿಗೆ ರಾಜಭವನಕ್ಕೆ ತೆರಳಿ ಏಕನಾಥ್ ಶಿಂಧೆ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇವರಿಗೆ ಮತ್ತು 8 ಎನ್‌ಸಿಪಿ ಶಾಸಕರಾದ ಮಾಜಿ ಗೃಹ ಸಚಿವ ದಿಲೀಪ್ ವಾಲ್ಸೆ, ಹಸನ್ ಮುಶ್ರೀಫ್, ಸಂಜಯ್ ಬನ್ಸೋಡೆ, ಅದಿತಿ ತಟ್ಕೆರೆ, ಧರ್ಮರಾವ್, ಧನಂಜಯ್ ಮುಂಡೆ ಅವರಿಗೆ ರಾಜ್ಯಪಾಲ ರಮೇಶ್ ಬೈಸ್ ಪ್ರಮಾಣ ವಚನ ಬೋಧಿಸಿದರು. ▶ 5ನೇ ಪುಟಕ್ಕೆ

ಐಷರ್ ವಾಹನ–ಸ್ವಿಫ್ಟ್ ಕಾರು ಮುಖಾಮುಖಿ ಡಿಕ್ಕಿ

ಮೈಸೂರಿನ ಹೋಟೆಲ್ ಮ್ಯಾನೇಜರ್ ಸಜೀವ ದಹನ

ಗುಂಡ್ಲುಪೇಟೆ, ಜು.2–ಐಷರ್ ವಾಹನ ಮತ್ತು ಸ್ವಿಫ್ಟ್ ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಕಾರಿಗೆ ಬೆಂಕಿ ಹೊತ್ತಿಕೊಂಡು ಮೈಸೂರಿನ ಹೋಟೆಲ್‌ವೊಂದರ ಮ್ಯಾನೇಜರ್ ಸಜೀವ ದಹನವಾದ ದಾರುಣ ಘಟನೆ ಗುಂಡ್ಲುಪೇಟೆ ತಾಲೂಕು ಹಿರೀಕಾಟಿ ಗೇಟ್ ಬಳಿ ಶನಿವಾರ ರಾತ್ರಿ ಸಂಭವಿಸಿದೆ.



ಮುಜಾಮಿಲ್ ಅಹಮದ್

ಮೈಸೂರಿನ ಸಿದ್ದಿಖಿನಗರ ನಿವಾಸಿಯಾಗಿರುವ ಹೋಟೆಲ್ ಮ್ಯಾನೇಜರ್ ಮುಜಾಮಿಲ್ ಅಹಮದ್(35) ಅಪಘಾತದಲ್ಲಿ ಸಜೀವ ದಹನವಾದವರಾಗಿದ್ದು, ಇವರು ಶನಿವಾರ ರಾತ್ರಿ ಗುಂಡ್ಲುಪೇಟೆ ಕಡೆಗೆ ತಮ್ಮ ಸ್ವಿಫ್ಟ್ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಎದುರಿಗೆ ಬಂದ ಐಷರ್ ವಾಹನ ಮುಖಾಮುಖಿಯಾಗಿ ಡಿಕ್ಕಿ ಹೊಡೆದ ರಭಸಕ್ಕೆ ಕಾರಿಗೆ ಬೆಂಕಿ ಹೊತ್ತಿಕೊಂಡಿದೆ. ಕಾರಿನಿಂದ ಹೊರ ಬರಲಾಗದೆ ಮುಜಾಮಿಲ್ ಅಹಮದ್ ಸಜೀವ ದಹನವಾಗಿದ್ದಾರೆ. ಅಪಘಾತ ಸಂಭವಿಸುತ್ತಿದ್ದಂತೆಯೇ ಐಷರ್ ವಾಹನದಲ್ಲಿದ್ದವರು ಹೊರಗೆ ಹಾರಿ ಅಪಾಯದಿಂದ ಪಾರಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಹರಸಾಹಸ ಪಟ್ಟು ಬೆಂಕಿ ನಂದಿಸಿ ಮುಜಾಮಿಲ್ ಅಹಮದ್ ಮೃತದೇಹವನ್ನು ಹೊರ ತೆಗೆದಿದ್ದಾರೆ. ಘಟನಾ ಸ್ಥಳಕ್ಕೆ ಚಾಮರಾಜನಗರ ಜಿಲ್ಲಾ ಎಸ್ಪಿ ಪದ್ಮಿನಿ ಸಾಹೋ, ಬೇಗೂರು ಠಾಣೆ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಚರಣ್ ಗೌಡ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಬಿಲ್ ಬಾಕಿ ಇದ್ದರೂ ಗೃಹಜ್ಯೋತಿಗೆ ಅರ್ಹರು

ಬೆಂಗಳೂರು: 'ಗ್ರಾಹಕರು ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದರೂ 'ಗೃಹಜ್ಯೋತಿ' ಯೋಜನೆಯ ಪ್ರಯೋಜನ ಸಿಗಲಿದೆ. ಆದರೆ, ಹಿಂಬಾಕಿ ಮೊತ್ತವನ್ನು ಸೆ.30ರೊಳಗೆ (3 ತಿಂಗಳು ಕಾಲಾವಕಾಶ) ಪಾವತಿಸಬೇಕು' ಎಂದು ಇಂಧನ ಇಲಾಖೆ ತಿಳಿಸಿದೆ. ಗೃಹಜ್ಯೋತಿ ಯೋಜನೆಗೆ ಗ್ರಾಹಕರು ಜು.25ರೊಳಗೆ ನೋಂದಾಯಿಸಿಕೊಂಡರೆ, ▶ 5ನೇ ಪುಟಕ್ಕೆ

ಮೈಸೂರು ಸಾಹಿತ್ಯೋತ್ಸವದಲ್ಲಿ 'ಜ್ಞಾನಪೀಠಕ್ಕೆ ಜಾನಪದದ ಅರಿವಿನ ಮೆರುಗು' ಶೀರ್ಷಿಕೆಯಡಿ ಚರ್ಚಾಗೋಷ್ಠಿ

ಪ್ರಪಂಚಕ್ಕೆ ಮೌಖಿಕ ಕಥೆ ಹೇಳುವ ಬಗೆ ಕಲಿಸಿದ್ದು ಭಾರತ

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ

ಮೈಸೂರು, ಜು.2(ಪಿಎಂ)– ಜಾನಪದ ಬಹಳ ಸ್ವತಂತ್ರ. ಅಂದರೆ ಮೌಖಿಕ ಕಥೆ ಒಂದೇ ರೀತಿಯಲ್ಲಿ ಉಳಿಯುವುದಿಲ್ಲ. ಅದು ಬದಲಾವಣೆ ಕಾಣುತ್ತದೆ. ಇದು ಮೌಖಿಕತೆಯ ಶ್ರೇಷ್ಠತೆ. ಇದನ್ನು ಇಡೀ ಪ್ರಪಂಚಕ್ಕೆ ಕಲಿಸಿದ್ದು ಭಾರತ. ಹೀಗಾಗಿಯೇ 2 ಲಕ್ಷ ಕಥೆಗಳು ನಮ್ಮಲ್ಲಿವೆ. ಅದೇ ಭಾರತೀಯ ಕಥಾ ತಂತ್ರದ ವಿಶಿಷ್ಟತೆ ಎಂದು ಪದ್ಮಭೂಷಣ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನ ಗಾರ್ಡೇನಿಯಾ ಆವರಣದಲ್ಲಿ ಮೈಸೂರು ಲಿಟರರಿ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2016 ವತಿಯಿಂದ ಹಮ್ಮಿಕೊಂಡಿದ್ದ 7ನೇ ಆವೃತ್ತಿಯ ಮೈಸೂರು ಸಾಹಿತ್ಯೋತ್ಸವದ (ಮೈಸೂರು ಲಿಟರರಿ ಫೆಸ್ಟಿವಲ್) ಅಂಗವಾಗಿ 'ಜ್ಞಾನಪೀಠಕ್ಕೆ ಜಾನಪದದ ಅರಿವಿನ ಮೆರುಗು' ಶೀರ್ಷಿಕೆಯಡಿ ಭಾನುವಾರ ನಡೆದ ಚರ್ಚಾಗೋಷ್ಠಿಯಲ್ಲಿ ಸಭಿಕರು ಹಾಗೂ ಕಾರ್ಯಕ್ರಮದ ನಿರೂಪಕರಾಗಿದ್ದ ಪತ್ರಕರ್ತೆ, ಲೇಖಕಿ ಪ್ರೀತಿ ನಾಗರಾಜ್ ಅವರ ಪ್ರಶ್ನೆಗಳಿಗೆ ಜಾನಪದ ತಜ್ಞರೂ ಆದ ಅವರು ಪ್ರತಿಕ್ರಿಯಿಸಿದರು.



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನ ಆವರಣದಲ್ಲಿ ಮೈಸೂರು ಲಿಟರರಿ ಫೆಸ್ಟಿವಲ್‌ನ ಅಂಗವಾಗಿ ನಡೆದ ಚರ್ಚಾಗೋಷ್ಠಿಯಲ್ಲಿ ಪದ್ಮಭೂಷಣ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಪದ್ಮಶ್ರೀ ಪುರಸ್ಕೃತ ಹಿರಿಯ ರಂಗಕರ್ಮಿ ಬಿ.ಜಯಶ್ರೀ, ಪತ್ರಕರ್ತೆ ಪ್ರೀತಿ ನಾಗರಾಜ್ ಪಾಲ್ಗೊಂಡಿದ್ದರು.

'ಜಾನಪದ' ನಮ್ಮ ಸಮಕಾಲೀನ ಬರಹಗಳು ಅಥವಾ ರಂಗಭೂಮಿಯಲ್ಲಿ ಕಡಿಮೆಯಾಗುತ್ತಿದೆಯೇ ಎಂಬ ಪ್ರೀತಿ ನಾಗರಾಜ್ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕಂಬಾರರು, ಅದು ಹಾಗಲ್ಲ, 'ಜಾನಪದ' ಮೌಖಿಕ ಪರಂಪರೆ. ಇದು ನಿರಂತರ ಬದಲಾವಣೆ ಪ್ರಕ್ರಿಯೆಗೆ ಒಳಪಡುತ್ತದೆ. ಆದರೆ ಪಠ್ಯದಲ್ಲಿರುವುದು ಬದಲಾವಣೆ ಆಗುವುದಿಲ್ಲ. ಒಂದು ಕಥೆ ಬರವಣಿಗೆಯಲ್ಲಿ ಇಲ್ಲದೇ ಮೌಖಿಕವಾಗಿದ್ದರೆ, ಎಷ್ಟು ಬಾರಿ ಹೇಳುತ್ತೇವೆಯೋ ಅಷ್ಟು ಬಾರಿ ಬದಲಾವಣೆಗೆ ಒಳಗಾಗುತ್ತದೆ. ಆ ಮೂಲಕ ಹೊಸ ಕಥೆ ಸೃಷ್ಟಿಯಾಗುತ್ತದೆ. ಅದೇ ಸೃಜನಶೀಲತೆ ಎಂದು ತಿಳಿಸಿದರು.

'ಜಾನಪದ ರಂಗಭೂಮಿ' ಬಹಳ ಸ್ವತಂತ್ರ ಅಂದರೆ ಒಮ್ಮೆ ಪ್ರದರ್ಶನ ಕಂಡ ನಾಟಕ ಮತ್ತೊಮ್ಮೆ ಪ್ರದರ್ಶನ ಕಾಣುವಾಗ ಅದೇ ರೀತಿ ಇರಬೇಕೆಂದಿಲ್ಲ. ಪ್ರೇಕ್ಷಕರ ಪ್ರತಿಕ್ರಿಯೆ ಆಧಾರದಲ್ಲಿ ಅದು ಬದಲಾವಣೆ ಕಾಣುತ್ತದೆ. ಬರವಣಿಗೆಯಲ್ಲಿ ಇಲ್ಲದ ಕಥೆಯು ಬಾಯಿಂದ ಬಾಯಿಗೆ ಬರುತ್ತಾ ನಿರಂತರ ಬದಲಾವಣೆಯಾಗುತ್ತದೆ ಎಂದರು.

ಕಂಬಾರರ 'ಕರಿಮಾಯಿ' ಕಾದಂಬರಿಯನ್ನು ಪದ್ಮಶ್ರೀ ಪುರಸ್ಕೃತ ಹಿರಿಯ ರಂಗಕರ್ಮಿ ಬಿ.ಜಯಶ್ರೀ, ಪ್ರತಿಭಾ ಅವರೊಂದಿಗೆ ರಂಗರೂಪಕ್ಕೆ ಅಳವಡಿಸಿದ್ದಾರೆ. ಈ ನಾಟಕ 48 ವರ್ಷಗಳಾದರೂ ಇಂದಿಗೂ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ ಎಂದು ತಿಳಿಸಿದ ಪ್ರೀತಿ ನಾಗರಾಜ್, 'ಕರಿಮಾಯಿ' ಬರೆಯುವಾಗ ನಿಮಗೆ ಈ ಕಾದಂಬರಿ ಇಷ್ಟು ಸುದೀರ್ಘ ವರ್ಷದಲ್ಲಿಯೂ ನಾಟಕವಾಗಿ ಪ್ರದರ್ಶನ ಕಾಣುತ್ತದೆ ಎಂಬ ನಿರೀಕ್ಷೆ ಇತ್ತೇ? ಎಂದು ಚಂದ್ರಶೇಖರ ಕಂಬಾರರನ್ನು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಂಬಾರರು, ನಿರೀಕ್ಷೆ ಇರಲಿಲ್ಲ. ಆದರೆ ಅದನ್ನು ಸಾಧ್ಯ ಮಾಡಿದವರು ಬಿ.ಜಯಶ್ರೀ. ಕರಿಮಾಯಿ ಬರೆಯುವಾಗ ನನ್ನದು ಚಿಕ್ಕ ವಯಸ್ಸು, ಬರೆಯಲು ಅಭ್ಯಾಸ ಮಾಡುತ್ತಿದ್ದ ಕಾಲ. ಶಾಲೆ ಕಲಿಯುತ್ತಿದ್ದರೂ ಪ್ರತಿದಿನ ದನ ಕಾಯಲು ಹೋಗುತ್ತಿದ್ದೆ. ಈ ಸಂದರ್ಭದಲ್ಲಿ ನನ್ನೊಂದಿಗೆ ನಾಲ್ಕೈದು ಸ್ನೇಹಿತರೂ ಇರುತ್ತಿದ್ದರು. ಎಲ್ಲರೂ ನಾವು ನೋಡಿದ ಬಯಲಾಟ ಆಡುತ್ತಿದ್ದೆವು. ಆ ಮೂಲಕ ನಾವು ಅಷ್ಟೂ ಮಂದಿ ಕ್ರಿಯಾಶೀಲರಾಗಿದ್ದೆವು. ಬೇಕಾದಷ್ಟು ಹಾಡುಗಳನ್ನು ಸೃಷ್ಟಿ ಮಾಡುತ್ತಿದ್ದೆವು. ನಮ್ಮ ಊರಿನವರಲ್ಲೇ ಯಾರನ್ನಾದರೂ ನಮ್ಮ ಕಥಾವಸ್ತು ಮಾಡಿಕೊಳ್ಳುತ್ತಿದ್ದೆವು ಎಂದು ಹೇಳಿದರು.

ಆಗಿನ ಕಾಲ ಎಂಥದ್ದು ಎಂದರೆ, ಆಗ ನಡತೆ ಸರಿಯಿಲ್ಲವೆಂದರೆ ಅಂತಹ ಹೆಣ್ಣು ಮಕ್ಕಳನ್ನು ಬಹಳ ಅಸಹ್ಯಕರವಾಗಿ ನಡೆಸಿಕೊಳ್ಳುತ್ತಿದ್ದರು. ಊರಿನಿಂದ ಹೊರಗೆ ಹಾಕುತ್ತಿದ್ದರು. ಆಕೆಯನ್ನು ಹೆಣ್ಣು ರಾಕ್ಷಸಿ ಎನ್ನುತ್ತಿದ್ದರು. ಒಂದು ದಿನ ಊರು ಹೊರಗಿನ ಹಾಳು ಗುಡಿಯಲ್ಲಿ ಇಂತಹ ಒಬ್ಬ ಹೆಣ್ಣು ಮಗಳಿಗೆ ಹೆರಿಗೆ ▶ 5ನೇ ಪುಟಕ್ಕೆ

[ಹೆಚ್ಚಿನ ಸಚಿತ್ರ ವರದಿ ಒಳಪುಟಗಳಲ್ಲಿ]

ಉತ್ಸಾಹದ ಅಲೆ ಏಳಿಸಿದ ಜಯಶ್ರೀ ರಂಗಗೀತೆ...

'ಸಾವಿರದ ಶರಣವ್ವ ಕರಿಮಾಯಿ ತಾಯೆ... ತಾಯೇ...' ಹೀಗೆ ಕರಿಮಾಯಿ ನಾಟಕದ ಈ ಗೀತೆಯನ್ನು ತಮ್ಮ ಕಂಚಿನ ಕಂಠದಲ್ಲಿ ಹಿರಿಯ ರಂಗಕರ್ಮಿ ಬಿ.ಜಯಶ್ರೀ ಸಾದರಪಡಿಸಿದರು. ಚರ್ಚಾಗೋಷ್ಠಿ ಕೊನೆಯಲ್ಲಿ ಪ್ರೇಕ್ಷಕರ ಕೋರಿಕೆ ಮೇರೆಗೆ ಅವರ ಈ ರಂಗಗೀತೆ ಪ್ರಸ್ತುತಪಡಿಸಿದರು. ಆ ಮೂಲಕ ಇಡೀ ಆವರಣದಲ್ಲಿ ಉತ್ಸಾಹದ ಅಲೆ ಏಳಿಸಿದರು. ರೋಮಾಂಚನಗೊಂಡ ಸಭಿಕರು ಚಪ್ಪಾಳೆಯ ಮಳೆಯೊಂದಿಗೆ ಅಭಿಮಾನದ ಹೊಳೆ ಹರಿಸಿದರು.

ಯಾವಾಗ ತಿಂದರೂ ಅದು ನಾನೇ!

ಚಿಕ್ಕಂದರಲ್ಲಿ ನಾನು ದನ ಕಾಯಲು ಹೋಗುವಾಗ, ನಮ್ಮವ್ವ ನನಗೆ ನಾಲ್ಕು ರೊಟ್ಟಿ ಕೊಡುತ್ತಿದ್ದರು. ಈಗ ಎರಡು ತಿನ್ನು, ಬರುವಾಗ ಎರಡು ತಿನ್ನು ಎಂದು ಹೇಳಿ ಕೊಡುತ್ತಿದ್ದರು. ಆದರೆ ನಾನು ದನ ಕಾಯಲು ಹೋದಾಗಲೇ ನಾಲ್ಕು ರೊಟ್ಟಿ ತಿಂದು ಬಿಡುತ್ತಿದ್ದೆ. ಏಕೆಂದರೆ ಆಗ ತಿನ್ನುವವನೂ ನಾನೇ, ಈಗ ತಿನ್ನುವವನೂ ನಾನೇ ಎಂದು ತಿಂದು ಬಿಡುತ್ತಿದ್ದೆ ಎಂದ ಕಂಬಾರರು, ಹಾಸ್ಯ ಚಟಾಕಿ ಹಾರಿಸಿ, ಸಭಿಕರಲ್ಲಿ ನಗೆಯ ಬುಗ್ಗೆ ಏಳಿಸಿದರು.

ಮೈಸೂರು ಮಿತ್ರ

ರಾಮಚಂದ್ರಯ್ಯ, ನರಸಿಂಹರಾಜು ಅವರಿಗೆ ಮುಕ್ತ ವಿವಿ ಗೌರವ ಡಾಕ್ಟರೇಟ್ ಪ್ರದಾನ





ಮೈಸೂರು ಕೆಎಸ್‌ಒಯುನ 18ನೇ ಘಟಿಕೋತ್ಸವದಲ್ಲಿ ಬೆಂಗಳೂರಿನ ಧನ್ವಂತರಿ ಎಜುಕೇಷನಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎನ್.ರಾಮಚಂದ್ರಯ್ಯ ಹಾಗೂ ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎಸ್.ಎನ್.ವೆಂಕಟಲಕ್ಷ್ಮಿ ನರಸಿಂಹರಾಜು ಅವರಿಗೆ ಡಿ.ಲಿಟ್ (ಗೌರವ ಡಾಕ್ಟರೇಟ್) ಪದವಿ ಪ್ರದಾನ ಮಾಡಲಾಯಿತು. (ಎಡದಿಂದ) ರಿಜಿಸ್ಟ್ರಾರ್ ಪ್ರೊ.ಕೆ.ಎಲ್.ಎನ್.ಮೂರ್ತಿ, ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ, ಕೆಎಸ್‌ಒಯು ರಿಜಿಸ್ಟ್ರಾರ್ (ಮೌಲ್ಯಮಾಪನ) ಪ್ರೊ.ಕೆ.ಬಿ.ಪ್ರವೀಣ, ಡೀನ್ (ಶೈಕ್ಷಣಿಕ) ಪ್ರೊ.ಲಕ್ಷ್ಮಿ ಚಿತ್ರದಲ್ಲಿದ್ದಾರೆ. ಪದಕ ಪಡೆದ ವಿಜೇತರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು. 2(ಆರ್‌ಕೆ)– ಬೆಂಗಳೂರಿನ ಧನ್ವಂತರಿ ಎಜುಕೇಷನಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎನ್.ರಾಮಚಂದ್ರಯ್ಯ ಹಾಗೂ ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎಸ್.ಎನ್. ವೆಂಕಟಲಕ್ಷ್ಮಿ ನರಸಿಂಹರಾಜು ಅವರಿಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ, ಗೌರವಿಸಿದೆ.

ಮೈಸೂರಿನ ಮುಕ್ತ ಗಂಗೋತ್ರಿಯ ಘಟಿಕೋತ್ಸವ ಭವನದಲ್ಲಿ ಇಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 18ನೇ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ರಾಮಚಂದ್ರಯ್ಯ ಹಾಗೂ ವೆಂಕಟಲಕ್ಷ್ಮಿ ನರಸಿಂಹರಾಜು ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ, ಅಭಿನಂದಿಸಿದರು.

ಕನ್ನಡ ಎಂ.ಎ. ಪದವಿಯಲ್ಲಿ ಎರಡು ಚಿನ್ನದ ಪದಕ ಗಳಿಸಿರುವ ಹೆಚ್.ಎಂ. ಸೌಭಾಗ್ಯ, ಉರ್ದು ಎಂಎಯಲ್ಲಿ 2 ಚಿನ್ನದ ಪದಕ ಗಳಿಸಿರುವ ಆಯೇಷಾ ಸಿದ್ದಿಕ್ ಕೌಸರ್, ಫಾತಿಮಾ ಜಹು, ಸಂಸ್ಕೃತ ಎಂಎ ಪದವಿಯಲ್ಲಿ ರ್‍ಯಾಂಕ್ ಪಡೆದಿರುವ 66 ವರ್ಷದ ಅತ್ಯಂತ ಹಿರಿಯ ಅಭ್ಯರ್ಥಿ ಎಸ್. ಅರ್ಧನಾರಿ ಅವರಿಗೆ ನಗದು ಬಹುಮಾನ, ನಾಲ್ವರು ಎಂಎ ಕನ್ನಡ ಪದವೀಧರರು, ಇಬ್ಬರು ಎಂಎ ಇಂಗ್ಲಿಷ್, ಇಬ್ಬರು ಎಂಎ ಹಿಂದಿ, ಇಬ್ಬರು ಎಂಎ ಉರ್ದು, ಮೂವರು ಎಂಎ ಸಂಸ್ಕೃತ, ಇಬ್ಬರು ಬಿಎ, 6 ಮಂದಿ ಎಂಎ ಇತಿಹಾಸ, ಇಬ್ಬರು ಎಂಎ ಇತಿಹಾಸ, ಇಬ್ಬರು ಎಂಎ ಅರ್ಥಶಾಸ್ತ್ರ, ನಾಲ್ವರು ಎಂಎ ರಾಜ್ಯಶಾಸ್ತ್ರ, ಇಬ್ಬರು ಎಂಎ ಸಮಾಜಶಾಸ್ತ್ರ ಸೇರಿದಂತೆ ವಿವಿಧ ವಿಷಯಗಳಲ್ಲಿ ರ್‍ಯಾಂಕ್ ಪಡೆದ ಒಟ್ಟು 52 ಅಭ್ಯರ್ಥಿಗಳಿಗೆ 44 ಚಿನ್ನದ ಪದಕ ಹಾಗೂ 27 ಮಂದಿಗೆ ನಗದು ಬಹುಮಾನಗಳನ್ನು ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಎಂಎ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ಪಡೆದಿರುವ ಏಕೈಕ ಮಹಿಳಾ ಅಭ್ಯರ್ಥಿ ಎನ್. ಭಾಗ್ಯಶ್ರೀ ಅವರಿಗೆ ಇದೇ ವೇಳೆ ಪಿಹೆಚ್.ಡಿ ಪದವಿ ಪ್ರದಾನ ಮಾಡಲಾಯಿತು. 2021–22ನೇ ಸಾಲಿನಲ್ಲಿ 4,281 ಮಹಿಳೆಯರು ಸೇರಿ 7057 ಮಂದಿ ಸ್ನಾತಕೋತ್ತರ ಪದವಿ, 959 ಮಹಿಳೆಯರು ಸೇರಿ 1,664 ಮಂದಿಗೆ ಸ್ನಾತಕ ಪದವಿ ಪ್ರಮಾಣಪತ್ರಗಳನ್ನು ನೀಡಲಾಯಿತು. ಒಟ್ಟಾರೆ 1 ಪಿಹೆಚ್.ಡಿ ಪದವಿ, 44 ಚಿನ್ನದ ಪದಕಗಳು, 27 ನಗದು ಬಹುಮಾನ ಸೇರಿದಂತೆ 8,722 ಅಭ್ಯರ್ಥಿಗಳು ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಂಡರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅವರು ಗಣ್ಯರನ್ನು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರಲ್ಲದೆ ಪ್ರಾಸ್ತಾವಿಕ ನುಡಿಗಳ ಮೂಲಕ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪ್ರಗತಿ ಬಗ್ಗೆ ಪರಿಚಯಿಸಿದರು.

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರು ಉಪಸ್ಥಿತರಿದ್ದು ಘಟಿಕೋತ್ಸವ ಭಾಷಣ ಮಾಡಿದರು. ಮುಕ್ತ ವಿವಿ ಕುಲಸಚಿವ ಪ್ರೊ. ಕೆಎಲ್‌ಎನ್ ಮೂರ್ತಿ, ಪರೀಕ್ಷಾಂಗ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಡೀನ್ (ಶೈಕ್ಷಣಿಕ) ಪ್ರೊ.ಲಕ್ಷ್ಮಿ, ವ್ಯವಸ್ಥಾಪನಾ ಮಂಡಳಿ ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು, ವಿಶ್ರಾಂತ ಕುಲಪತಿಗಳು, ಪ್ರಾಧ್ಯಾಪಕರು, ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಡಿಸಿಪಿ ಎಂ.ಮುತ್ತುರಾಜ್, ಎಸಿಪಿಗಳಾದ ಗಜೇಂದ್ರ ಪ್ರಸಾದ್, ಎಸ್.ಇ.ಗಂಗಾಧರಸ್ವಾಮಿ ನೇತೃತ್ವದಲ್ಲಿ ಕಾರ್ಯಕ್ರಮಕ್ಕೆ ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಉನ್ನತ ಶಿಕ್ಷಣ ಸಾಮಾಜಿಕ ಪರಿವರ್ತನೆಗೆ ಪ್ರಬಲ ಸಾಧನವಾಗಿದೆ

ಹೈಕೋರ್ಟ್ ನ್ಯಾಯಮೂರ್ತಿ ಅಶೋಕ ಎಸ್. ಕಿಣಗಿ ಅಭಿಮತ

ಮೈಸೂರು,ಜು.2(ಆರ್‌ಕೆ)–ಉನ್ನತ ಶಿಕ್ಷಣವು ಸಾಮಾಜಿಕ ಪರಿವರ್ತನೆಗೆ ಪ್ರಬಲ ಸಾಧನವಾಗಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಅಶೋಕ ಎಸ್.ಕಿಣಗಿ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕೆಎಸ್‌ಒಯು)ದ 18ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಘಟಿಕೋತ್ಸವ ಭಾಷಣ ಮಾಡಿದರು. ಶಿಕ್ಷಣವು ನಾಗರಿಕತೆಯ ಪ್ರಾರಂಭದಿಂದಲೂ ಇದೆ. ದೂರ ಶಿಕ್ಷಣದಿಂದಾಗಿ ದೇಶದ ಶಿಕ್ಷಣ ವ್ಯವಸ್ಥೆಯು ಹೊಸ ಆಯಾಮವನ್ನು ಪಡೆದುಕೊಂಡಿದೆಯಲ್ಲದೆ ವರ್ಧಿತ ಕಲಿಕೆ, ಸ್ವತಂತ್ರ ಅಧ್ಯಯನಕ್ಕೂ ಉಪಯುಕ್ತವಾಗಲಿದೆ. ದೂರ ಶಿಕ್ಷಣವು ಕೆಲವು ನ್ಯೂನತೆಗಳನ್ನು ಹೊಂದಿದ್ದರೂ ಸಹ ಅದರ ಪ್ರಾಯೋಗಿಕ ಮೌಲ್ಯವನ್ನು ಎಂದಿಗೂ ನಿರಾಕರಿಸುವಂತಿಲ್ಲ ಎಂದ ಅವರು, ಜ್ಞಾನದ ಸ್ಫೋಟ ಮತ್ತು ತಾಂತ್ರಿಕ ಪ್ರಗತಿಯ ಸಮಾಜದ ಹೆಚ್ಚಿನ ಭಾಗಕ್ಕೆ ಶಿಕ್ಷಣವನ್ನು ನೀಡಲಾಗಿದೆ ಎಂದರು.

ಮುಕ್ತ ವಿವಿಯು ಕಳೆದ ಎರಡೂವರೆ ದಶಕಗಳಲ್ಲಿ ದೂರ ಶಿಕ್ಷಣದ ಮೂಲಕ ದೇಶಾದ್ಯಂತ ಉನ್ನತ ಶಿಕ್ಷಣಕ್ಕೆ ಕೊಡುಗೆ ನೀಡಿದೆ. ಬೋಧಕ, ಬೋಧಕೇತರ ಸಿಬ್ಬಂದಿ, ಅಧಿಕಾರಿಗಳ ಪರಿಶ್ರಮದಿಂದಾಗಿ ವಿಶ್ವವಿದ್ಯಾನಿಲಯವು ನ್ಯಾಕ್ ಸಂಸ್ಥೆಯಿಂದ 'A+' ಮಾನ್ಯತೆ ಪಡೆದಿದೆ. ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಅವರ ಕ್ರಿಯಾತ್ಮಕ ನಾಯಕತ್ವದಲ್ಲಿ ಈ ವಿವಿವು ದೇಶದ ಪ್ರತಿಷ್ಠಿತ ವಿವಿಯಾಗಿ ಗುರ್ತಿಸಿಕೊಂಡಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಅಧ್ಯಯನ ಕ್ಷೇತ್ರದಲ್ಲಿ ಅತ್ಯುತ್ತಮ ಜ್ಞಾನ, ಕೌಶಲ್ಯ ತರಬೇತಿ ಪಡೆದು ನೀವು ನಿರ್ದಿಷ್ಟ ಗುರಿ ತಲುಪಬೇಕೆಂಬುದು ನನ್ನ ಆಶಯ. ಮುಕ್ತ ವಿವಿಯು ಗುಣಮಟ್ಟದ ಶಿಕ್ಷಣ, ಚಿಂತನೆ, ಕೌಶಲ್ಯ ತರಬೇತಿ ನೀಡಿರುವುದರಿಂದ ಅದನ್ನು ಬಳಸಿಕೊಂಡು ಸಮಾಜದಲ್ಲಿ ಉತ್ತಮ ಸಾಧನೆ ಮಾಡಿ ಎಂದು ಅಶೋಕ ಕಿಣಗಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಮ್ಮ ದೇಶದ ಶಿಕ್ಷಣ ಸಂಸ್ಥೆಗಳು ವಿಶ್ವ ದರ್ಜೆಯ ಉನ್ನತ ಶಿಕ್ಷಣ ನೀಡುತ್ತಿರುವುದರಿಂದ ಪ್ರಪಂಚದಲ್ಲಿ ಭಾರತ ದೇಶವು 'ಶಿಕ್ಷಣ ಕೇಂದ್ರ' ಎಂದು ಗುರುತಿಸಲ್ಪಟ್ಟಿದೆ. ಕಲಿಕೆಯ ಎಲ್ಲಾ ವ್ಯಕ್ತಿಗಳ ಅಗತ್ಯತೆಗಳನ್ನೂ ಪೂರೈಸುವ ನಿಟ್ಟಿನಲ್ಲಿ ನಮ್ಮ ಸಂವಿಧಾನ ಅವಕಾಶ ನೀಡಿದೆ. ಅದಕ್ಕನುಗುಣವಾಗಿ ಮುಕ್ತ ವಿಶ್ವವಿದ್ಯಾನಿಲಯವು ಗುಣಮಟ್ಟದ ಎಲ್ಲ ವರ್ಗದ ಅಭ್ಯರ್ಥಿಗಳನ್ನೂ ಸಮಾಜದ ಮುಂಚೂಣಿಗೆ ಕರೆತರುತ್ತಿದೆ ಎಂದು ಇದೇ ಸಂದರ್ಭ ನ್ಯಾಯಮೂರ್ತಿಗಳು ನುಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಪದವಿ ಕೋರ್ಸುಗಳಿಂದ ಉದ್ಯೋಗ ಪಡೆದುಕೊಳ್ಳಲಾಗದು. ಅದರ ಜೊತೆಗೆ ಕೌಶಲ್ಯಾಧಾರಿತ ಶಿಕ್ಷಣದ ಅಗತ್ಯವಿದ್ದು ಈ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ಶಿಕ್ಷಣ ನೀಡಿ ಅವರ ಉತ್ತಮ ಭವಿಷ್ಯ ರೂಪಿಸುವಲ್ಲಿ ಕಾರ್ಯೋನ್ಮುಖವಾಗಲಿ ಎಂದು ನ್ಯಾಯಮೂರ್ತಿ ಅಶೋಕ ಎಸ್.ಕಿಣಗಿ ಸಲಹೆ ನೀಡಿದರು.

ಎಲ್ಲೆಡೆ, ಎಲ್ಲರಿಗೂ ಉನ್ನತ ಶಿಕ್ಷಣ ದೊರೆಯಬೇಕು

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ

ಮೈಸೂರು, ಜು.2(ಆರ್‌ಕೆ)–ಎಲ್ಲೆಡೆ, ಎಲ್ಲರಿಗೂ ಉನ್ನತ ಶಿಕ್ಷಣ ದೊರೆಯುವಂತಾಗಬೇಕೆಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದ ಮೂಲೆ ಮೂಲೆಯಲ್ಲಿರುವ ಸರ್ವರಿಗೂ ಉನ್ನತ ಶಿಕ್ಷಣ ಸಿಗಬೇಕೆಂಬ ಉದ್ದೇಶದಿಂದ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪಿಸಲಾಯಿತು. ಅದರಂತೆ ವಿವಿಯು ದೂರ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು.

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಂದ ಬಂದ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಮುಕ್ತ ವಿಶ್ವವಿದ್ಯಾನಿಲಯಗಳು ಕಾರಣವಾಗಿವೆ. ದೂರ ಶಿಕ್ಷಣವು ಪ್ರಸ್ತುತ ಭಾರತೀಯ ಶೈಕ್ಷಣಿಕ ವ್ಯವಸ್ಥೆಯ ಮೇಲೆ ಉತ್ತಮ ಪರಿಣಾಮ ಬೀರಿದೆ. ಇಂದು ಮಹಿಳೆಯರು ಹೆಚ್ಚು ಪದಕಗಳನ್ನು ಪಡೆದಿರುವುದು ಮಹಿಳಾ ಸಬಲೀಕರಣದ ಪ್ರತೀಕವಾಗಿದೆ. ವಿವೇಕಾನಂದರು ಯುವಕರಿಗೆ ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂದು ನೀಡಿದ ಕರೆಯಂತೆ ಎಲ್ಲರೂ ದೇಶದ ಸರ್ವತೋಮುಖ ಪ್ರಗತಿಗೆ ಶ್ರಮಿಸಬೇಕು ಎಂದ ರಾಜ್ಯಪಾಲರು, ಗುಣಮಟ್ಟದ ಶಿಕ್ಷಣ, ಮಾರ್ಗದರ್ಶನ, ಕೌಶಲ್ಯ, ಗುಣಾತ್ಮಕ ಚಿಂತನೆ ಮತ್ತು ಭವಿಷ್ಯ ನಿರ್ಮಾಣ ಇವೆಲ್ಲವೂ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗುತ್ತವೆ. ರಾಷ್ಟ್ರದ ಪ್ರಗತಿಯಲ್ಲಿ ಪ್ರತಿಯೊಬ್ಬ ಸಾರ್ವಜನಿಕರ ಕೊಡುಗೆ ಅಗತ್ಯ. ಭಾರತ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಸಾರ್ವಭೌಮ ರಾಷ್ಟ್ರ. ವಿಶ್ವ ಕಲ್ಯಾಣ ಮತ್ತು ವಿಶ್ವಶಾಂತಿಯನ್ನು ಭಾರತ ದೇಶ ಸಾರುತ್ತಿದೆ. ಆದರೆ ಇಂದು ಇಡೀ ವಿಶ್ವವೇ ಪರಿಸರದ ಸಮಸ್ಯೆಗಳನ್ನು ಎದುರಿಸುತ್ತಿದೆ. ಪರಿಸರವನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಪ್ಲಾಸ್ಟಿಕ್ ಮುಕ್ತ ವಲಯಗಳನ್ನಾಗಿ ಮಾಡುವುದು, ಮಳೆ ನೀರು ಕೊಯ್ಲುಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಇನ್ನಿತರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪರಿಸರ ಸಂರಕ್ಷಣೆಯ ಆದ್ಯ ಕರ್ತವ್ಯ ನಿಮ್ಮ ಮೇಲಿದೆ ಎಂದರು.

ಪಿಹೆಚ್.ಡಿ ಪದವಿ, ಚಿನ್ನದ ಪದಕ ವಿಜೇತರ ಸಂತಸ

ಮೈಸೂರು,ಜು.2(ಆರ್‌ಕೆ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ವಿವಿಧ ವಿಷಯಗಳ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಚಿನ್ನದ ಪದಕ, ನಗದು ಬಹುಮಾನ ಹಾಗೂ ಪಿಹೆಚ್.ಡಿ ಪದವಿ ಪಡೆದ ಅಭ್ಯರ್ಥಿಗಳು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿ ಸಂತಸ ಹಂಚಿಕೊಂಡಿದ್ದಾರೆ.

ಮೈಸೂರಿನ ಮುಕ್ತ ಗಂಗೋತ್ರಿಯ ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ಮುಕ್ತ ವಿವಿ 18ನೇ ಘಟಿಕೋತ್ಸವ ಸಮಾರಂಭದಲ್ಲಿ ಪಿಹೆಚ್.ಡಿ ಪದವಿ, ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರದಾನ ಮಾಡಿದರು.



ಎನ್. ಭಾಗ್ಯಶ್ರೀ

ಕನಸು ನನಸಾಗಿದೆ: ಪಿಹೆಚ್.ಡಿ ಪದವಿ ಪಡೆಯಬೇಕೆಂಬ ಬಹುದಿನಗಳ ನನ್ನ ಕನಸು ಈಗ ನನಸಾಗಿದೆ ಎಂದು ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಪದವಿ ಪಡೆದ ಏಕೈಕ ಅಭ್ಯರ್ಥಿ ಎನ್.ಭಾಗ್ಯಶ್ರೀ ತಿಳಿಸಿದ್ದಾರೆ.

ಎಂಎ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ಪಡೆದಿರುವ ಅವರು, ನಾನು ಈ ಸಾಧನೆ ಮಾಡಲು ಕಾರಣರಾದ ತಂದೆ–ತಾಯಿ, ಕುಟುಂಬದವರಿಗೆ ಧನ್ಯವಾದ ಸಲ್ಲಿಸುತ್ತೇನೆ. ನಾನು ಮಂಡಿಸಿದ 'ಮಾನವ ಹಕ್ಕುಗಳ ಆಯೋಗ –ಕಾರ್ಯಾಚರಣೆ ಮತ್ತು ಮುಂದಿನ ನಿರೀಕ್ಷೆಗಳು' ಎಂಬ ವಿಷಯ ಕುರಿತ ಪ್ರಬಂಧಕ್ಕೆ ಪಿಹೆಚ್.ಡಿ ದೊರೆತಿದೆ ಎಂದ ಅವರು, ನಾನು ಅಧ್ಯಯನ ಮಾಡಿದಂತೆ ಈ ಹುದ್ದೆಗಳಿಗೆ ಶಿಕ್ಷಕರು ನೇಮಕಗೊಂಡಲ್ಲಿ ನೋವಿನಲ್ಲಿರುವವರಿಗೆ ಸ್ಪಂದಿಸಲು ಸಾಧ್ಯವಾಗುತ್ತದೆ ಎಂದರು.



ವಿಷ್ಣು ರಾಥೋಡ್

ದೂರ ಶಿಕ್ಷಣ ಆಸರೆಯಾಯಿತು: ಕೆಲಸ ಮಾಡಿಕೊಂಡು ವ್ಯಾಸಂಗ ಮುಂದುವರಿಸಲು ಮುಕ್ತ ವಿಶ್ವವಿದ್ಯಾನಿಲಯವು ನನಗೆ ದೂರ ಶಿಕ್ಷಣ ನೀಡಿತು. ಹಾಗಾಗಿ ಐಎಸ್ಸಿಯಲ್ಲಿ ಎಂ.ಲಿಟ್ ಮಾಡಲು ಸಾಧ್ಯವಾಯಿತು. ಹೆಚ್ಚು ಅಂಕ ಗಳಿಸಿ ಚಿನ್ನದ ಪದಕವನ್ನೂ ಗಳಿಸಿದ್ದೇನೆ ಎಂದು ವಿಷ್ಣು ರಾಥೋಡ್ ಅವರು ತಿಳಿಸಿದ್ದಾರೆ.



ಬಿ.ಎನ್.ಪ್ರತಿಮಾ

ಪಿಜಿ ಮಾಡಲು ಅವಕಾಶ: ಶೃಂಗೇರಿಯಲ್ಲಿ ಸಹಾಯಕ ಗ್ರಂಥಪಾಲಕಿಯಾಗಿ ಕೆಲಸ ಮಾಡುತ್ತಲೇ ಪಿಜಿ ಮಾಡಲು ಅವಕಾಶ ಸಿಕ್ಕಿತು. ಅದರಂತೆ ಗ್ರಂಥಾಲಯ ವಿಜ್ಞಾನ ವಿಷಯದಲ್ಲಿ ಎಂ.ಲಿಟ್ ಮಾಡಿ ಚಿನ್ನದ ಪದಕ ಪಡೆದಿದ್ದೇನೆ ಎಂದು ಬಿ.ಎನ್.ಪ್ರತಿಮಾ ಪ್ರಶಾಂತ್ ಅವರು ತಿಳಿಸಿದರು.



ಎಸ್.ಅರ್ಧನಾರಿ

ಸಂಸ್ಕೃತದಲ್ಲಿ ಪಿಹೆಚ್.ಡಿ: ಸಂಸ್ಕೃತ ಭಾಷೆ ಮೇಲೆ ಮಹಾ ಪ್ರಬಂಧ ಮಂಡಿಸಿ ಪಿಹೆಚ್.ಡಿ ಪದವಿ ಗಳಿಸಬೇಕೆಂಬುದು ಮಹದಾಸೆಯಾಗಿದೆ ಎಂದು ಎಂಎ ಸಂಸ್ಕೃತದಲ್ಲಿ ನಗದು ಬಹುಮಾನ ಪಡೆದಿರುವ 66 ವರ್ಷದ ಎಸ್.ಅರ್ಧನಾರಿ ಅವರು ತಿಳಿಸಿದ್ದಾರೆ. ಚೆನ್ನೈ ಮೂಲದವರಾದ ಅವರು, ಇಂಡಿಯನ್ ಬ್ಯಾಂಕ್ ನಿವೃತ್ತ ಮ್ಯಾನೇಜರ್. ಓದಿಗೆ ವಯಸ್ಸು ಎಂದೂ ಅಡ್ಡಿ ಬರುವುದಿಲ್ಲ. ಇನ್ನೂ ಹಲವು ಪದವಿ ಗಳಿಸಬೇಕೆಂಬ ಬಯಕೆ ನನ್ನದು ಎಂದು ಅರ್ಧನಾರಿ ಅವರು ನುಡಿದರು.

ಇಂದು ಮಲ್ಲಿಕಾ ಮಾವಿನಹಣ್ಣಿನ ಸಂತೆ



ಮೈಸೂರು, ಜು.2(ಪಿಎಂ)– ಯಾವುದೇ ರಾಸಾಯನಿಕ ಮತ್ತು ಕ್ರಿಮಿನಾಶಕಗಳನ್ನು ಬಳಸದೇ ನಮ್ಮ ತೋಟದಲ್ಲಿ ಬೆಳೆದಿರುವ ಮಲ್ಲಿಕಾ ಮಾವಿನ ಹಣ್ಣಿನ ಸಂತೆಯನ್ನು ಜು.3ರಂದು ಮೈಸೂರಿನ ಕುವೆಂಪುನಗರದ ನವಿಲು ರಸ್ತೆಯ ಅರಳಿಕಟ್ಟೆಯಲ್ಲಿ ಆಯೋಜಿಸಲಾಗಿದೆ ಎಂದು ಟಿ.ಜಿ.ಎಸ್.ಅವಿನಾಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಲ್ಲಿಕಾ ತಳಿಯ ಮಾವಿನಹಣ್ಣು ಸೇರಿದಂತೆ ಬಾಳೆ, ಪಪ್ಪಾಯ, ಮೋಸಂಬಿ, ಕಿತ್ತಳೆ, ಸಪೋಟ ಸೇರಿದಂತೆ ಮೊದಲಾದ ಹಣ್ಣುಗಳೂ ಸಂತೆಯಲ್ಲಿ ದೊರೆಯಲಿವೆ. ಅಂದು ಬೆಳಗ್ಗೆ 9ರಿಂದ ಸಂಜೆ 7ರವರೆಗೆ ಸಂತೆ ನಡೆಯಲಿದೆ ಎಂದು ಹೇಳಿದರು. ಸಾವಯವ ಮಳಿಗೆಯೊಂದರ ಮಾಲೀಕ ಸಿದ್ದರಾಜು ಗೋಷ್ಠಿಯಲ್ಲಿದ್ದರು.

ವಿಷ ಸೇವಿಸಿ ಯುವತಿ ಆತ್ಮಹತ್ಯೆ

ಮೈಸೂರು, ಜು. 2(ಆರ್‌ಕೆ)– ಪ್ರೀತಿಸುವಂತೆ ಒತ್ತಾಯಿಸಿ ಯುವಕ ನೀಡಿದ ಕಿರುಕುಳದಿಂದ ಬೇಸತ್ತ ಯುವತಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲವಾಲ ಹೋಬಳಿ ಗಣಗರಹುಂಡಿ ಗ್ರಾಮದಲ್ಲಿ ಶನಿವಾರ ಸಂಭವಿಸಿದೆ.

ಹರ್ಷಿತಾ(21) ಸಾವನ್ನಪ್ಪಿದವರಾಗಿದ್ದು, ಅದೇ ಗ್ರಾಮದ ಶಿವು(26) ಪ್ರೀತ್ಸೇ–ಪ್ರೀತ್ಸೇ ಎಂದು ಪೀಡಿಸುತ್ತಿದ್ದರಿಂದ ಮನನೊಂದು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಪಿಯುಸಿ ಓದಿದ್ದ ಹರ್ಷಿತಾ, ಕಂಪ್ಯೂಟರ್ ಕ್ಲಾಸ್‌ಗೆ ಹೋಗುತ್ತಿದ್ದಾಗ ಶಿವು ಆಕೆಯನ್ನು ಪ್ರೀತಿಸುವಂತೆ ಒತ್ತಾಯಿಸುತ್ತಿದ್ದ. ಆತನ ಮನವಿ ತಿರಸ್ಕರಿಸಿದ್ದ ಯುವತಿ, ನಿತ್ಯ ಆತನ ಕಿರುಕುಳದಿಂದ ಬೇಸತ್ತಿದ್ದರು.

ತನ್ನನ್ನು ಮದುವೆಯಾಗುವಂತೆಯೂ ಶಿವು ಪೀಡಿಸುತ್ತಿದ್ದರಿಂದ ಮನನೊಂದು ಹರ್ಷಿತಾ ವಿಷದ ಮಾತ್ರೆಗಳನ್ನು ಸೇವಿಸಿ ಅಸ್ವಸ್ಥಳಾಗಿದ್ದಳು. ತಕ್ಷಣ ಆಕೆಯನ್ನು ಕೆಆರ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಇಲವಾಲ ಪೊಲೀಸರು ತಿಳಿಸಿದ್ದಾರೆ.

ಪ್ರೋತ್ಸಾಹಧನಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು,ಜು.2–2023–24ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಂದ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ಆ.31ರೊಳಗೆ www.sw. kar.nic.in ನಲ್ಲಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ: 08223–273128, 08223–273563.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಮುಡಾ ಆಯುಕ್ತ ದಿನೇಶ್



ಮೈಸೂರು, ಜು.2–ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆ. ಮುಂದಿನ ಪೀಳಿಗೆಗೆ ಪರಿಸರವನ್ನು ಉಳಿಸಿ ಬೆಳೆಸಬೇಕು ಎಂದು ಮುಡಾ ಆಯುಕ್ತ ದಿನೇಶ್ ತಿಳಿಸಿದರು.

ವನ ಮಹೋತ್ಸವ ಅಂಗವಾಗಿ ಮುಡಾ ಕಚೇರಿಯ ಆವರಣದಲ್ಲಿ ಗಿಡ ನೀಡುವ ಮೂಲಕ ಪರಿಸರದ ಬಗ್ಗೆ ಕಾಳಜಿ ವ್ಯಕ್ತಪಡಿಸಿದರು. ಪರಿಸರ ಇದ್ದರೆ ಮಾತ್ರ ನಾವು ಬದುಕಲು ಸಾಧ್ಯ. ಉತ್ತಮ ಮಳೆ, ಬೆಳೆ ಆಗಲು ಪರಿಸರ ಮುಖ್ಯ. ಪ್ರತಿಯೊಬ್ಬರೂ ಕನಿಷ್ಠ 5 ಗಿಡಗಳನ್ನು ನೆಟ್ಟು ಬೆಳೆಸುವ ಮೂಲಕ ಪರಿಸರ ಪ್ರಜ್ಞೆ ಮೆರೆಯಬೇಕು ಎಂದು ಮನವಿ ಮಾಡಿದರು.

ಮುಡಾ ನಗರ ಯೋಜನಾ ಸದಸ್ಯ ಶೇಷ ಮಾತನಾಡಿ, ಗಿಡ ಮರಗಳನ್ನು ಹೆಚ್ಚಾಗಿ ಬೆಳೆಸುವುದರಿಂದ ಉತ್ತಮ ಗಾಳಿ ದೊರೆಯುತ್ತದೆ. ವಾತಾವರಣದ ಉಷ್ಣತೆ ಕಡಿಮೆ ಮಾಡುವಲ್ಲಿ ಪರಿಸರದ ಪಾತ್ರ ಬಹಳ ಮುಖ್ಯ. ಕಾಡುಗಳು ಹಾಗೂ ಕಾಡಿನಲ್ಲಿರುವ ಪ್ರಾಣಿಗಳನ್ನು ಉಳಿಸಿ ಸಂರಕ್ಷಿಸಬೇಕು ಎಂದು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್ ಮಾತನಾಡಿ, ಭೂಮಿಯ ಮೇಲೆ ಶೇಕಡಾ 33ರಷ್ಟು ಅರಣ್ಯ ಪ್ರದೇಶ ಇರಬೇಕು. ಆದರೆ ನಮ್ಮಲ್ಲಿ ಕಡಿಮೆ ಇದೆ. ಪ್ರಕೃತಿಯ ಸಮತೋಲನ ಕಾಪಾಡಲು ಅರಣ್ಯ ಪ್ರದೇಶ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬರೂ ಸ್ವಚ್ಛತೆಯನ್ನು ಕಾಪಾಡುವ ಮೂಲಕ ಪರಿಸರ ಸಂರಕ್ಷಣೆ ಮಾಡಬೇಕು. ಪರಿಸರ ಸಂರಕ್ಷಣೆಯಿಂದ ಜಾಗತಿಕ ತಾಪಮಾನ ಹೆಚ್ಚಳ ಆಗದಂತೆ ಮಾಡಬಹುದಾಗಿದೆ ಎಂದು ತಿಳಿಸಿದರು.



ಕಾಂಗ್ರೆಸ್ ಯುವ ಮುಖಂಡ ರಮೇಶ್ ಹೆಬ್ಬಾಳ್ ಅವರ ಹುಟ್ಟುಹಬ್ಬದ ಅಂಗವಾಗಿ ಸ್ನೇಹಜೀವಿ ಟ್ರೇಡ್ ಯೂನಿಯನ್ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು. ಇದೇ ವೇಳೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಅಭಿನಂದಿಸಲಾಯಿತು. ಸಿಎಸ್‌ಸಿ ಮುಖ್ಯಸ್ಥೆ ಶ್ರೀಮತಿ ಯಶೋಧ, ಚಾಲಕರ ಸಂಘದ ಅಧ್ಯಕ್ಷ ಸೋಮಶೇಖರ್, ಡೆಲ್ಲಿ ರವಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.7.2023 ಸೋಮವಾರ, ಮಳೆ ನಕ್ಷತ್ರ: ಆರಿದ್ರಾ 22.06.2023 ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿಶಕ್ತಿ ಸನ್ನಿಧಿ ಟ್ರಸ್ಟ್:** ಗುರುಪೂರ್ಣಿಮೆ ಕಾರ್ಯಕ್ರಮ, ಬೆಳಗ್ಗೆ 6.30ರಿಂದ ಕಾಕಡಾರತಿ, ಪ್ರತಿಷ್ಠಾಪನಾ ಮೂರ್ತಿಗೆ ವೇದಘೋಷಗಳೊಂದಿಗೆ ಜಲಾಭಿಷೇಕ, ಪುಷ್ಪಾರ್ಚನೆ, ಕ್ಷೀರಾಭಿಷೇಕ, ಪಂಚಾಮೃತಭಿಷೇಕ, ನೈವೇದ್ಯಾರತಿ, ಸಂಜೆ 6 ಗಂಟೆಗೆ ದೂಪಾರತಿ, ರಾತ್ರಿ 9 ಗಂಟೆಗೆ ಶೀಜಾರತಿ, ಸ್ಥಳ: ಬಾಲಾಮಂದಿರ, ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್:** ಗುರುಪೂರ್ಣಿಮೆ ಕಾರ್ಯಕ್ರಮ, ದಿವ್ಯ ಸಾನ್ನಿಧ್ಯ: ಶ್ರೀ ವೆಂಕಟಾಚಲ ಅವಧೂತರು, ಉಪಸ್ಥಿತಿ: ಶ್ರೀ ಅರ್ಜುನ ಅವಧೂತರು, ಶಿವಮೊಗ್ಗದ ಸದಾಶಿವ ಆಶ್ರಮದ ಶ್ರೀ ಅಭಿನವ ಚನ್ನಬಸವ ಸ್ವಾಮೀಜಿ, ಬೆಳಗ್ಗೆ 6 ಗಂಟೆಯಿಂದ ವ್ಯಾಸಪೂಜೆ, ಕಾಕಡಾರತಿ, ಗಣಪತಿ ಹೋಮ, ಸುದರ್ಶನ ಹೋಮ, ದಕ್ಷಿಣಾಮೂರ್ತಿ ಹೋಮ, ದತ್ತಾತ್ರೇಯ ಹೋಮ, ವೆಂಕಟಾಚಲ ಅವಧೂತರ ಹೋಮ, ಸ್ಥಳ: ಆರ್‌ಆರ್ ವೆಡ್ಡಿಂಗ್ ಬೆಲ್ಸ್, ಬನ್ನೂರು ರಸ್ತೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ನೆಗಡಿ, ಸೀನು ಬರುವಿಕೆ, ಮೂಗು ಸೋರುವಿಕೆ, ತಲೆನೋವು/ತಲೆ ಬ್ಲಾಕ್ ಮತ್ತು ಬೆನ್ನುಮೂಳೆಯ ಅಸ್ವಸ್ಥತೆಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಆರ್ಟ್ ಆಫ್ ಲಿವಿಂಗ್, ವೇದ ವಿಜ್ಞಾನ ಮಹಾ ವಿದ್ಯಾಪೀಠ:** ಗುರುಪೂರ್ಣಿಮಾ ವಿಶೇಷ ಆನಂದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಬೆಳಗ್ಗೆ 6ರಿಂದ 8, ಸಂಜೆ 6ರಿಂದ 8 ರವರೆಗೆ.

■ **ಶ್ರೀ ದಿಗಂಬರ ಜೈನ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ:** ಶ್ರೀ ಶೋಭಕೃತು ನಾಮ ಸಂವತ್ಸರದ ಆಷಾಢ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಪ್ರಾಧ್ಯಾಪಕರಾದ ಡಾ.ಎಂ.ಎಸ್.ಪದ್ಮ ಅವರಿಂದ ಪ್ರವಚನ (ಗಾಥ: 751ರಿಂದ 775), ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 6.45ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬೇ.ನಾ. ವಿಜಯೇಂದ್ರಾಚಾರ್ ಅವರಿಂದ ಮಹಾಭಾರತ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಶ್ರೀರಾಮಕೃಷ್ಣ ಆಶ್ರಮ:** ಗುರುಪೂರ್ಣಿಮಾ, ಬೆಳಗ್ಗೆ 5.15ರಿಂದ ವೇದಪಠನ, ಗುರುಸ್ತೋತ್ರ, ವಿಷ್ಣು ಸಹಸ್ರನಾಮ ಪಾರಾಯಣ, 10.30ಕ್ಕೆ ಗುರುಪೂರ್ಣಿಮೆ ಕುರಿತು ಪ್ರವಚನ, ಪುಸ್ತಕ ಬಿಡುಗಡೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಶ್ರೀ ಮಾಯಕಾರ ಗುರುಕುಲ, ಮೈಸೂರು:** ಗುರುಪೂರ್ಣಿಮಾ ಅಂಗವಾಗಿ ಶ್ರೀ ಮಾಯಕಾರ ಪಂಚಾಂಗ ಆ್ಯಪ್ ಬಿಡುಗಡೆ, ಎಂ.ಎ.ವಿದ್ವತ್ ಮಾಡಿರುವ ಗುರುಕುಲದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ, ಸ್ಥಳ: ರೋಟರಿ ಸಭಾಂಗಣ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಎದುರು, ಬೆಳಗ್ಗೆ 9.30ಕ್ಕೆ.

■ **ನಮೋ ಯೋಗ ಭವನ:** ಗುರುಪೂರ್ಣಿಮಾ, ಪ್ರಾಸ್ತಾವಿಕ ನುಡಿ: ಭರತನಾಟ್ಯ ತಜ್ಞರಾದ ಡಾ. ಶೀಲಾ ಶ್ರೀಧರ್, ಅಧ್ಯಕ್ಷತೆ: ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಸ್ಥಳ: ನಮೋ ಯೋಗ ಭವನ, ರಾಮಾನುಜ ಮುಖ್ಯ ರಸ್ತೆ, ಸಂಜೆ 6 ಗಂಟೆಗೆ.

■ **ಶ್ರೀ ನಾಗಾನಂದ ದತ್ತಾತ್ರೇಯ ಮಠ:** ವ್ಯಾಸ ಪೂರ್ಣಿಮಾ, ಗುರುಪೂರ್ಣಿಮಾ ಕಾರ್ಯಕ್ರಮ, ಬೆಳಗ್ಗೆ 5.30ಕ್ಕೆ ಕಳಸ ಸ್ಥಾಪನೆ, 10.30ಕ್ಕೆ ಗುರುಭಕ್ತರಿಂದ ಭಜನಾ ಕಾರ್ಯಕ್ರಮ, ಮಧ್ಯಾಹ್ನ 1 ಗಂಟೆಗೆ ಶ್ರೀ ನಾಗಾನಂದ ಗುರೂಜಿಯವರ ಪಾದಕೆ ಜೊತೆಗೆ ವ್ಯಾಸ ಮುನಿಗಳ ಭಾವಚಿತ್ರ ಮೆರವಣಿಗೆ ಸ್ಥಳ: ಮಠದ ಆವರಣ, ವರುಣ ಕಾಲುವೆ ಹತ್ತಿರ, ಬೆಲವತ್ತ.

ಯಶೋಧಪುರದಲ್ಲಿಂದು, ಹುಣಸೂರು ತಾಲೂಕು

■ **ತನುಮನ ಸಂಸ್ಥೆ, ಮೈಸೂರು:** ಖ್ಯಾತಗಾಯಕ ಲಕ್ಷ್ಮಿರಾಮ್ ಅವರ ಸಾರಥ್ಯದಲ್ಲಿ ಜಗ ನಡೆಯಲಿ ಬುದ್ಧನಕಡೆಗೆ ಸಂಗೀತ ಕಾರ್ಯಕ್ರಮ, ದಿವ್ಯಸಾನ್ನಿಧ್ಯ ಮತ್ತು ಉದ್ಘಾಟನೆ: ಮೈಸೂರಿನ ಉರಿಲಿಂಗಪೆದ್ದಿ ಮಠ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ, ಸ್ಥಳ: ವಿಶ್ವ ಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಸಂಜೆ 6 ಗಂಟೆಗೆ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ:** ಗುರುಪೂರ್ಣಿಮ ಅಂಗವಾಗಿ ಗೋ ಪೂಜೆ, ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ ಮತ್ತು ಸಸಿ ನೆಡುವ ಮೂಲಕ ಗುರುವಂದನೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಧಾರ್ಮಿಕ ಮುಖಂಡ ವೇದಬ್ರಹ್ಮ ಶ್ರೀ ಭಾನುಪ್ರಕಾಶ್ ಶರ್ಮ, ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕೆ.ರಘುರಾಮ್ ವಾಜಪೇಯಿ, ಎನ್.ಎಂ. ನವೀನ್‌ಕುಮಾರ್, ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್, ವಿದ್ವಾನ್ ಕೃಷ್ಣಮೂರ್ತಿ, ವಿಕ್ರಂ ಅಯ್ಯಂಗಾರ್, ಅಜಯ್‌ಶಾಸ್ತ್ರಿ, ಸ್ಥಳ: ರಾಮಾನುಜ ರಸ್ತೆ, 11ನೇ ಕ್ರಾಸ್, ಬೆಳಗ್ಗೆ 11 ಗಂಟೆಗೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಶ ಕಾನೂನು ಅಧ್ಯಯನ ಸಂಸ್ಥೆ:** ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವಜನತೆ ಮತ್ತು ಗಾಂಧಿ–ಯಶೋಧರಮ್ಮ ದಾಸಪ್ಪದಕವತ್ತ ವಿಚಾರಗಳ ಪ್ರಸ್ತುತತೆ ಕುರಿತು ರಾಸೇಯೋ ವಾರ್ಷಿಕ ವಿಶೇಷ ಶಿಬಿರ, ಮಂಡ್ಯ ಇಂಗ್ಲೀಷ್ ಪ್ರಾಧ್ಯಾಪಕ ಪ್ರೊಕೆ.ಎಂ ಪ್ರಸನ್ನಕುಮಾರ್ ಅವರಿಂದ ಉಪನ್ಯಾಸ, ವಿಷಯ: ಯುವ ಜನರಿಗೆ ಗಾಂಧಿ ಮತ್ತು ಅಂಬೇಡ್ಕರ್ ಸಂದೇಶ, ಸ್ಥಳ: ಯಶೋಧರಪುರ, ಹುಣಸೂರು ತಾಲೂಕು ಸಂಜೆ 5 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ–ಕೆ.ಎಲ್.ಪದ್ಮಿನಿ ಹೆಗಡೆ, 7.15 ಭಾವಗೀತೆಗಳು: ಪಿ.ಎ. ಮಂಗಳ, ಸುನೀತಾ ಅನಂತಸ್ವಾಮಿ, ನಾಗಚಂದ್ರಿಕಾ ಭಟ್, 9.05 ವಸುದೈವ ಕುಟುಂಬಕಂ– ಭಾರತ G20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 10.00 ಲಯ ಸಂಭ್ರಮ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ದೇವರ ನಾಮ: ಮದ್ವೇಶ್ ವೈ.ಎನ್, 12.45 ನಮ್ಮ ಆರೋಗ್ಯ: ವಿಶ್ವ ಮಾದಕ ವಸ್ತುಗಳ ಮತ್ತು ಔಷಧಗಳ ದುರ್ಬಳಕೆ ಹಾಗೂ ಕಳ್ಳಸಾಗಾಣಿಕೆಯ ವಿರೋಧಿ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ಡಾ.ಸುಧಾ ನಾಯಕ್ ಮತ್ತು ಡಾ.ಬಾನು ಬಿ.ಎಂ. ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ–ಡಾ. ಶಿಲ್ಪಾ ಹೆಗಡೆ, 3.00 ರಾಜಲಕ್ಷ್ಮಿ ರಾಮರಾವ್– ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ; ಡಾಕ್ಟರ್ ಸಮಯ: ವಿಷಯ–ಮಹಿಳೆಯರ ಆಹಾರ, ಪೋಷಣೆ ಮತ್ತು ಆರೋಗ್ಯ. ಭಾಗವಹಿಸುವವರು–ಡಾ.ಅಸ್ನಾ ಉರೂಜ್, ಪ್ರಸ್ತುತಿ–ಕೆ.ಬಿ.ಮೀನಾ, 4.45 'ಹಿಂದಿ ಪಾಠ' ಪ್ರಸ್ತುತಿ–ಅನುರಾಧಾ ಮೂರ್ತಿ. 6.55 ಕೃಷಿರಂಗ: ಕಿಸಾನ್‌ವಾಣಿ– ಮೈಸೂರು ಜಿಲ್ಲೆಯ ಕೃಷಿಕರಿಗೆ ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಬಿ.ಎಸ್.ಚಂದ್ರಶೇಖರ್, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಪ್ರಸ್ತುತಿ–ಎನ್.ಕೇಶವಮೂರ್ತಿ. **ರಾತ್ರಿ:** 9.30 ಹಳ್ಳಿ ಹಾಡು: ಪ್ರಸ್ತುತಿ– ಅಬ್ದುಲ್ ರಶೀದ್, 10.00 ನಾಟಕ, 10.30 ಸವಿನೆನಪು.

ಮೈಸೂರು ಸಾಹಿತ್ಯೋತ್ಸವಕ್ಕೆ ತೆರೆ: ಸಾಧಕರಿಂದ ಅರ್ಥಪೂರ್ಣ ಸಂವಾದ

ಮೈಸೂರು ಸಾಹಿತ್ಯೋತ್ಸವದಲ್ಲಿ ವಿ.ವಿ.ಎಸ್. ಲಕ್ಷ್ಮಣ್ ಅವರ ಆತ್ಮಕಥೆ ಪ್ರಮುಖ ಆಕರ್ಷಣೆ

ಕ್ರಿಕೆಟ್‌ಗೆ ಧರ್ಮದ ಭೇದಭಾವವಿಲ್ಲ: ಮಾಜಿ ಕ್ರಿಕೆಟ್ ಆಟಗಾರ ವಿ.ವಿ.ಎಸ್.ಲಕ್ಷ್ಮಣ್ ಅಭಿಮತ



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆದ ಮೈಸೂರು ಸಾಹಿತ್ಯೋತ್ಸವದಲ್ಲಿ ಮಾಜಿ ಅಂತರಾಷ್ಟ್ರೀಯ ಕ್ರಿಕೆಟಿಗ ಹಾಗೂ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿ.ವಿ.ಎಸ್. ಲಕ್ಷ್ಮಣ್ ಅವರು ತಮ್ಮ ಆತ್ಮಕಥೆ '281 ಮತ್ತು ಅದರ ಆಚೆ' (281 and Beyond) ಕುರಿತು ಮಾತನಾಡಿದರು. ಹಿರಿಯ ಪತ್ರಕರ್ತರಾದ ಕೃಷ್ಣಪ್ರಸಾದ್ ಹಾಗೂ ಆರ್.ಕೌಶಿಕ್ ಉಪಸ್ಥಿತರಿದ್ದರು.

ಮೈಸೂರು, ಜು.2(ಬಿಎಲ್‌ಯು)– ಕ್ರಿಕೆಟ್‌ಗೂ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ. ಕ್ರಿಕೆಟ್ ಧರ್ಮದ ಹೊರತಾಗಿದೆ ಎಂದು ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟಿಗ ಹಾಗೂ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿ.ವಿ.ಎಸ್. ಲಕ್ಷ್ಮಣ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಮೈಸೂರು ಸಾಹಿತ್ಯೋತ್ಸವದ 2ನೇ ದಿನದ ಗೋಷ್ಠಿಯಲ್ಲಿ ವಿ.ವಿ.ಎಸ್.ಲಕ್ಷ್ಮಣ್ ಅವರು ತಮ್ಮ ಆತ್ಮಕಥೆ '281 ಮತ್ತು ಅದರ ಆಚೆ' (281 and Beyond) ಹಾಗೂ ಕ್ರಿಕೆಟ್ ಕ್ರೀಡೆ ಬಗ್ಗೆ ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು ಹಂಚಿಕೊಂಡರು.

ಧರ್ಮಕ್ಕೂ ಕ್ರಿಕೆಟ್‌ಗೂ ಯಾವುದೇ ಸಂಬಂಧವಿಲ್ಲ. ಕ್ರಿಕೆಟ್ ಧರ್ಮದ ಹೊರತಾಗಿದೆ. ಕ್ರಿಕೆಟ್‌ನಲ್ಲಿ ಧರ್ಮದ ಭೇದಬಾವ ಇರುವುದಿಲ್ಲ. ಪ್ರತಿಯೊಬ್ಬ ಕ್ರಿಕೆಟ್ ಆಟಗಾರ ದೇಶದ ಒಂದಲ್ಲಾ ಒಂದು ಪ್ರಾಂತ್ಯಕ್ಕೆ ಸೇರಿದವರಾದರೂ ಡ್ರೆಸ್ಸಿಂಗ್ ರೂಂಗೆ ಬಂದಾಗ ನಾವು ಭಾರತೀಯರು ಎಂಬ ಭಾವನೆ ಮೂಡುತ್ತದೆ. ಈ ಮೂಲಕ ಪರಸ್ಪರ ಒಂದಾಗುತ್ತಾರೆ. ಈ ಕಾರಣದಿಂದ ಎಂದಿಗೂ ಕೂಡ ಕ್ರಿಕೆಟ್‌ಗೆ ಧರ್ಮದ ನೆರಳು ಸೋಕಿಲ್ಲ ಎಂದು ವಿ.ವಿ.ಎಸ್ ಲಕ್ಷ್ಮಣ್ ಹೇಳಿದರು.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥರ ಜವಾಬ್ದಾರಿ ಅಂದರೆ, ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಿ, ಉತ್ಸಾಹಿಸಿ ಭವಿಷ್ಯದಲ್ಲಿ ಒಳ್ಳೆಯ ಆಟಗಾರನಾಗಿ ಅವರನ್ನು ರೂಪಿಸುವುದಾಗಿದೆ ಎಂದು ತಿಳಿಸಿದರು.

ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ಆಟದಲ್ಲಿ ಹೆಚ್ಚಾಗಿ ತೊಡಗಬಹುದಲ್ಲವೆ ಎಂಬ ಪ್ರಶ್ನೆಗೆ ಉತ್ತರಿಸಿದ ವಿ.ವಿ.ಎಸ್.ಲಕ್ಷ್ಮಣ್ ಅವರು, ಎಲ್ಲವೂ ಸರ್ಕಾರದ ನಿರ್ಧಾರಕ್ಕೆ ಬಿಟ್ಟಿರುವಂತದ್ದಾಗಿದೆ. ಆಯಾ ರಾಜಕೀಯ ಸ್ಥಿತಿಗತಿ ಹಾಗೂ ಪರಸ್ಪರ ರಾಜತಾಂತ್ರಿಕ ಸಂಬಂಧದ ಮೇಲೆ ಇದೆಲ್ಲವೂ ತೀರ್ಮಾನವಾಗುತ್ತದೆ ಎಂದರು.

ಇದೇ ವೇಳೆ ಐಪಿಎಲ್ ಕ್ರಿಕೆಟ್ ಬಗ್ಗೆ ಮಾತನಾಡಿದ ಅವರು, 2008ರಲ್ಲಿ ಐಪಿಎಲ್ ಆರಂಭವಾದಾಗ ನಾನು ಅದರ ಭಾಗವಾಗಿದ್ದೆ. ಐಪಿಎಲ್ ಹೊಸತನದಿಂದ ಕೂಡಿರುವ ಆಟವಾಗಿದೆ. ಅದರಲ್ಲೂ ಐಪಿಎಲ್‌ನಿಂದ ಭವಿಷ್ಯತ್ತಿನಲ್ಲಿ ಮಹಿಳಾ ಕ್ರಿಕೆಟ್ ಆಟಗಾರರಿಗೆ ಹೆಚ್ಚು ಪ್ರೋತ್ಸಾಹ ದೊರೆಯುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಮ್ಮ ಆತ್ಮಕಥೆ ಬಗ್ಗೆ ಮಾತನಾಡಿದ ಅವರು, ನನ್ನ ಪುಸ್ತಕ ಓದಿದವರು ಎಲ್ಲಾ ರೀತಿಯ ಅಡೆತಡೆಗಳನ್ನು ಮೀರಿ ಯಾವುದೇ ಸಂದರ್ಭದಲ್ಲಿ ವಿಚಲಿತರಾಗದೆ ಸಮಚಿತ್ತದಿಂದ ಗುರಿ ಸಾಧಿಸಿದರೆ ಸಾರ್ಥಕವಾಗುತ್ತದೆ ಎಂದು ವಿ.ವಿ.ಎಸ್ ಲಕ್ಷ್ಮಣ್ ನುಡಿದರು.

ತಮ್ಮದೇ ಜೀವನದ ಬಗ್ಗೆ ಮಾತನಾಡಿದ ವಿ.ವಿ.ಎಸ್. ಲಕ್ಷ್ಮಣ್ ಅವರು, ನಾನು ಕ್ರಿಕೆಟಿಗನಾಗಲು ಮೂಲ ಪ್ರೇರಣೆ ಅಂದರೆ 1983ರ ಕಪಿಲ್‌ದೇವ್ ಸಾರಥ್ಯದ ವಿಶ್ವಕಪ್ ಕ್ರಿಕೆಟ್ ಗೆಲುವು. ಅಂದೇ ನಾನು ಕ್ರಿಕೆಟ್‌ನಲ್ಲೇ ಸಾಧನೆ ಮಾಡಲು ನಿರ್ಧಾರ ಮಾಡಿದೆ ಎಂದರು.

ನಮ್ಮ ಕುಟುಂಬದಲ್ಲಿ ಎಲ್ಲರೂ ವೈದ್ಯರೆ. ಹಾಗಾಗಿ ನಾನು ಕೂಡ ವೈದ್ಯಕೀಯ ಶಾಸ್ತ್ರ ಓದಲು ನಿರ್ಧಾರ ಮಾಡಿಬಿಟ್ಟಿದ್ದೆ ಆದರೆ ನನ್ನ ಅಂಕಲ್ ನಮ್ಮ ತಂದೆ–ತಾಯಿಗೆ ಮನವರಿಕೆ ಮಾಡಿ ಕ್ರಿಕೆಟ್ ಬಗೆಗಿನ ನನ್ನ ಕನಸು ನನಸು ಮಾಡಲು ಕಾರಣರಾದರು. ಇದರಿಂದ ಕ್ರಿಕೆಟ್‌ನಲ್ಲೇ ನಾನು ಗುರಿ ಸಾಧಿಸಿದೆ ಎಂದು ವಿ.ವಿ.ಎಸ್.ಲಕ್ಷ್ಮಣ್ ಹೇಳಿದರು.

ನಾನು ಕೂಡ ಬೆಂಗಳೂರಿನವನಾಗಿದ್ದೇನೆ. ನನ್ನ ಕುಟುಂಬವನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದೇನೆ. ನನ್ನ ಮೂಲ ಸ್ಥಳ ಹೈದರಾಬಾದ್ ಆದರೂ ನನಗೆ ಬೆಂಗಳೂರು ಬಗ್ಗೆ ಅಕ್ಕರೆ ಎಂದು ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು ಸವಿವರವಾಗಿ ಹಂಚಿಕೊಂಡರು.


ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಹಾಗೂ ಹಿರಿಯ ಪತ್ರಕರ್ತರೂ ಆದ ವಿವಿಎಸ್ ಲಕ್ಷ್ಮಣ್ ಅವರ ಆತ್ಮಕಥನದ ಸಹ ಬರಹಗಾರ ಆರ್.ಕೌಶಿಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮುಂಬೈ ಮೂಲದ ಕವಿ, ಕಾದಂಬರಿಕಾರ ಜರಿ ಪಿಂಟೊ ಮಾತನಾಡಿ, ಈಗಲೂ ಕೂಡ ಸಾಹಿತ್ಯ ಕ್ಷೇತ್ರದ ಬಗ್ಗೆ ಬಹಳಷ್ಟು ಜನರು ಒಲವು ತೋರುತ್ತಿದ್ದಾರೆ. ಓದು ಹಾಗೂ ಅಧ್ಯಯನ ಮಾಡಲು ಭಾಷೆಯ ಭೇದಭಾವ ಇರುವುದಿಲ್ಲ ಎಂದು ಹೇಳಿದರು.

ಮೈಸೂರು ಸಾಹಿತ್ಯೋತ್ಸವದ ಎರಡನೇ ದಿನವಾದ ಇಂದಿನ ಸಾಹಿತ್ಯ ಮಂಥನದಲ್ಲಿ ನೂರಾರು ಸಾಹಿತ್ಯ ಪ್ರೇಮಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು.

ಕನ್ನಡದಲ್ಲಿ ಲೇಖಕರಿಗಿಂತ ಪ್ರಶಸ್ತಿಗಳು ಹೆಚ್ಚು

ಬರಹಗಾರ, ಗೀತೆ ರಚನೆಕಾರ ಜಯಂತ್ ಕಾಯ್ಕಿಣಿ



ಮೈಸೂರು, ಜು.2(ಜಿಎ)–ಕನ್ನಡದಲ್ಲಿ ಲೇಖಕರಿಗಿಂತ ಪ್ರಶಸ್ತಿಗಳು ಹೆಚ್ಚಿವೆ. ಕವಿಗೆ ಸಿಗುವ ಕಥೆಯೇ ನಿಜವಾದ ಪ್ರಶಸ್ತಿ ಎಂದು ಕನ್ನಡದಲ್ಲಿ ಸಣ್ಣ ಕಥೆಗಾರ, ಬರಹಗಾರ, ಅಂಕಣಕಾರ ಮತ್ತು , ಚಿತ್ರಗೀತೆರಚನೆಕಾರರೂ ಆದ ಜಯಂತ್ ಕಾಯ್ಕಿಣಿ ಅವರು ಅಭಿಪ್ರಾಯಪಟ್ಟರು.

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ ವತಿಯಿಂದ ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಏರ್ಪಡಿಸಿರುವ ಲಿಟ್ರೇಚರ್ ಫೆಸ್ಟ್‌ನ ಏಳನೇ ಆವೃತ್ತಿಯಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಜಯಂತ್ ಕಾಯ್ಕಿಣಿ ಅವರು ಕಾದಂಬರಿಕಾರ ವಿವೇಕ್ ಶಾನಭಾಗ್ ಅವರೊಟ್ಟಿಗೆ ಸಣ್ಣ ಕಥೆ, ಕಾದಂಬರಿ, ಕವಿತೆ, ಬಹುಭಾಷೆಯ ಕುರಿತು ಸಮಗ್ರವಾಗಿ ಚರ್ಚಿಸಿದರು.

ಸಂವಾದದಲ್ಲಿ ವಿವೇಕ್ ಶಾನ್‌ಭಾಗ್ ಮಾತನಾಡಿ, ನಾವಿಬ್ಬರೂ ಗೋಕರ್ಣ ಮೂಲದವರಾಗಿದ್ದು, ಇಬ್ಬರೇ ಇದ್ದಾಗ ಕೊಂಕಣಿ ಭಾಷೆಯಲ್ಲಿ ಮಾತನಾಡಿಕೊಳ್ಳುತ್ತೇವೆ. ಆದರೆ, ಕೊಂಕಣಿಯ ಮಾತುಕತೆ ಎಲ್ಲವನ್ನು ಕನ್ನಡದಲ್ಲಿ ಬರೆಯುತ್ತೇವೆ. ಕೊಂಕಣಿಯೂ ಒಂದು ಆಡುಭಾಷೆಯಾಗಿದ್ದು, ಅದರಲ್ಲಿ ವರ್ಣನೆ ಮಾಡಿ ಬರೆಯುವುದು ಕಷ್ಟ ಆದರೆ, ಕನ್ನಡದಲ್ಲಿ ಎಲ್ಲವನ್ನು ವರ್ಣಿಸಬಹುದು ಎಂದು ತಿಳಿಸಿ, ಬಹುಭಾಷೆಯ ಬಳಕೆ ಕುರಿತು ಜಯಂತ್ ಕಾಯ್ಕಿಣಿ ಅವರಿಗೆ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅವರು, ಬಹುಭಾಷೆ ಎಂಬುದು ದೊಡ್ಡ ಹೆಗ್ಗಳಿಕೆಯಾಗಿದೆ. ಒಬ್ಬ ವ್ಯಕ್ತಿ ಎರಡಕ್ಕಿಂತ ಹೆಚ್ಚು ಭಾಷೆಯನ್ನು ಮಾತನಾಡಬಹುದಾಗಿದೆ. ಬದುಕನ್ನು ಅರ್ಥ ಮಾಡಿಕೊಳ್ಳಲು ಭಾಷೆ ಕಿಟಕಿಯಾಗಿದೆ. ಮುಂಬೈನಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಮನೆಯಲ್ಲಿ ಕೊಂಕಣಿಯಲ್ಲಿ, ಆಫೀಸ್‌ನಲ್ಲಿ ಇಂಗ್ಲಿಷ್, ಟ್ರೈನ್‌ನಲ್ಲಿ ಹಿಂದಿ ಮತ್ತು ಸಹದ್ಯೋಗಿಗಳೊಟ್ಟಿಗೆ ಮರಾಠಿಯಲ್ಲಿ ಮಾತನಾಡುತ್ತಿದೆ. ಎಲ್ಲಾ ಭಾಷೆಯ ವ್ಯಕ್ತಿಗಳ ಅಲ್ಲಿನ ಪ್ರದೇಶದ ಅನುಭವವನ್ನು ತೆಗೆದುಕೊಂಡು ಕನ್ನಡದಲ್ಲಿ ಬರೆಯುತ್ತಿದ್ದೆ. ಬರವಣಿಗೆ ಎಂಬುದು ಭಾಷಾತೀತವನ್ನು ಮೀರಿಸುತ್ತದೆ. ಬರಹದ ನಂಟು ಅನುಭವವಾಗಿರುತ್ತದೆ ಹೊರತು ಯಾವುದೇ ಸಂದೇಶವಿರುವುದಿಲ್ಲ ಕನ್ನಡದಲ್ಲಿ ಲೇಖಕರಿಗಿಂತ ಪ್ರಶಸ್ತಿಗಳು ಹೆಚ್ಚಿವೆ. ಕವಿಗೆ ಸಿಗುವ ಕಥೆಯೇ ನಿಜವಾದ ಪ್ರಶಸ್ತಿ ಎಂದು ತಿಳಿಸಿದರು.

ಮೊಡವೆ ಬಂದಂತೆ ಎಲ್ಲರಿಗೂ ಕವಿತೆ ಬರೆಯುವ ಅಭ್ಯಾಸ ಇರುತ್ತದೆ. ಹಾಗೇ ಶಾನ್‌ಭಾಗ್ ನಿಮಗೂ ಕವಿತೆಗೂ ನಂಟು ಹೇಗೆ ಮತ್ತು ಕಾದಂಬರಿ ಬರೆಯುವುದಕ್ಕೆ ಮನಸ್ಸು ಏಕೆ ವಾಲಿತು? ಮತ್ತು ಅದರಿಂದ ಆದ ಬದಲಾವಣೆ ಏನು? ಎಂದು ಕೇಳಿದರು. ಇದಕ್ಕೆ ವಿವೇಕ್ ಶಾನ್‌ಭಾಗ್ ಉತ್ತರಿಸಿ, ಮೊದಲು ಹದಿಹರೆಯದ ವಯಸ್ಸಿನಲ್ಲಿ ಕವಿತೆ ಬರೆದೆ. ಕವಿತೆ ಎಂದರೆ ನನಗೆ ಇಷ್ಟ, ಆದರೆ ಕವಿತೆ ಬರೆಯಲು ಮನಸ್ಸು ಬೇಕು. ಮೊದಲು ಆಧ್ಯಾತ್ಮ ಓದಿದೆ. ನಂತರ ಸಾಹಿತ್ಯ ಓದಲು ಆರಂಭಿಸಿ, ಅದರ ಬಗ್ಗೆ ಒಲವು ಹೆಚ್ಚಾಯಿತು. ಹಾಗೇ ಸಣ್ಣ ಕತೆಯಿಂದ ಕಾದಂಬರಿ ಕಡೆ ವಾಲಿತು. ಕಾದಂಬರಿ ಬರೆದ ನಂತರ ಸಣ್ಣ ಕಥೆ ಬರೆಯುವುದು ಕಷ್ಟವಾಗುತ್ತಿದೆ. ಕಾದಂಬರಿಯಲ್ಲಿ ಹೆಚ್ಚು ಆಳಕ್ಕೆ ಇಳಿದು ಬರೆಯಬಹುದು. ಕಾದಂಬರಿಯಲ್ಲಿ ಸಂಕ್ಷಿಪ್ತತೆಗೆ ಅವಕಾಶ ಹೆಚ್ಚಿರುತ್ತದೆ ಎಂದು ಸಣ್ಣ ಕಥೆ ಮತ್ತು ಕಾದಂಬರಿಯ ನಡುವಿನ ಬದಲಾವಣೆ ತಿಳಿಸಿದರು.

ನಿಮ್ಮ ಹಳೆ ಮುಂಬೈ ನೆನಪು ಈಗಲೂ ಕಾಡುತ್ತದೆಯೇ ಎಂದು ಶಾನ್‌ಭಾಗ್ ಜಯಂತ್ ಕಾಯ್ಕಿಣಿ ಅವರನ್ನು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಅವರು, ಅನುಭವಗಳನ್ನು ಹಿಡಿಯಲು ನಮ್ಮ ಆಯಾಮಗಳು ಸಾಲದು ಎಂಬ ಅನುಭವವಾಗಿದೆ. ಇದಕ್ಕೆ ಅನೇಕ ತೊಡಕುಗಳು ಸೃಷ್ಟಿಯಾಗುತ್ತವೆ. ನಮ್ಮ ಬರವಣಿಗೆ ಮತ್ತು ಅನುಭವವನ್ನು ಅರಿಯುವುದು ಅಷ್ಟೇ. ಮೊದಲು ಒಂದು ಕರೆ ಮಾಡಲು ಕಾಯಬೇಕಿತ್ತು. ಪತ್ರ ಬರೆಯಬೇಕಿತ್ತು. ಆದರೆ, ಇಂದು ತಂತ್ರಜ್ಞಾನ ಹೆಚ್ಚಾಗಿದೆಯೇ ಹೊರತು ಯಾವುದೂ ಮೊದಲ ಹಾಗೇ ಇಲ್ಲ ಎಂಬುದು ಸುಳ್ಳು. ನಾವು ಮಾತ್ರ ಬದಲಾಗಿದ್ದೇವೆ. ನಾವಿರುವ ಪ್ರದೇಶವನ್ನು ಪ್ರೀತಿಸಿದರೆ, ಸಾಕು ಎಲ್ಲಾ ಅನುಭವ ದೊರೆಯುತ್ತದೆ ಎಂದು ಸಂವಾದದಲ್ಲಿ ಜಯಂತ್ ಕಾಯ್ಕಿಣಿ ಅವರು ಕಾದಂಬರಿಕಾರ ವಿವೇಕ್ ಶಾನ್ಭಾಗ್ ಅವರೊಟ್ಟಿಗೆ ಸಣ್ಣ ಕಥೆ, ಕಾದಂಬರಿ, ಕವಿತೆ, ಬಹುಭಾಷೆಯ ಕುರಿತು ಸಮಗ್ರವಾಗಿ ವಿವರಿಸಿದರು.

ಅನುಭವ ಹಂಚಿಕೊಂಡ ಸಾಧಕರು



ಮೈಸೂರು, ಜು.2(ಜಿಎ)– ನಗರದಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮ 7ನೇ ಆವೃತ್ತಿಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರೊಂದಿಗೆ 'ಅಪೂರ್ವ ಕಾರ್ಯಕ್ಷೇತ್ರದಲ್ಲಿ ಅನನ್ಯ ವ್ಯಕ್ತಿಗಳು' ಎಂಬ ಚರ್ಚಾಗೋಷ್ಠಿ ನಡೆಸಲಾಯಿತು.

ಚರ್ಚಾಗೋಷ್ಠಿಯಲ್ಲಿ ವೀರಗಲ್ಲು ಸಂರಕ್ಷಣೆ ಮಾಡುತ್ತಿರುವ ನಿವೃತ್ತ ಶಿಕ್ಷಕ ಮೊಹಮ್ಮದ್ ಖಲೀಮ್, ಯಕ್ಷಗಾನ ಕಲಾವಿದ ಜಬ್ಬರ್ ಸಾಮೋ, ಮೈಸೂರಿನ ಪುಸ್ತಕ ಪ್ರೇಮಿ ಸೈಯದ್ ಐಸಾಕ್ ಅವರು ಪಾಲ್ಗೊಂಡಿದ್ದರು. ಬರಹಗಾರ ಅಬ್ದುಲ್ ರಶೀದ್ ಗೋಷ್ಠಿಯನ್ನು ನಡೆಸಿಕೊಟ್ಟರು.

ಶಿಕ್ಷಕರಾದ ಮೊಹಮ್ಮದ್ ಖಲೀಮ್ ಅವರಿಗೆ ದೇವಾಲಯಗಳ ನಂಟು ಹೇಗೆ? ಎಂದು ಅಬ್ದುಲ್ ರಶೀದ್ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅವರು, ಬಸರಾಳು ಗ್ರಾಮದ ಶಾಲೆಯಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದೆ. ಅಲ್ಲಿಯೇ ಶಾಲೆಯ ಒಂದು ಕಿ.ಮೀ ದೂರದಲ್ಲಿ ಹೊಯ್ಸಳರ ಕಾಲದ ಒಂದು ದೇವಾಲಯವಿತ್ತು. ಅದರ ಬಗ್ಗೆ ಕುತೂಹಲ ಹೆಚ್ಚಾಗಿ ಅಲ್ಲಿಗೆ ಭೇಟಿ ನೀಡಿ ಅದರ ಬಗ್ಗೆ ತಿಳಿದುಕೊಂಡು ನಂತರ ಅದರ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಗೆ ಒಂದು ಲೇಖನ ಬರೆದು ಕಳುಹಿಸಿದ್ದೆ. ಅದು ಪ್ರಕಟವಾಯಿತು. ಅಲ್ಲಿಂದ ಸಂರಕ್ಷಣಾ ಕಾರ್ಯ ಹೆಚ್ಚಾಯಿತು ಎಂದು ವಿವರಿಸಿದರು.

ಅನೇಕ ಸ್ಥಳಗಳಲ್ಲಿ ವೀರಗಲ್ಲುಗಳನ್ನು ಮೋರಿಯಲ್ಲಿ ಹಾಕಿರುವುದು, ಬಟ್ಟೆ ಹೊಗೆಯಲು ಬಳಸಿಕೊಂಡಿರುವುದು ಕಂಡುಬಂತು. ಅದನ್ನು ಗಮನಿಸಿ ಗ್ರಾಮಸ್ಥರಿಗೆ ಅದರ ಬಗ್ಗೆ ಮಾಹಿತಿ ನೀಡಿ ಅದರ ಸಂರಕ್ಷಣೆ ಮಾಡುವ ಕಾರ್ಯದಲ್ಲಿ ನಿರತನಾಗಿದ್ದೇನೆ ಎಂದರು.

ಯಕ್ಷಗಾನ ಕಲಾವಿದ ಜಬ್ಬರ್ ಸಾಮೋ ಮಾತನಾಡಿ, ಕಲೆ ಹೇಗೆ ಅಂಟುತ್ತದೆ ಎಂಬುದಕ್ಕೆ ಕಾರಣ ಸಿಗುವುದಿಲ್ಲ. ಯಕ್ಷಗಾನದಲ್ಲಿ ಮಾತೇ ಪ್ರಧಾನವಾಗಿದ್ದು, ಕಾರಣ ಬೇರೆ ಪ್ರೇರಣೆ ಬೇರೆ ಇಲ್ಲ. ಮುಸ್ಲಿಂ ಸಮುದಾಯದವನಾಗಿರುವುದರಿಂದ ಆರಂಭದಲ್ಲಿ ಅನೇಕ ತೊಡಕುಗಳು ಉಂಟಾಯಿತು. ಆದರೆ, ನಾನು ಯಾವುದಕ್ಕೂ ಹೆದರಲಿಲ್ಲ. ಕುಮಾರ ಸುಬ್ರಮಣ್ಯ ಭಟ್ಟರು ಮತ್ತು ದಲಿತ ಸಮುದಾಯದ ಐತ ಕೂಡ ನನಗೆ ಗುರುವಾಗಿದ್ದು, ಪ್ರೇರಣೆ ನೀಡಿದವರು ಕೆಲವರು ಇದ್ದಾರೆ ಎಂದು ಹೇಳಿದ ಅವರು, ಶೂರ್ಪಣಕಿ ಪಾತ್ರದ ಡೈಲಾಗ್ ಹೇಳುವ ಮೂಲಕ ಎಲ್ಲರ ಗಮನಸೆಳೆದರು.

ಪುಸ್ತಕ ಪ್ರೇಮಿ ಸೈಯದ್ ಐಸಾಕ್ ಮಾತನಾಡಿ, 7 ವರ್ಷದವನಾಗಿದ್ದಾಗ ಗಂಜಾಂನಲ್ಲಿ ಗೌಡ, ಲಿಂಗಾಯಿತ ಸೇರಿದಂತೆ ಎಲ್ಲಾ ಸಮುದಾಯದವರ ಮನೆಯಲ್ಲಿ ಜೀತಕ್ಕೆ ಇದ್ದೆ. ಇದರಿಂದ ವಿದ್ಯಾಭ್ಯಾಸ ಮಾಡಲು ಸಾಧ್ಯವಾಗಲಿಲ್ಲ. ಆದರೆ, ಇಲ್ಲಿಯೇ ಕೂಗಳತೆ ದೂರದಲ್ಲಿ ಶಾಲೆಯಿಂದ ಕನ್ನಡದ ಪದ್ಯಗಳು ನನ್ನನ್ನೂ ಸೆಳೆಯುತ್ತಿತು. ಇದರಿಂದ ಕನ್ನಡದ ಮೇಲೆ ಒಲವು ಹೆಚ್ಚಾಯಿತು. ಮೈಸೂರಿಗೆ ಬಂದ ನಂತರ ರಾಜೀವ ನಗರದಲ್ಲಿ ಮೊದಲು ಜನರು ಓದಲಿ ಎಂಬ ಕಾರಣಕ್ಕೆ ದಿನಪತ್ರಿಕೆಗಳನ್ನು ಇಡುತ್ತಿದ್ದೆ. ಹಾಗೇ ಗ್ರಂಥಾಲಯ ತೆರೆದೆ ಎಂದ ಅವರು, ಕನ್ನಡಾಭಿಮಾನ ನನ್ನ ರಕ್ತದಲ್ಲಿದ್ದು, ಕನ್ನಡ ಅಂದರೆ ರೋಮಾಂಚನ ಆಗುತ್ತದೆ. ಕನ್ನಡದ ಹಬ್ಬ ಬಂದಾಗ ಖುಷಿ ಆಗುತ್ತದೆ. ಕನ್ನಡದ ಬಗ್ಗೆ ಕೀಳರಿಮೆ ಆದಾಗ ಬೇಸರವಾಗುತ್ತದೆ ಎಂದರು.

ಲಂಕಾ ಯುವಕರು ಗತಕಾಲದ ಬಗ್ಗೆ ತಿಳಿದುಕೊಳ್ಳಬೇಕು

ಬೂಕರ್ ಪ್ರಶಸ್ತಿ ವಿಜೇತ ಬರಹಗಾರ ಶೆಹನ್ ಕರುಣಾತಿಲಕ್ ಕರೆ



ಮೈಸೂರು, ಜು.2(ಆರ್‌ಕೆ)–ಶ್ರೀಲಂಕಾ ಯುವಕರು ಗತಕಾಲದ ಇತಿಹಾಸದ ಬಗ್ಗೆ ತಿಳಿದುಕೊಳ್ಳಬೇಕೆಂದು ಬೂಕರ್ ಪ್ರಶಸ್ತಿ ವಿಜೇತ 'ದಿ ಸೆವೆನ್ ಮೂನ್ಸ್ ಆಫ್ ಮಾಲಿ ಅಲ್ಮೇಡಾ' ಪುಸ್ತಕ ಲೇಖಕರಾದ ಶೆಹನ್ ಕರುಣಾತಿಲಕ್ ಅವರು ಇಂದಿಲ್ಲಿ ಕರೆ ನೀಡಿದ್ದಾರೆ.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್–2015 ಸಹಯೋಗದೊಂದಿಗೆ ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿದ್ದ 7ನೇ ಆವೃತ್ತಿಯ ಮೈಸೂರು ಸಾಹಿತ್ಯೋತ್ಸವ ಕಾರ್ಯಕ್ರಮದ 2ನೇ ದಿನವಾದ ಇಂದು ಮಾಧ್ಯಮ ವೃತ್ತಿಪರರಾದ ದೀಪ್ತಿ ಕೋಟಿಯನ್ ಅವರು ನಡೆಸಿದ ಸಂವಾದದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶನಿವಾರ ಚರ್ಚೆಯಲ್ಲಿ ಹೊರ ಹೊಮ್ಮಿದ ವಿವಿಧ ವಿಷಯಗಳ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡ ಅವರು, ಹಲವು ಯುವಕರು ಅನೇಕ ವಿಷಯಗಳ ಬಗ್ಗೆ ಯೋಚಿಸಲು ನನ್ನ ಬಳಿಗೆ ಬರುತ್ತಾರೆ. ಆದರೆ ಅವರಿಗೆ ನಾನು ಸಲಹೆ ನೀಡುವುದೇನೆಂದರೆ, ದೇಶದ ಹಿಂದಿನ ಪರಿಸ್ಥಿತಿಯನ್ನು ಅರಿಯಬೇಕು. ದೇಶವು ಹತ್ಯೆಗಳು ಮತ್ತು ಬಾಂಬ್ ಸ್ಫೋಟದಿಂದ ನಲುಗಿದ ಬಗ್ಗೆ ತಿಳಿಯಬೇಕು ಎಂದರು.

ತಾವು ಬರೆದ ಪುಸ್ತಕದ ಪ್ರಮೇಯ ವಿವರಿಸಿದ ಕರುಣಾತಿಲಕ ಅವರು, ಅಲ್ಲಿ ಮಾಲಿ ಅಲ್ಮೇಡಾ ಸತ್ತಿದ್ದಾನೆ. ಛಾಯಾಗ್ರಾಹಕ ತನ್ನ ಸಾವಿನ ರಹಸ್ಯವನ್ನು ಪರಿಹರಿಸಲು ಹೊರಟಿದ್ದನು. ಹಾಗೆಯೇ ಒಂದು ವಾರದ ಸಮಯ ನೀಡಲಾಗಿರುತ್ತದೆ. ಆ ಸಮಯದಲ್ಲಿ ಅವರು ಮರಣಾನಂತರದ ಜೀವನ ಮತ್ತು ನೈಜ ಪ್ರಪಂಚದ ನಡುವೆ ಪ್ರಯಾಣಿಸಬಹುದೆಂದು ಯೋಚಿಸಿದ್ದನು ಎಂದರು. ನಾನು ಭೇಟಿ ನೀಡಿದ್ದೇನೆ. ದೆವ್ವದ ಮನೆಗಳು ಮತ್ತು ಹಳ್ಳಿಗಳು ಸುನಾಮಿಯಂತಹ ದುರಂತದ ಬಗ್ಗೆ ಅಧ್ಯಯನ ಮಾಡುವುದರ ಜೊತೆಗೆ ಸಂಶೋಧನೆ ಹಾಗೂ ಮಾನಸಿಕ ವಿದ್ಯಮಾನಗಳನ್ನು ಪ್ರಚೋದಿಸುವ ಹಲವು ಆತ್ಮಗಳ ಕಥೆಗಳಿಗೆ ಧಾರ್ಮಿಕ ಗ್ರಂಥಗಳು ಸಾಹಿತ್ಯ ಕೃತಿಗಳಿಗಿಂತ ವಿಭಿನ್ನವಾಗಿ ಕಾಲ್ಪನಿಕ ಕಥೆಗಳು ಸೂಕ್ಷ್ಮ ಸಂದೇಶಗಳನ್ನು ನೀಡಬಲ್ಲವು ಎಂದು ತಿಳಿಸಿದರು.

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಥವಾ ಚಾಟ್ ಜಿಪಿಟಿ ಕುರಿತಂತೆ ಬರಹಗಳು ಬರಬಹುದೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕರುಣಾತಿಲಕ್ ಅವರು, ಅಂತಹ ಸಾಧ್ಯತೆಗಳನ್ನು ತಳ್ಳಿಹಾಕಿದರಲ್ಲದೆ, ತಮ್ಮ ಪ್ರಶಸ್ತಿ ವಿಜೇತ ಪುಸ್ತಕದ ಸಿಂಹಳೀಯ ಮತ್ತು ತಮಿಳು ಆವೃತ್ತಿಗಳು ಶೀಘ್ರದಲ್ಲೇ ಹೊರ ಬೀಳಲಿವೆ ಎಂದರು.

ಬರಹಗಾರರಿಗೆ ಪ್ರಚಲಿತ ವಿದ್ಯಮಾನದ ಅರಿವಿರಬೇಕು

ಖ್ಯಾತ ಲೇಖಕಿ ರುಗ್ಮಣಿ ಪ್ರಭಾಕರ್ ಅಭಿಮತ



ಮೈಸೂರು. ಜು. 2(ಸಿಎನ್)– ಬರಹಗಾರರಿಗೆ ಸಮಚಿತ್ತತೆ, ಸಹನೆ ಜೊತೆಗೆ ಪ್ರಚಲಿತ ವಿದ್ಯಮಾನಗಳ ಅರಿವಿರಬೇಕು. ಪ್ರತಿಯೊಂದು ಪುಸ್ತಕವು ಓದುಗರ ಮನ ಸೆಳೆಯುವಂತಿರಬೇಕು. ಆಗಲೇ ಒಬ್ಬ ಸಾಹಿತಿಯ ಜನನವಾಗುವುದು ಎಂದು ಖ್ಯಾತ ಲೇಖಕಿ ರುಗ್ಮಣಿ ಪ್ರಭಾಕರ್ ಅಭಿಪ್ರಾಯಪಟ್ಟರು.

ನಗರದ ಸದರನ್ ಸ್ಟಾರ್ ಹೋಟೆಲ್‌ನ ಜ್ಯೋತಿ ಸಭಾಂಗಣದಲ್ಲಿ, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ 2015 ಇವರುಗಳ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ, ಪ್ರಸಕ್ತ ಸಾಲಿನ 'ಮೈಸೂರು ಸಾಹಿತ್ಯೋತ್ಸವ' ವಿಚಾರ ಗೋಷ್ಠಿಯಲ್ಲಿ ನಡೆದ 'to cut a long story short the making an anthology' ವಿಷಯ ಕುರಿತು ಅವರು ಮಾತನಾಡಿದರು.

ಬಾಲ್ಯದಲ್ಲಿ, ನನ್ನ ತಾಯಿ ನನ್ನನ್ನು ಟೈಪಿಂಗ್ ತರಗತಿಗೆ ಕಳುಹಿಸಿದರು. ಇತರ ತಾಯಂದಿರು ತಮ್ಮ ಮಕ್ಕಳನ್ನು ಟೆನ್ನಿಸ್ ಕ್ಲಾಸ್ ಅಥವಾ ಡ್ಯಾನ್ಸ್ ಕ್ಲಾಸ್‌ಗೆ ಕಳುಹಿಸಿದರು. ಆದರೆ ನನ್ನ ತಾಯಿಯು ಇತರ ಹಲವು ವಿಧಗಳಿಗಿಂತ ಟೈಪಿಂಗ್ ಅದ್ಭುತವಾಗಿದೆ ಎಂದು ಕಳುಹಿಸಿದರು. ಪ್ರಾರಂಭದಲ್ಲಿ ಸಾಕಷ್ಟು ತೊಂದರೆಯಾಯಿತು ಬಳಿಕ ಹೊಂದಿಕೊಂಡೆ. ಬಹುಶಃ ಇಲ್ಲಿಂದ ನಾನು ಸಾಹಿತ್ಯದೆಡೆಗೆ ಆಸಕ್ತಿ ಬೆಳೆಯುತ್ತಾ ಬಂದಿದೆ ಎಂದರು.

ರಿಲೇಶನ್ ಶಿಪ್ ರಾಗಾ ಪುಸ್ತಕದ ಬಗ್ಗೆ ಮಾತನಾಡಿ, ಈ ಪುಸ್ತಕ ರಚಿಸಲು ನನ್ನೊಬ್ಬಳ ಶ್ರಮವಿಲ್ಲ ನಮ್ಮದೊಂದು ಸಮಾನ ಮನಸ್ಕರ ಸಾಹಿತಿಗಳ ತಂಡವಿದೆ. ಎಲ್ಲರೂ ಚರ್ಚಿಸಿ, ಕಥೆಯ ಸಾಧಕಬಾಧಕದ ಬಗ್ಗೆ ತಿಳಿದು, ಸಂಪೂರ್ಣ ತಿಳಿದ ಬಳಿಕವೇ ಪುಸ್ತಕ ರಚಿಸುತ್ತೇವೆ ಎಂದರು.

ಒಂದು ಕಥೆಯು ಪಾತ್ರವನ್ನು ಹಾಳು ಮಾಡಬಹುದು, ಇಲ್ಲವೇ ಪಾತ್ರವನ್ನು ಅಲಂಕರಿಸಬಹುದು. ನಾನು ಉತ್ತಮವಾದದ್ದನ್ನು ಪಡೆಯಲು ಬಯಸುತ್ತೇನೆ. ಈ ನಿಟ್ಟಿನಲ್ಲಿ 23 ವಿಭಿನ್ನ ಲೇಖಕರು ಹಾಗೂ ನಾನು ಅವರ ಸ್ವರವನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವಿತ್ತು. ವ್ಯಾಕರಣ ಮತ್ತು ವಿರಾಮ ಚಿಹ್ನೆಗಳು, ಸತ್ಯ ಪರಿಶೀಲನೆ, ಕಪ್ಪು ಮತ್ತು ಬಿಳುಪು ಕೆಲವು ಜೇನುಗೂಡಿನ, ಸ್ವಲ್ಪ ಬಣ್ಣವನ್ನು ಸೇರಿಸುವುದು ಸಂಪಾದಕರ ಸವಾಲಿನ ಕೆಲಸವಾಗಿತ್ತು. ಇದೇ ಮೊದಲ ಬಾರಿಗೆ ಎಲ್ಲಾ ಕಲಾವಿದರನ್ನು ಕಥೆ ಕೇಳಲು ಕೂರಿಸಿ, ವಿಮರ್ಶಿಸಿ, ಚರ್ಚಿಸಿದ ಬಳಿಕ ಪುಸ್ತಕ ಬರೆಯುತ್ತಿರುವುದು. ಇದು ಹೀಗೇ ಮುಂದುವರಿಯಲಿದೆ ಎಂದರು.

ಬಳಿಕ ಲೇಖಕಿ ವಿಲಾಂಜನ್ ಚೌಧರಿ ಮಾತನಾಡಿ, ಮೊದಮೊದಲು ಕಥೆ ಪ್ರಬಂಧ ಎನ್ನಿಸಲು ಶುರುವಾಯಿತು. ನಾನು ಬೈದದ್ದು ಉಂಟು. ಬಳಿಕ ಕಥೆಯನ್ನು ತಿದ್ದಿ ತೀಡಿದ ಮೇಲೆ ಒಂದು ಸುಂದರ ಪುಸ್ತಕವಾಗಿ ರೂಪುಗೊಂಡಿತು. ಪ್ರತಿಯೊಬ್ಬ ಕಥೆಗಾರನ ಬಳಿ ಒಂದು ಕಥೆ ಇರುತ್ತದೆ. ನನ್ನ ತಂಡದಲ್ಲಿದ್ದ ಅನೇಕ ಯುವ ಬರಹಗಾರರು ತಮ್ಮದೇ ಆದ ವಿವಿಧ ವಿಭಾಗಗಳಲ್ಲಿ ಪುಸ್ತಕ ರಚಿಸುತ್ತಿದ್ದಾರೆ. ನಾವು ಹೇಳುವ ರೀತಿ ಸರಿಯಿದ್ದರೆ, ನಾವು ಗೆದ್ದಂತೆ ಎಂದರು.

ನಂತರ ಲೇಖಕ ಮುರುಳಿ ಮೂರ್ತಿ ಮಾತನಾಡಿ, ಎಲ್ಲರಲ್ಲೂ ಅವರದೇ ಆದಂತಹ ಕಥೆಗಳಿರುತ್ತವೆ. ಅದನ್ನು ಪುಸ್ತಕದ ರೂಪದಲ್ಲಿ ಹೊರ ತರುವುದು ತುಂಬಾ ಕಠಿಣ. ಆದರೂ ಇದು ಒಂದು ವಿಶೇಷ ಪ್ರಯತ್ನವಾಗಿದೆ. ಈ ನಿಟ್ಟಿನಲ್ಲಿ ಗಮನವಿಟ್ಟು ಓದುಗರೆಲ್ಲರೂ ಸೇರಿಸಿ ಒಂದು ತಂಡ ಮಾಡಿಕೊಂಡೆವು. ಒಂದು ಕಥೆಗೆ ಇಬ್ಬರು ಓದುಗರಂತೆ 23 ಕಥೆಗಳಿಗೆ 46 ಓದುಗರನ್ನು ಆಯ್ಕೆ ಮಾಡಿದೆವು. ಓದುಗರು ಪ್ರತಿ ವಾಕ್ಯವನ್ನು, ಪ್ರತಿ ಪದವನ್ನು, ಪರೀಕ್ಷಿಸುತ್ತಾರೆ. ಯಾವುದು ಸರಿ ಯಾವುದು ತಪ್ಪು ಎನ್ನುವುದನ್ನು ಓದುಗರು ಪರೀಕ್ಷಿಸುವಾಗ, ಕಥೆಗಾರರು ಸುಮ್ಮನಿರುತ್ತಾರೆ. ಅವರೂ ಏನೂ ಮಾತನಾಡುವಂತಿಲ್ಲ. ಈ ರೀತಿಯಾಗಿ ಓದುಗರು (carefully readers) ತೀರ್ಮಾನ ಮಾಡಿದಂತೆ, ಕಥೆಗೆ ಸೂಕ್ತವಾದ ಬದಲಾವಣೆ ಮಾಡಲಾಯಿತು. ಅಲ್ಲದೇ ವಿಶಾಲ ಓದುಗರ ಮನ ಸೆಳೆಯುವುದು ಹೀಗೆ ಎಂದು ಮನದಟ್ಟಾಯಿತು ಎಂದರು.

ಬರಹಗಾರ ಸಿದ್ಧಾರ್ಥ ಪ್ರಕಾಶ್ ಮಾತನಾಡಿ, ಒಬ್ಬ ಕಥೆಗಾರನಾಗಿ ನನಗೆ ಇದರಿಂದ ಉಪಯೋಗವಾಯಿತು. ಕಥೆಯ ಮೇಲೆ ಸಮಚಿತ್ತದಿಂದ ಗಮನ ಹರಿಸುವುದು ಹೆಚ್ಚು ಲಾಭದಾಯಕವೆಂದು ಖಚಿತವಾಯಿತು. ಈ ನಿಟ್ಟಿನಲ್ಲಿ ಮತ್ತಷ್ಟು ಪುಸ್ತಕಗಳು ನಮ್ಮ ತಂಡದಿಂದ ಹೊರಬರುತ್ತವೆ ಎಂದರು.

ಸಂವಾದದಲ್ಲಿ ಲೇಖಕಿ ಪ್ರತಿಮಾ ರಾವ್, ಕಾದಂಬರಿಗಾರ ಕಲ್ಯಾಣ ರಾಮನ್ ದುರ್ಗಾದಾಸ್, ಲೇಖಕ ಆರ್.ಆರ್ ಚೆರ್ಲಾ ಅವರುಗಳು ಕಥೆಯನ್ನು ಹೇಗೆ ತುಂಡರಿಸಿ, ಕಥೆ ಆಯ್ಕೆ ಹೇಗೆ? ಪುಸ್ತಕಗಳಿಗೆ ಬೇಕಾದ ಅಂಶಗಳನ್ನು ಹೆಕ್ಕಿ ತೆಗಿಯುವ ಬಗೆ ಹೇಗೆ ಎಂಬ ಬಗ್ಗೆ ಚುಟುಕಾಗಿ ಮಾಹಿತಿ ನೀಡಿದರು. ಅಲ್ಲದೇ ಪ್ರೇಕ್ಷಕರಿಗೆ ಪ್ರಶ್ನೋತ್ತರಾವಳಿ ನಡೆಸಲಾಯಿತು.

ಜೀವನದಲ್ಲಿ ಹೋರಾಟ ಕಾಣಬೇಕು... ಹೋರಾಟದಲ್ಲಿ ಜೀವನ ಕಾಣಬಾರದು

ಲೇಖಕ ಜೋಗಿ ಅಭಿಮತ



ಮೈಸೂರು, ಜು.2(ಜಿಎ)–ಜೀವನದಲ್ಲಿ ಹೋರಾಟ ಕಾಣಬೇಕು. ಹೋರಾಟದಲ್ಲಿ ಜೀವನ ಕಾಣಬಾರದು ಎಂದು ಲೇಖಕ ಜೋಗಿ ಅಭಿಪ್ರಾಯಪಟ್ಟರು.

ನಗರದಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮ 7ನೇ ಆವೃತ್ತಿಯಲ್ಲಿ ಲೇಖಕ ಜೋಗಿ ಮತ್ತು ಯುವ ಲೇಖಕ ದಾದಾಪೀರ್ ಜೈಮಾನ್ ಅವರು 'ಜೋಳಿಗೆ ತುಂಬಿ ಸುರಿಯುವ ಜೋಗಿ ಯವರ ಬಹುಮುಖ ಬರಹಗಳೊಂದಿಗೆ ನೀಲಿ ಕುರುಂಜಿಯ ನರುಗಂಪು' ಎಂಬ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

ಲೇಖಕ ಜೋಗಿ ಮತ್ತು ಯುವ ಲೇಖಕ ದಾದಾಪೀರ್ ಜೈಮಾನ್ ಅವರೊಟ್ಟಿಗೆ ಕುಸುಮಾ ಆಯರಹಳ್ಳಿ ಸಂವಾದ ನಡೆಸಿ, ಕಥೆಗಳು ಯಾವ ಸಂದರ್ಭದಲ್ಲಿ ಬರೆಯುತ್ತೀರ ಎಂದು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಜೋಗಿ ಅವರು, ಜೀವನದಲ್ಲಿ ಉತ್ತರ ಸಿಗಲಿಲ್ಲ ಎಂದರೆ ಕಥೆ ಬರೆಯುತ್ತೇನೆ. ಬೇರೆಯವರ ಅನುಭವವನ್ನು ಬರೆಸಿ, ಅವರೊಟ್ಟಿಗೆ ಮಾತನಾಡಿದ್ದು, ಪ್ರಭಾವ ಬೀರಿದ ವ್ಯಕ್ತಿಗಳಿಂದ ಕಥೆ ಬರೆಯುತ್ತೇನೆ. ಹಾಗೇ ಯಾವುದೇ ಪಾತ್ರಕ್ಕೆ ಸ್ಪಷ್ಟೀಕರಣ ಕೊಡದಿದ್ದರೆ ಆ ಪಾತ್ರದ ಜೊತೆ ಕಥೆಯೂ ಸಾಯುತ್ತದೆ. ಜೀವನದ ಹುಡುಕಾಟವೇ ಕಥೆಯಾಗಿದೆ ಎಂದರು.

ಬೇರೆಯವರ ಅನುಭವ ಬರೆಯುವುದು ಅಥವಾ ಅವರ ಕಥೆ ಬರೆಯುವಾಗ ತಪ್ಪಿಸ್ಥತೆ ಇರುವುದಿಲ್ಲ. ಹೆಚ್ಚು ಬರೆಯುವುದು ಅಪರಾಧ. ಆದರೆ, ಅದಕ್ಕೆ ಶಿಕ್ಷೆ ಇಲ್ಲ. ನನಗೆ ನಿದ್ರೆ ಬರುವುದಿಲ್ಲ. ದಿನಕ್ಕೆ ಮೂರು ಗಂಟೆ ಮಾತ್ರ ನಿದ್ರೆ ಮಾಡುತ್ತೇನೆ. ಉಳಿದ ಸಂದರ್ಭದಲ್ಲಿ ಆಫೀಸ್ ಕೆಲಸ, ಫಿಲಂ ನೋಡುವುದು ನಂತರ ರಾತ್ರಿ ವೇಳೆಯಲ್ಲಿ ಪುಸ್ತಕ ಬರೆಯುತ್ತೇನೆ ಎಂದರು. ಇದಕ್ಕೆ ದಾದಾಪೀರ್ ಉತ್ತರಿಸಿ, ಕಥೆ ಎಂಬುದು ಪ್ರತಿ ಬಾರಿಯೂ ಬದಲಾಗುತ್ತಿರುತ್ತದೆ. ಬದುಕಿನ ಭಾಗಕ್ಕೆ ಚೌಕಟ್ಟಾಕಿರುವುದು ಕಥೆಯಾಗಿದೆ ಎಂದರು.

ಲೇಖಕರ ಸಾಮಾಜಿಕ ಬದ್ಧತೆ ಕುರಿತು ಜೋಗಿ ಮಾತನಾಡಿ, ಪತ್ರಕರ್ತರಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು, ಸಾಹಿತಿಗಳಿಗೆ ಸಾಮಾಜಿಕ ಬದ್ಧತೆ ಇರಬೇಕು ಎಂಬುದನ್ನು ಕೇಳುತ್ತಿರುತ್ತೇವೆ. ಇಷ್ಟಕ್ಕೂ ಇದು ಹೇಳುವಂತದ್ದಲ್ಲ ಮಾಡುವಂತದ್ದು. ಇಷ್ಟಕ್ಕೂ ಹೇಳುವವರು ಓದಿಯೇ ಇರುವುದಿಲ್ಲ. ಇನ್ನು ಪತ್ರಕರ್ತರು ಅಥವಾ ಲೇಖಕರು ತಮ್ಮ ಬರವಣಿಗೆಯಲ್ಲಿ ಸಾಮಾಜಿಕ ಬದ್ಧತೆ ಇದೆಯೇ ಎಂಬುದನ್ನು ಓದಿಕೊಳ್ಳಬೇಕು ಎಂದರು.

ಪಶ್ಚಿಮಘಟ್ಟ ಹೊತ್ತಿ ಉರಿದಾಗ ತೇಜಸ್ವಿ ಅವರು ಚಿದಂಬರ ರಹಸ್ಯ ಬರೆದರು. ಅದು ಅವರ ಪ್ರತಿಕ್ರಿಯೆ ಆಗಿತ್ತು. ಬೇರೆಯವರಂತೆ ಗಂಟಲು ಅರಚಬಾರದು. ಲೇಖಕನಾದವನು ಹೋರಾಟಗಾರರಂತೆ ಪ್ರತಿಕ್ರಿಯಿಸಲು ಸಾಧ್ಯವಿಲ್ಲ. ಆತನಿಗೆ ಅವನದೇ ಆದ ವೇದಿಕೆ ಇದೆ. ಅದರೆ ಇಂದು ಸಾಮಾಜಿಕ ಜಾಲತಾಣವು ಒತ್ತಡ ಹೇರುವ ಕ್ಷೇತ್ರವಾಗಿ ಮಾರ್ಪಾಡಾಗುತ್ತಿದೆ.

ಜೀವನದಲ್ಲಿ ಹೋರಾಟ ಕಾಣಬೇಕು. ಹೋರಾಟದಲ್ಲಿ ಜೀವನ ಕಾಣಬಾರದು. 20 ರಿಂದ 50ರ ವಯಸ್ಸನ್ನು ಹಣಕ್ಕಾಗಿ ಬೇರೆಯವರಿಗೆ ಅನುಭವವನ್ನು ಧಾರೆ ಎರೆಯುತ್ತಾರೆ. ಕಾದಂಬರಿಯಲ್ಲಿ ಒಬ್ಬ ವ್ಯಕ್ತಿ ಎಂಬುದು ಇದ್ದರೆ ಆಸಕ್ತಿ ಕಡಿಮೆ ಆಗುತ್ತದೆ. ನಾನು ದೆಹಲಿ ಬಗ್ಗೆ ಹೇಳಬೇಕಿತ್ತು. ಅದನ್ನು ಹೇಳಿದೆ. ಇನ್ನು ಸಹದೇವ ಕಾದಂಬರಿಯಲ್ಲಿ ಅಂದಿನ ಸಹದೇವ ಹುಟ್ಟಿದ್ದರೆ ಈಗ ಹೇಗಿರುತ್ತಿದ್ದ ಎಂಬುದನ್ನು ಬರೆದಿದ್ದೇನೆ ಅಷ್ಟೆ ಎಲ್ಲಾ ಪುಸ್ತಕದಲ್ಲಿ ಒಳ್ಳೆಯ ಸಾಲು ಇರುತ್ತದೆ. ಎಂತದ್ದೆ ಕೆಟ್ಟ ಸಿನಿಮಾವಾದರೂ ಒಂದು ಒಳ್ಳೆಯ ಸಂದರ್ಭ ಇರುತ್ತದೆ. 50 ವರ್ಷ ಪೂರ್ತಿ ಜೀವನ ನಡೆಸಿದರೂ ಸುಖ ಇರುವುದಿಲ್ಲ, ಸಿಗುವ ಒಂದು ಸಣ್ಣ ಸುಖಕ್ಕೆ ಇಡೀ ಜೀವನ ಎದುರಿಸಲೇಬೇಕು ಎಂದರು.

ದಾದಾಪೀರ್ ಜೈಮಾನ್ ಮಾತನಾಡಿ, ಬರಹಗಾರನ ನಿಲುವು ಬೇರೆ ಇರುತ್ತೆ ಹುಡುಕುವುದೇ ಬರಹಗಾರರ ಹೊಣೆ ಇಂದು ನಾವು ಸಂಕೀರ್ಣ ಕಾಲದಲ್ಲಿ ಬದುಕುತ್ತಿದ್ದೇವೆ. ಕವಿ ಅಪ್‌ಡೇಟ್ ಅಗಬೇಕು. ಸ್ಪಂದನೆ ಬಹಳ ಮುಖ್ಯ. ಯಾವ ಮಾಧ್ಯಮ ಕೂಡ ಶ್ರೇಷ್ಠ, ಕನಿಷ್ಠ ಎಂಬುದಿಲ್ಲ ಎಂದು ಇಬ್ಬರು ಲೇಖಕರು ಮುಕ್ತವಾಗಿ ಸಂವಾದದಲ್ಲಿ ಚರ್ಚಿಸಿದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ನಾನು ಪತ್ನಿ ಎಂಬ ಕೆಲಸಕ್ಕೆ ರಾಜೀನಾಮೆ ನೀಡುತ್ತಿದ್ದೇನೆ

ಪತಿ : ಆಯ್ತು. ಮತ್ತೊಬ್ಬಳು ಬರುವವರೆಗೆ ನೀನು ಕೆಲಸ ಬಿಡಬಾರದು!

ಮೈಸೂರು ಮಿತ್ರ

ಸೋಮವಾರ, 3 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಸತ್ಯ'ದ ಜೊತೆ ಮತ್ತು 'ಸತ್ತ'ವರ ಜೊತೆ ಜಾಸ್ತಿ ಹೊತ್ತು ಯಾರೂ ಇರೊಲ್ಲ..'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಳೆಗೆ ಸುರಿದರೂ ಅಳೆದು ಸುರಿಯಬೇಕು

ನಿಮ್ಮ ಪತ್ರಗಳು

ಬಡವರ ಕಷ್ಟ ದವಡೆಗೆ ಮೂಲ...

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಜನರು ಉಪಯೋಗಿಸುವಂತಹ ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಗಗನಕ್ಕೇರಿದ್ದು ಸಾರ್ವಜನಿಕರು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ, ಬಿಜೆಪಿ ಸರ್ಕಾರ ಇದ್ದಾಗ ಬೆಲೆ ಏರಿಕೆಯಿಂದ ಹೈರಾಣಾಗಿದ್ದ ಜನರು ಕಾಂಗ್ರೆಸ್ ಸರ್ಕಾರಕ್ಕೆ ಸ್ಪಷ್ಟ ಬಹುಮತ ಕೊಡುವುದರ ಮೂಲಕ ಮತದಾರರು ಐದು ಗ್ಯಾರಂಟಿ ಯೋಜನೆಗಳನ್ನು ನಂಬಿ ಗೆಲುವಿನ ನಗೆಯನ್ನು ತಂದುಕೊಟ್ಟರು, ಆದರೆ ಈ ಸರ್ಕಾರವು ಕೂಡ ಅವರ ಹಾದಿ ಹಿಡಿದಿದ್ದು, ಚುನಾವಣಾ ಸಂದರ್ಭದಲ್ಲಿ ಕೊಟ್ಟಂತಹ ಗ್ಯಾರಂಟಿಗಳನ್ನು ಈಡೇರಿಸಲು ಇನ್ನಿಲ್ಲದ ಕಸರತ್ತನ್ನು ಆದಾಯಕ್ಕಾಗಿ ನಡೆಸುತ್ತಿದ್ದು, ಇತರ ವಸ್ತುಗಳ ಮೇಲೆ ತೆರಿಗೆಯನ್ನು ಹೆಚ್ಚಾಗಿ ವಿಧಿಸುತ್ತಿದ್ದಾರೆ, ಅದರಲ್ಲೂ ವಿದ್ಯುತ್ ದರವನ್ನು ದುಪ್ಪಟ್ಟು ಏರಿಸಿ ಜನರಿಗೆ ಶಾಕ್ ನೀಡಿದ್ದಾರೆ, ತರಕಾರಿಗಳ ಬೆಲೆಗಳು ಕೂಡ ಗಗನಕ್ಕೇರಿದ್ದು, ಹಾಲಿನ ಬೆಲೆಯನ್ನು ಕೂಡ ಹೆಚ್ಚಿಸಿದ್ದಾರೆ, ಆಸ್ತಿ ನೋಂದಣಿ ಶುಲ್ಕವನ್ನು ಮನಬಂದಂತೆ ಹೆಚ್ಚಿಸಿದ್ದಾರೆ, ಮನೆ ಕಂದಾಯವು ದುಬಾರಿಯಾಗಿದೆ, ಒಂದನ್ನು ಉಚಿತವಾಗಿ ಕೊಡಲು ಮತ್ತೊಂದು ವಸ್ತುವಿನ ಬೆಲೆಯನ್ನು ಹೆಚ್ಚಿಸಿ ಸಾಮಾನ್ಯ ಜನರನ್ನು ಸಂಕಷ್ಟಕ್ಕೆ ಸಿಲುಕುವಂತೆ ಮಾಡುತ್ತಿದ್ದಾರೆ, ಗ್ಯಾರಂಟಿಗಳ ಅನುಕೂಲಗಳನ್ನು ಪಡೆಯಲು ಇನ್ನಿಲ್ಲದ ನಿಯಮಗಳನ್ನು ಜಾರಿಗೆ ತಂದು ಜನರ ಆಕ್ರೋಶಕ್ಕೆ ಗುರಿಯಾಗಿದ್ದಾರೆ, ಮಹಿಳೆಯರಿಗಾಗಿ ಉಚಿತ ಪ್ರಯಾಣ ಜಾರಿಗೆ ತಂದಿದ್ದು, ಮಹಿಳೆಯರು ಟೆಂಪಲ್ ರನ್ ಮಾಡುತ್ತಿದ್ದಾರೆ, ಬಸ್‌ಗಳಂತೂ ಕಿಕ್ಕಿರಿದು ತುಂಬಿದ್ದು ಮಹಿಳೆಯರ ಕಾರುಬಾರು ಜೋರಾಗಿದೆ. ಇದರಿಂದ ಅದೆಷ್ಟೋ ಮಹಿಳೆಯರು ಕೈ ಕಾಲು ಮುರಿದುಕೊಂಡಿರುವ ಘಟನೆಗಳು ನಡೆದಿದೆ, ಯಾರಿಗೆ ಹೇಳೋಣ ನಮ್ಮ ಪ್ರಾಬ್ಲಮ್ಮು ಎಂಬಂತೆ "ಬಡವರ ಕಷ್ಟ ದವಡೆಗೆ ಮೂಲ" ಎಂಬ ಮಾತಿನಂತೆ ತಮಗೆ ತಾವೇ ಸಮಾಧಾನಪಟ್ಟಿ ಕೊಳ್ಳುತ್ತಿದ್ದಾರೆ, ಒಂದಂತೂ ಸತ್ಯ ಗ್ಯಾರಂಟಿಗಳನ್ನು ಖಚಿತಪಡಿಸಲು ಎಲ್ಲಾ ವಸ್ತುಗಳ ಮೇಲೆ ಹೆಚ್ಚಾಗಿ ತೆರಿಗೆಯನ್ನು ವಿಧಿಸುತ್ತಿದ್ದಾರೆ, ಅದಕ್ಕೆ ಹೇಳೋದು ಮಾಡಿದ್ದುಣ್ಣೋ ಮಹಾರಾಯ ಎಂದು. ಜನರೇ ಇವೆಲ್ಲವನ್ನು ಅನುಭವಿಸಬೇಕು...

–ಪರಶಿವಮೂರ್ತಿ ಎನ್.ಪಿ., ನಂಜೀಪುರ, ಸರಗೂರು ತಾಲೂಕು.

ಉಚಿತ ಪ್ರಯಾಣದಿಂದ ತೊಂದರೆ

ಮಾನ್ಯರೆ,

ನಾನು 8ನೇ ತರಗತಿಯ ವಿದ್ಯಾರ್ಥಿನಿ. ನನ್ನ ಮನೆ ಜೆ.ಪಿ.ನಗರದ ಕವಿತಾ ಬೇಕರಿಯ ಸಮೀಪವಿದೆ. ನಾನು ಪ್ರತಿದಿನ ನಗರ ಸಾರಿಗೆ ಬಸ್ಸಿನಲ್ಲಿ ಶಾಲೆಗೆ ತೆರಳುತ್ತೇನೆ. ಸರ್ಕಾರದವರು ಇತ್ತೀಚೆಗೆ ಮಹಿಳೆಯರಿಗೆ ಸಾರಿಗೆ ಬಸ್ಸುಗಳಲ್ಲಿ ಉಚಿತ ಪ್ರಯಾಣ ಕಲ್ಪಿಸಿದ ನಂತರ ಬಸ್ಸುಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಇದರಿಂದ ಬಸ್ಸುಗಳು ಕಿಕ್ಕಿರಿದು ತುಂಬಿರುತ್ತದೆ. ಹೀಗಾಗಿ ನಮ್ಮ ನಿಲ್ದಾಣ ಮತ್ತು ಮುಂದಿನ ನಿಲ್ದಾಣಗಳಲ್ಲಿ ಬಸ್ಸುಗಳನ್ನು ನಿಲ್ಲಿಸುತ್ತಿಲ್ಲ. ಇದರಿಂದ ನನಗೆ ಮತ್ತು ನನ್ನಂಥ ಅನೇಕ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸಕಾಲದಲ್ಲಿ ಶಾಲೆಯನ್ನು ತಲುಪಲಾಗುತ್ತಿಲ್ಲ. ಇದು ನಮ್ಮ ಶೈಕ್ಷಣಿಕ ಚಟುವಟಿಕೆಗಳ ಮೇಲೂ ಪರಿಣಾಮ ಬೀರುತ್ತದೆ. ಆದ ಕಾರಣ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಇತ್ತ ಗಮನಹರಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೆಳಗಿನ ಸಮಯ 8.30 ರಿಂದ 9.30 ಮತ್ತು ಸಂಜೆ 4.30 ರಿಂದ 5.30ರ ಸಮಯದಲ್ಲಿ ನಮ್ಮ ಬಡಾವಣೆ ಹಾಗೂ ನಗರದ ಇತರ ಬಡಾವಣೆಗಳಲ್ಲಿ ಹೆಚ್ಚುವರಿ ಬಸ್ಸುಗಳನ್ನು ಕಾರ್ಯಾಚರಣೆಗೊಳಿಸಬೇಕೆಂದು ಕೋರುತ್ತೇನೆ.

–ಧನಲಕ್ಷ್ಮಿ, ಮೈಸೂರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ 'ಸರ್ವಾಧಿಕಾರಿ ಧೋರಣೆ' ಸರಿಯೇ?

ಮಾನ್ಯರೆ,

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ, ಗಣಂಗೂರು ಬಳಿ ಎರಡನೇ ಹಂತದ ಟೋಲ್ ಸಂಗ್ರಹ ಮಾಡಬಾರದೆಂದು ರೈತ ಸಂಘಟನೆ ಸೇರಿದಂತೆ ಅನೇಕ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿದ್ದರೂ, ಟೋಲ್ ಸಂಗ್ರಹಿಸುತ್ತಿರುವುದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ "ಸರ್ವಾಧಿಕಾರಿ ಧೋರಣೆ" ಎನ್ನಲೇಬೇಕಾಗುತ್ತದೆ.

ಹಲವಾರು ಸಂಘಟನೆಗಳು ನಡೆಸುತ್ತಿರುವ ಪ್ರತಿಭಟನೆಗಳಿಗೆ ಬೆಲೆಯೇ ಇಲ್ಲವೇ, ಪ್ರತಿಭಟನಾಕಾರರು ನಾವು ವಾಹನ ಸವಾರರಿಗೆ ಟೋಲ್ ಕಟ್ಟಬೇಡಿ ಎನ್ನುವುದಿಲ್ಲ, ಆದರೆ ಈ ರಸ್ತೆಯಲ್ಲಿ ಮೊದಲು ಮೂಲ ಸೌಕರ್ಯ ಒದಗಿಸಿ, ಅಕ್ಕಪಕ್ಕದ ಸರ್ವಿಸ್ ರಸ್ತೆಗಳ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಇಲ್ಲಿಂದ ಟೋಲ್ ವಸೂಲಿ ಮಾಡಿ, ಇದಕ್ಕೆ ನಮ್ಮ ವಿರೋಧವಿಲ್ಲ ಎನ್ನುತ್ತಾರೆ, ರಾಜ್ಯ ಸರ್ಕಾರದ ಕೆಲವು ಸಚಿವರು ಟೋಲ್ ಸಂಗ್ರಹಕ್ಕೆ ವಿರೋಧ ವ್ಯಕ್ತಪಡಿಸಿದರೂ ಕ್ಯಾರೇ ಎನ್ನುತ್ತಿಲ್ಲ. ಈ ರಸ್ತೆಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಲೋಕಸಭಾ ಸದಸ್ಯ ಪ್ರತಾಪ ಸಿಂಹ ಅವರು ಸಹ ಈ ಟೋಲ್ ಸಂಗ್ರಹವನ್ನು ಸ್ವಲ್ಪ ದಿನಗಳ ಮಟ್ಟಿಗೆ ಮುಂದೂಡಿ ಎಂದರೂ ಅವರ ಮಾತಿಗೂ ಬೆಲೆ ಕೊಡುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಹೀಗಾಗಿ ಇವರಿಗೆ ಕಡಿವಾಣ ಹಾಕುವವರು ಯಾರು?

ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಜನರ ಮಾನವೀಯತೆ ಮರೆಯಾಯಿತೆ...?

ಮಾನ್ಯರೆ,

ಜುಲೈ ಒಂದರಂದು ಮೈಸೂರಿನ ನಾರಾಯಣ ಹೃದಯಾಲಯದ ಬಳಿಯ ರಿಂಗ್ ರಸ್ತೆಯಲ್ಲಿ ಕರುವೊಂದು ಅಪಘಾತದಲ್ಲಿ ತನ್ನ ಎರಡು ಕಾಲು ಕಳೆದುಕೊಂಡು ಒದ್ದಾಡುತ್ತಿದ್ದ ಸುದ್ದಿ ಕೇಳಿ ಮನ ಕಲಕಿತು. ನರಳುತ್ತಾ ಬಿದ್ದಿದ್ದ ಕರುವಿನ ನೆರವಿಗೆ ಗಂಟೆಗಟ್ಟಲೆ ಕಾಯಿಸಿ ಬಾರದ ನಗರಪಾಲಿಕೆ ಹಾಗೂ ಜನರ ಮಾನವೀಯತೆ ಕಣ್ಮರೆಯಾದಂತಿತ್ತು. ಕಾರಣ, ಅದರಿಂದ ಯಾರಿಗೂ ಏನೂ ಆದಾಯವಿಲ್ಲದಿರುವುದು. ಬಿಡಿ, ಆ ಮೂಕಪ್ರಾಣಿಯ ನೆರವಿಗೆ ಬಂದ ವಿದ್ಯಾರ್ಥಿಗಳಾದ ನವೀನ್ ಜೋಸ್ ಇವರ ಸ್ನೇಹಿತರಾದ ಸೀಸಲ್, ರಾಹುಲ್, ಸೆಲ್ವಂ ಹಾಗೂ ಪ್ರವೀಣ್‌ರವರಿಗೆ ಆ ದೇವರು ಒಳ್ಳೆಯದು ಮಾಡಲಿ ಹಾಗೂ ಅವರ ಭವಿಷ್ಯ ಉತ್ತಮವಾಗಲಿ ಎಂದು ಆಶಿಸುತ್ತೇನೆ. ಈ ಉತ್ತಮ ಕೆಲಸದಲ್ಲಿ "ಮೈಸೂರು ಮಿತ್ರ" ಪತ್ರಿಕೆ ಕಾರ್ಯ ಪ್ರಶಂಸನೀಯ.


ಸಂತೋಷ ಮೈಸೂರು

ಬೆರಗು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬದುಕಲು ದುಡಿಯಿರಿ; ದುಡಿಯಲು ಬದುಕದಿರಿ..!



> ನಮ್ಮ ದುಡಿಮೆಯಿಂದ ಬರುವ ಹಣ ನಮ್ಮ ಮನೆಯನ್ನು ನಡೆಸಲು ಸಾಕಾಗುತ್ತದೆ. ಆದರೆ ಹೋಲಿಕೆಯಿಂದ ಜೀವನ ನಡೆಸುವವರಿಗೆ, ಎದುರು ಮನೆಯವರೊಂದಿಗೆ ಸ್ಟೇಟಸ್ ಪೈಪೋಟಿಗೆ ಬಿದ್ದು ದುಡಿಯಲು ಪ್ರಾರಂಭಿಸಿದಿರಿ ಎಂದರೆ ದುಡಿಮೆಯ ಹಣ ಸಾಲುವುದಿಲ್ಲ. ಅದು ಬೇರೆ ಏನನ್ನಾದರೂ ಮಾಡಲು ಪ್ರಚೋದಿಸುತ್ತದೆ. ಅನಗತ್ಯ ಒತ್ತಡ ಉಂಟಾಗುತ್ತದೆ. ಹೆಚ್ಚಿನ ದುಡಿಮೆಯಿಂದ ಹೆಚ್ಚಿನ ಆದಾಯ ಬರುತ್ತದೆ. ಆದರೆ ಆರೋಗ್ಯ ಹಳ್ಳಹಿಡಿದಿರುತ್ತದೆ. ಮುಂದೆ ಆರೋಗ್ಯ ಸರಿಪಡಿಸಲು ಮತ್ತೆ ಹೆಚ್ಚು ದುಡಿಮೆ ಮಾಡಬೇಕಾಗುತ್ತದೆ. 'ಕೂತು ಸತ್ತವರುಂಟು, ದುಡಿದು ಸತ್ತವರಿಲ್ಲ' ಎಂಬ ಮಾತೊಂದಿದೆ. ಆದರೆ ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಜನ ದುಡಿಯಲು ಸಾಯುತ್ತಿರುವರೋ, ಸಾಯಲು ದುಡಿಯುತ್ತಿರುವರೋ ಎಂಬ ಅನುಮಾನ ಮೂಡುವ ಮಟ್ಟಿಗೆ ಕೆಲವರು ದುಡಿಯುತ್ತಿದ್ದಾರೆ. ಹಣದ ಆಸೆಗೆ ಕೆಲವರು ಎರಡೆರಡು ಪಾಳಿಯಲ್ಲಿ ಕೆಲಸ ಮಾಡುವುದುಂಟು. ಅಗತ್ಯ ವಿಶ್ರಾಂತಿ ಪಡೆಯದೆ ನರಕ ಜೀವನವನ್ನು ಅನುಭವಿಸುವುದೂ ಉಂಟು.

'ಟೈಮಿಲ್ಲಾರಿ ನಮಗೆ ಟೈಮಿಲ್ಲ, ಟೈಮು ನೋಡ್ಲಿಕ್ಕು ಟೈಮಿಲ್ಲ' ಎಂಬ ಕನ್ನಡ ಗೀತೆಯೊಂದಿದೆ. ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಯಾರಾದರೂ ಹಣ ಕೇಳಿದರೆ ಕೊಟ್ಟಿಯಾರು, ಆದರೆ ಟೈಮ್ ಕೇಳಿದರೆ ಕೊಡಲು ಒಲ್ಲರು. ಯಾಕೆಂದರೆ ಎಲ್ಲರೂ ಬ್ಯುಸಿ. ಅಮೇರಿಕಾ ದೇಶದಲ್ಲಿ 'ಟೈಮ್ ಇಸ್ ಮನಿ' ಎಂಬ ಘೋಷ ವಾಕ್ಯವಿದೆ. ಅದನ್ನು ಅನುಸರಿಸುತ್ತಿರುವರೇನೋ ಎಂಬಂತೆ ನಮ್ಮಲ್ಲೂ ಕೆಲವರು ಯಾವಾಗಲೂ ಬ್ಯುಸಿ ಆಗಿರುತ್ತಾರೆ. ಪ್ರತಿಯೊಂದು ನಿಮಿಷವನ್ನು ಹಣವಾಗಿ ಹೇಗೆ ಪರಿವರ್ತಿಸಬಹುದು, ಹಣವನ್ನು ಎಲ್ಲಿ ಹೂಡಿಕೆ ಮಾಡಿ ದ್ವಿಗುಣಗೊಳಿಸಬಹುದು, ಹಣದಿಂದ ಏನೆಲ್ಲಾ ಕೊಳ್ಳಬಹುದು, ಕೊಂಡ ವಸ್ತುಗಳನ್ನು ಹೇಗೆಲ್ಲಾ ಪ್ರಪಂಚಕ್ಕೆ ತೋರಿಸಬಹುದು. ತನ್ಮೂಲಕ ತಾನು ಉಳ್ಳವನು ಎಂದು ಜನ ಭಾವಿಸಬೇಕು ಎಂಬ ಅನಪೇಕ್ಷಿತ ಅಪೇಕ್ಷೆಯನ್ನು ಬಹುಪಾಲು ಜನ ಹೊಂದಿರುತ್ತಾರೆ. ದುಡಿಮೆಯೇ ದೇವರು, ಕಾಯಕವೇ ಕೈಲಾಸ, ವರ್ಕ್ ಇಸ್ ವರ್ಷಿಪ್... ಹೀಗೆ ದುಡಿಮೆ ಕುರಿತು ಜಾಗೃತಿ ಮೂಡಿಸುವ ಅನೇಕ ಉಕ್ತಿಗಳು ಜನರನ್ನು ಪ್ರೇರೇಪಿಸುತ್ತವೆ. ಹೌದು ಮನುಷ್ಯ ತನ್ನ ಜೀವನಕ್ಕಾಗಿ ದುಡಿಯಲೇಬೇಕು, ಅದು ಜೀವನದ ಒಂದು ಪ್ರಮುಖ ಅಂಗ. ಜೀವನದಲ್ಲಿ ದುಡಿಯಬೇಕು ನಿಜ, ಆದರೆ ಕೇವಲ ದುಡಿಯುವುದೇ ಜೀವನವಾಗಬಾರದು.

ಅನೇಕರಿಗೆ ಅನೇಕ ರೀತಿಯ ಗೀಳು ಇರುವಂತೆ ಕೆಲವರಿಗೆ ದುಡಿಯುವುದೇ ಗೀಳು. ಅವರಿಗೆ ರಜಾ ದಿನ ಬಂದರೂ, ತೀರ್ಥ ಕ್ಷೇತ್ರಕ್ಕೆ ಹೋದರೂ, ಮನೆಯಲ್ಲಿ ಶುಭ ಕಾರ್ಯ ನಡೆಯುತ್ತಿದ್ದರೂ, ಯಾರಾದರೂ ವಿಧಿವಶರಾಗಿದ್ದರೂ..... ಯಾವಾಗಲೂ ದುಡಿಮೆಯದೇ ಚಿಂತೆ. ಮನುಷ್ಯ ಕ್ರಿಯಾಶೀಲನಾಗಬೇಕೆಂದರೆ ದುಡಿಮೆ ಮಾಡಲೇಬೇಕು. ಎಲ್ಲಾ ಕೆಲಸವು ಬೆವರು ಸುರಿಸಿ ದುಡಿಯುವಂತೆ ಇರದೇ ಇರಬಹುದು. ಆದರೆ ಮನುಷ್ಯ ದೈಹಿಕವಾಗಿ ಹಾಗೂ ಮಾನಸಿಕವಾಗಿ ತೊಡಗಿಸಿಕೊಳ್ಳುವ ಅಗತ್ಯ ಇದ್ದೇ ಇರುತ್ತದೆ. ಕೆಲವರಿಗೆ ವಿಶ್ರಾಂತಿಯ ಅರಿವೇ ಇರುವುದಿಲ್ಲ. ವಿಶ್ರಾಂತಿ ಎಂದರೆ ಕೆಲಸ ಬದಲಿಸುವುದು ಎಂದು ಭಾವಿಸಿರುತ್ತಾರೆ. ಎಷ್ಟೋ ಜನ ದುಡಿಯುವ ಗೀಳಿಗೆ ಬಿದ್ದು, ಸರಿಯಾದ ಸಮಯಕ್ಕೆ ಊಟ–ತಿಂಡಿ ಮಾಡದೆ, ವಿಶ್ರಾಂತಿ ಪಡೆಯದೆ, ಅಗತ್ಯ ಅವಧಿ ನಿದ್ರಿಸದೆ ಅಕಾಲ ವೃದ್ಧಾಪ್ಯ ತಲುಪಿಬಿಡುತ್ತಾರೆ ಅಥವಾ ಅನಾರೋಗ್ಯಕ್ಕೆ ತುತ್ತಾಗಿ ಅನೇಕ ಖಾಯಿಲೆಗಳನ್ನು ಆಹ್ವಾನಿಸಿಬಿಟ್ಟಿರುತ್ತಾರೆ. ಕೆಲವರು 'ವಯಸ್ಸಿದ್ದಾಗ ದುಡಿಯಬೇಕು, ಇಳಿವಯಸ್ಸಿನಲ್ಲಿ ವಿಶ್ರಾಂತಿ ಪಡೆಯುವುದು ಇದ್ದೇ ಇರುತ್ತದೆ' ಎಂದು ಭಾವಿಸಿ ಅಗತ್ಯ ಮೀರಿ ದೇಹ ದಂಡಿಸಿ ದುಡಿಯುತ್ತಾರೆ, ಆದರೆ ಅವರು ಅನೇಕ ಕಾರಣಕ್ಕೆ ಅಕಾಲಿಕ ಮೃತ್ಯುವಿಗೆ ಒಳಗಾಗಿಬಿಡುತ್ತಾರೆ. ಇನ್ನೂ ಕೆಲವರು ತಮಗೆ 200–300 ವರ್ಷ ಆಯುಷ್ಯವಿದೆ ಎಂದು ತಪ್ಪು ತಿಳಿದು ದುಡಿಯುತ್ತಿರುತ್ತಾರೆ. ಮನುಷ್ಯನ ಆಯುಷ್ಯ ಸರಾಸರಿ 70–80 ವರ್ಷಗಳು, ಅದೂ ಗ್ಯಾರಂಟಿ ಇಲ್ಲ. ನಾಳೆ ಎಂಬುದು ಅನಿಶ್ಚಿತತೆ ಅಲ್ಲವೇ?

ಮನುಷ್ಯ ಮೂಲಭೂತವಾಗಿ ಬದುಕಿನ ಉದ್ದೇಶವನ್ನು ಅರಿಯಬೇಕಾಗುತ್ತದೆ. ಭೂಮಿ ಮೇಲೆ ಜೀವಿಸಲು ಆಹಾರ, ಆಶ್ರಯ, ಅನೇಕ ಸವಲತ್ತುಗಳು ಅವಶ್ಯ. ಅದಕ್ಕಾಗಿ ಏನಾದರೂ ಕಾಯಕ ಮಾಡಲೇಬೇಕು. ಆದರೆ ಮಾಡುವ ಕೆಲಸಕ್ಕೆ ಇತಿಮಿತಿ ಇಲ್ಲವೇ? ದುರಾಸೆ ಅಲ್ಲದಿದ್ದರೂ ದುಡಿಮೆ ಆಚೆಗಿನ ಪ್ರಪಂಚ ತಿಳಿಯದ ಅನೇಕ ಜನ ನಮ್ಮ ನಿಮ್ಮ ನಡುವೆ ಇದ್ದಾರೆ. ಅನೇಕರು ಒಂದು ಕೆಲಸದಿಂದ ಸಿಗುವ ಸಂಬಳ ಬದುಕಿಗೆ ಸಾಲದು ಎಂದು ಸಂಜೆ ವೇಳೆ, ಅಥವಾ ಮುಂಜಾನೆಯೇ ಹೆಚ್ಚುವರಿ ದುಡಿಮೆಗೆ ಹಾತೊರೆಯುತ್ತಾರೆ. ಇದರಿಂದ ಹಣ ಹರಿದು ಬರುತ್ತದೆ ನಿಜ. ಆದರೆ ದೇಹಾಲಸ್ಯವೂ ಆಗುತ್ತದೆ. ಪ್ರತಿಯೊಬ್ಬರ ದೇಹಕ್ಕೂ ಒಂದು ಇತಿಮಿತಿ ಇರುತ್ತದೆ. ಮಿತಿ ಮೀರಿದರೆ ಆರೋಗ್ಯ ಹದಗೆಡುತ್ತದೆ. ಮನುಷ್ಯ ಹೇಗೆ ಹಣವನ್ನು ರಕ್ಷಿಸಲು ಯತ್ನಿಸುತ್ತಾನೆಯೋ, ಹಾಗೆ ದೇಹವನ್ನು ರಕ್ಷಿಸುವ ಅಗತ್ಯವಿದೆ. ದಣಿದ ದೇಹವನ್ನು ಹಣ ಕಾಪಾಡಲೂ ಆಗದೇ ಹೋಗಬಹುದು. ದೇಹದಂಡನೆಗೂ ಒಂದು ಮಿತಿ ಇರಬೇಕಾಗುತ್ತದೆ. ಮಿತಿಮೀರಿದ ದೇಹದಂಡನೆ ಸ್ವಯಂ ಶಿಕ್ಷೆ ಅಷ್ಟೇ ಅಲ್ಲ ಅಪಾಯಕಾರಿಯಾಗಬಲ್ಲದು. ಅನಾರೋಗ್ಯಪೀಡಿತ ದೇಹವನ್ನು ಹಣದಿಂದ ಸರಿಪಡಿಸಲು ಸಾಧ್ಯವಾಗದೇ ಇರಬಹುದು.

ದೇಹಕ್ಕೆ ದುಡಿಮೆ ಎಷ್ಟು ಅವಶ್ಯವೋ, ವಿಶ್ರಾಂತಿಯೂ ಅಷ್ಟೇ ಅವಶ್ಯ. ಅದಕ್ಕೆ ಸರ್ಕಾರ ರಜಾ ದಿನಗಳನ್ನು ನಿಗದಿ ಮಾಡಿದೆ. ಮುಂದುವರಿದ ರಾಷ್ಟ್ರಗಳಲ್ಲಿ ವಾರದಲ್ಲಿ ಐದು ದಿನ ಮಾತ್ರ ಕೆಲಸ ನಿರ್ವಹಿಸಬೇಕಿರುತ್ತದೆ. ಶನಿವಾರ ಹಾಗೂ ಭಾನುವಾರ ವಾರಾಂತ್ಯ ದಿನಗಳಾಗಿದ್ದು, ಜನ ವಿಶ್ರಾಂತಿಯ ಜೊತೆಗೆ ಮನರಂಜನೆ, ಪ್ರವಾಸ ಮಾಡುವ ಮೂಲಕ ಮನೋಲ್ಲಾಸ ಹೊಂದುತ್ತಾರೆ. ಮನರಂಜನೆ ಎಂಬುದು ಮನುಷ್ಯನಿಗೆ ಅವಶ್ಯಕ ಸಂಗತಿಗಳಲ್ಲೊಂದು, ಅದು ಮನುಷ್ಯನ ಮನಸ್ಸನ್ನು ಉಲ್ಲಸಿತಗೊಳಿಸಿ ದೈನಂದಿನ ಕೆಲಸಗಳಲ್ಲಿ ಚಟುವಟಿಕೆಯಿಂದ ಇರಲು ಸಹಕಾರಿಯಾಗಿರುತ್ತದೆ. ಸಮಯ ಹೊಂದಿಸಿ ಸಿನೆಮಾ, ನಾಟಕವನ್ನು ಥಿಯೇಟರ್‌ನಲ್ಲಿಯೇ ಹೋಗಿ ನೋಡಿ ಆನಂದಿಸಬೇಕು.'ಅತಿಯಾದರೆ ಅಮೃತವೂ ವಿಷ' ಎಂಬ ಮಾತಿನಂತೆ, ಮನರಂಜನೆಗೆ ಮನಸ್ಸನ್ನು ಒಗ್ಗಿಸಿದರೆ ಅದು ಒಂದು ಥರದ ಗೀಳಾಗಿ ಸೋಮಾರಿತನ ಮೈಗೂಡುತ್ತದೆ. ಹೇಗೆ ಅತಿಯಾದ ದುಡಿಮೆಯಿಂದ ದೇಹ ದಣಿದು, ಪರೋಕ್ಷ ಕಾಯಿಲೆಗಳು ಆವರಿಸುತ್ತವೆಯೋ ಹಾಗೇ ಸೋಮಾರಿತನ ಹೆಚ್ಚಾದರೆ ದೇಹದಲ್ಲಿ ಜಡತ್ವ ಉಂಟಾಗಿ ಅನೇಕ ಕಾಯಿಲೆಗಳು ಆವರಿಸಿಕೊಳ್ಳುತ್ತವೆ. ಹಾಗಾಗಿ ಸೋಮಾರಿತನ ಎಂಬುದು ಒಂದು ದೊಡ್ಡ ರೋಗವಾಗಿದೆ. ಇಂದಿನ ಅನೇಕ ಮಕ್ಕಳು ಹಾಗೂ ಯುವ ಪೀಳಿಗೆ ದೈನಂದಿನ ಚಟುವಟಿಕೆಗಳಿಗೆ ದೇಹವನ್ನು ಒಗ್ಗಿಸದೆ ಬೊಜ್ಜು ಹೆಚ್ಚಾಗಿ ದೇಹ ರೋಗದ ಗೂಡನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

'ಯಾರಿಗೆ ಸಾಲುತ್ತೆ ಸಂಪಾದನೆ?' ಇದು ಈ ದಿನಮಾನದಲ್ಲಿ ಬಹುತೇಕರು ಕೇಳುವ ಪ್ರಶ್ನೆ. ತಿಂಗಳಿಗೆ ಹತ್ತು ಸಾವಿರ ಸಂಬಳ ಪಡೆಯುವ ವ್ಯಕ್ತಿಯಿಂದ ಹಿಡಿದು ತಿಂಗಳಿಗೆ ಹತ್ತು ಲಕ್ಷ ಸಂಬಳ ಪಡೆಯುವ ವ್ಯಕ್ತಿಯನ್ನು ಕೇಳಿದರೂ 'ಯಾರಿಗೆ ಸಾಲುತ್ತೆ ಸಂಬಳ?' ಎನ್ನುತ್ತಾರೆ. ಮನೆ ಯಜಮಾನನ ದುಡಿಮೆ ತಕ್ಕುದಾಗಿ ಸಂಬಳ ಸಾಲುವುದಿಲ್ಲ ಎಂಬ ಕಾರಣಕ್ಕೆ ನಮ್ಮ ದೇಶದಲ್ಲಿ ಮಹಿಳೆಯರು ಸಹ ಹಳ್ಳಿ–ನಗರ ಎನ್ನದೆ ಎಲ್ಲೆಡೆ ದುಡಿಮೆ ಮಾಡಲು ಕೆಲಸಕ್ಕೆ ಸೇರುತ್ತಿದ್ದಾರೆ. ಇಬ್ಬರ ಸಂಬಳ ಬಂದರೂ ಕುಟುಂಬ ನಿರ್ವಹಣೆಗೆ ಹಣ ಸಾಲುವುದಿಲ್ಲ ಎಂಬ ಪರಿಸ್ಥಿತಿ ಉಂಟಾಗುತ್ತಿದೆ. ಸಂಬಳ ನಮ್ಮ ಅಗತ್ಯಗಳನ್ನು ಪೂರೈಸಬಹುದೇನೋ? ಆದರೆ ನಮ್ಮ ಆಸೆಗಳನ್ನು ಅಥವಾ ದುರಾಸೆಗಳನ್ನು ಪೂರೈಸಲು ಸಾಧ್ಯವಿಲ್ಲ. ದುರಾಸೆ ಎಂಬುದು ತಳವಿಲ್ಲದ ಬಾವಿಯ ಹಾಗೆ. ಎಷ್ಟೇ ದುಡಿದು ಸುರಿದರೂ ಬಾವಿ ತುಂಬುವುದಿಲ್ಲ. ಆ ಕಾರಣಕ್ಕೆ ಯಾರಿಗೂ ದುಡಿಮೆಯಿಂದ ಬರುವ ಹಣ ಎಂದಿಗೂ ಸಾಲುವುದಿಲ್ಲ.

ಹಳ್ಳಿಗಳಲ್ಲಿ ಹಿಂದೆ ರೈತರು ವರ್ಷಕ್ಕೆ ಒಮ್ಮೆ ಫಸಲು ತೆಗೆದ ನಂತರ ಉಳಿದ ದಿನಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆದರೆ ಇಂದು ಹಳ್ಳಿಗಳಲ್ಲೂ ಬಿಡುವಿಲ್ಲದ ಚಟುವಟಿಕೆ. ವಿಶ್ರಾಂತಿ ಪಡೆಯುವವರು ಕೈಲಾಗದವರು ಎಂದು ಹೇಳುವ ಪರಿಸ್ಥಿತಿಗೆ ತಲುಪಿದೆ. ಪ್ರತಿಯೊಂದು ನಿಮಿಷವೂ ಹಣ ಗಳಿಕೆಗೆ ಚಿಂತನೆ ನಡೆಸುವಂತಾಗಿದೆ. ಎಷ್ಟೇ ದುಡಿದರೂ ಸಾಕು ಎನ್ನುವ ಸನ್ನಿವೇಶ ಈಗ ಇಲ್ಲ. ಮನುಷ್ಯನ ಬೇಡಿಕೆ ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಬಿ.ಪಿ. ಹಾಗೂ ಶುಗರ್‌ನಂತಹ ಕಾಯಲೆಗಳು ಹಿಂದೆ ಹಳ್ಳಿ ಜನರನ್ನು ಕಾಡುತ್ತಿರಲಿಲ್ಲ. ಬದಲಾದ ಆಹಾರ ಕ್ರಮಕ್ಕಿಂತ ಹೆಚ್ಚಾಗಿ ಬದಲಾದ ಜೀವನ ಕ್ರಮದಿಂದ ಶ್ರೀಮಂತರ ಕಾಯಿಲೆಗಳು ಸಾಮಾನ್ಯನಿಗೂ ಬರುವಂತ ಸಂದರ್ಭ ಒದಗಿಬಂದಿದೆ. ಯಾರನ್ನು ಕೇಳಿದರೂ ಒತ್ತಡ, ಒತ್ತಡ, ಒತ್ತಡ. 50 ವರ್ಷಗಳ ಹಿಂದೆ ಆರೋಗ್ಯವಂತ ಮಧ್ಯವಯಸ್ಸಿನ ವ್ಯಕ್ತಿಗೆ ದಿನವೊಂದಕ್ಕೆ 1000 ಆಲೋಚನೆಗಳು ಬರುತ್ತಿದ್ದವಂತೆ, ಆದರೆ ಇಂದು ಒಬ್ಬ ವ್ಯಕ್ತಿಗೆ 60,000 ಆಲೋಚನೆಗಳು ಬರು ತ್ತವೆ ಎಂದರೆ ಯೋಚಿಸಿ, ಮನುಷ್ಯ ಎಷ್ಟು ಒತ್ತಡ ಅನುಭವಿಸುತ್ತಿದ್ದಾನೆ ಎಂದು.

ನಮ್ಮ ದುಡಿಮೆಯಿಂದ ಬರುವ ಹಣ ನಮ್ಮ ಮನೆಯನ್ನು ನಡೆಸಲು ಸಾಕಾಗುತ್ತದೆ. ಆದರೆ ಹೋಲಿಕೆಯಿಂದ ಜೀವನ ನಡೆಸುವವರಿಗೆ, ಎದುರು ಮನೆಯವರೊಂದಿಗೆ ಸ್ಟೇಟಸ್ ಪೈಪೋಟಿಗೆ ಬಿದ್ದು ದುಡಿಯಲು ಪ್ರಾರಂಭಿಸಿದಿರಿ ಎಂದರೆ ದುಡಿಮೆಯ ಹಣ ಸಾಲುವುದಿಲ್ಲ. ಅದು ಬೇರೆ ಏನನ್ನಾದರೂ ಮಾಡಲು ಪ್ರಚೋದಿಸುತ್ತದೆ. ಅನಗತ್ಯ ಒತ್ತಡ ಉಂಟಾಗುತ್ತದೆ. ಹೆಚ್ಚಿನ ದುಡಿಮೆಯಿಂದ ಹೆಚ್ಚಿನ ಆದಾಯ ಬರುತ್ತದೆ. ಆದರೆ ಆರೋಗ್ಯ ಹಳ್ಳಹಿಡಿದಿರುತ್ತದೆ. ಮುಂದೆ ಆರೋಗ್ಯ ಸರಿಪಡಿಸಲು ಮತ್ತೆ ಹೆಚ್ಚು ದುಡಿಮೆ ಮಾಡಬೇಕಾಗುತ್ತದೆ. 'ಕೂತು ಸತ್ತವರುಂಟು, ದುಡಿದು ಸತ್ತವರಿಲ್ಲ' ಎಂಬ ಮಾತೊಂದಿದೆ. ಆದರೆ ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಜನ ದುಡಿಯಲು ಸಾಯುತ್ತಿರುವರೋ, ಸಾಯಲು ದುಡಿಯುತ್ತಿರುವರೋ ಎಂಬ ಅನುಮಾನ ಮೂಡುವ ಮಟ್ಟಿಗೆ ಕೆಲವರು ದುಡಿಯುತ್ತಿದ್ದಾರೆ. ಹಣದ ಆಸೆಗೆ ಕೆಲವರು ಎರಡೆರಡು ಪಾಳಿಯಲ್ಲಿ ಕೆಲಸ ಮಾಡುವುದುಂಟು.

ಎಷ್ಟೋ ಮಂದಿ ಪ್ರವಾಸವೆಂದರೆ ಅದು ಮೋಜುಮಸ್ತಿ, ಹಣ ಹಾಗೂ ಸಮಯ ವ್ಯರ್ಥ ಎಂಬ ಮನೋಭಾವವಿದೆ. ಕೆಲಸದ ಒತ್ತಡವಿದೆ ಎಂದು ವರ್ಷಕ್ಕೆ ಒಂದು ಯಾತ್ರೆ ಮಾಡದವರೂ ಇದ್ದಾರೆ. ಸಣ್ಣಪುಟ್ಟ ಕೆಲಸದ ನೆಪವೊಡ್ಡಿ ನಿಗದಿಯಾಗಿದ್ದ ಪ್ರವಾಸವನ್ನು ಮುಂದೂಡುವವರೂ ಇದ್ದಾರೆ. ಎಷ್ಟೋ ಜನ ಸ್ನೇಹಿತರು ಯಾತ್ರೆಗೆ ಕರೆದರೂ ಕೆಲಸದ ಕಾರಣ ಕೊಟ್ಟು ತಪ್ಪಿಸಿಕೊಳ್ಳುವವರೂ ಇದ್ದಾರೆ, ಆದರೆ ಅಂತಹವರ ಅಂತಿಮಯಾತ್ರೆ ಮಾತ್ರ ಅವಧಿಗೂ ಮೊದಲೇ ನಿಗದಿಯಾಗಿಬಿಟ್ಟಿರುತ್ತದೆ. ಜನರ ಜೊತೆಗೆ ಯಾತ್ರೆ ಹೋಗದವ, ತನ್ನ ಅಂತಿಮ ಯಾತ್ರೆಗೆ ಜನಜಾತ್ರೆಯನ್ನೇ ಸೇರಿಸಿಬಿಡುವುದು ಮಾತ್ರ ವಿಡಂಭನೆಯೋ, ವಿಪರ್ಯಾಸವೋ ಅರಿಯದು!

ಮನುಷ್ಯ ಪ್ರಾಣಿಪಕ್ಷಿಗಳಂತೆ ಕ್ರಿಯಾಶೀಲವಾಗಿರಬೇಕು. ಕುಳಿತಲ್ಲಿಯೇ ತಿನ್ನುವ ಅಭ್ಯಾಸ ಬೆಳೆಸಿಕೊಳ್ಳಬಾರದು. ಅಷ್ಟೇ ಅಲ್ಲದೇ ಅವಿರತವಾಗಿ, ಅವಿಶ್ರಾಂತವಾಗಿ ದುಡಿಯಲೂ ಬಾರದು. ಬದುಕು ನಾವು ಎಣಿಸಿದಂತೆ ಇರದು. ನಮಗೆ ಇರುವ ದುಡಿಮೆಯಲ್ಲಿ ನಮ್ಮ ಅಗತ್ಯಗಳನ್ನು ಪೂರೈಸಿಕೊಂಡು, ಇರುವುದರಲ್ಲಿ ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕು. ವಿಶ್ರಾಂತಿ ಬೇಕು ಎನಿಸಿದಾಗ ಅದನ್ನು ಹಣದಲ್ಲಿ ಅಳೆಯದೆ ಆರೋಗ್ಯದ ದೃಷ್ಟಿಕೋನದಿಂದ ಅಳೆದು ವಿಶ್ರಾಂತಿ ಪಡೆಯಬೇಕು. ಕೆಲಸಕ್ಕೆ ಆದ್ಯತೆ ನೀಡುವಂತೆ ಮನರಂಜನೆಗೆ ಹಾಗೂ ಪ್ರವಾಸಕ್ಕೂ ಆದ್ಯತೆ ನೀಡಿ ಆನಂದಿಸಬೇಕು. ಬದುಕನ್ನು ಸಾರ್ಥಕವಾಗಿ ಕಳೆಯಬೇಕು. ಏನಂತೀರಿ?

ಪದ ತಾಂಬೂಲ: ಬದುಕನ್ನು ಸ್ವರ್ಗ ಅಥವಾ ನರಕ ಮಾಡಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ದುಬಾರಿ ಟೋಲ್ ಸಂಗ್ರಹದ ಮೂಲಕ ಸುಲಿಗೆ





ಮೈಸೂರು, ಜು.2(ಎಂಟಿವೈ)– ಮೈಸೂರು–ಬೆಂಗಳೂರು 'ಎಕ್ಸ್‌ಪ್ರೆಸ್ ವೇ'ನಲ್ಲಿ ಸಾರ್ವಜನಿಕರ ವಿರೋಧದ ನಡುವೆಯೂ ಟೋಲ್ ಸಂಗ್ರಹ ಮಾಡುವ ಮೂಲಕ ಹಗಲುದರೋಡೆ ಮತ್ತು ಸುಲಿಗೆ ಮಾಡಲಾಗುತ್ತಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿಂದ ಬೆಂಗಳೂರಿಗೆ ಹೋಗಲು 660 ರೂ. ಟೋಲ್ ಶುಲ್ಕ ಕೊಡಬೇಕಾಗಿದೆ. ಮರಳಿ ಬರಲು 660 ರೂ. ಪಾವತಿಸಬೇಕು. ಮಂಡ್ಯ ಬಳಿ ಪ್ರವೇಶಕ್ಕೆ ರೂ. 330, ರಾಮನಗರ ಬಳಿ ನಿರ್ಗಮನಕ್ಕೆ ರೂ. 330 ವಸೂಲಿ ಮಾಡಲಾಗುತ್ತಿದೆ. ಇತರೆ ರಾಜ್ಯಗಳಲ್ಲಿ 1 ಕಿ.ಮೀ.ಗೆ 1 ರೂ. 48 ಪೈಸೆ ಟೋಲ್ ದರ ನಿಗದಿ ಮಾಡಲಾಗಿದೆ. ಆದರೆ ಕರ್ನಾಟಕದಲ್ಲಿ 1 ಕಿಮೀಗೆ 3.80 ರೂ. ವಸೂಲಿ ಮಾಡಲಾಗುತ್ತಿದೆ. ಇಲ್ಲಿಯವರೆಗೂ 'ಎಕ್ಸ್‌ಪ್ರೆಸ್ ವೇ'ನಲ್ಲಿ 456 ಅಪಘಾತ ಸಂಭವಿಸಿದ್ದು, 189 ಜನರು ಮೃತಪಟ್ಟಿದ್ದಾರೆ ಎಂದು ವಿಷಾದಿಸಿದರು.

ಈ ರಸ್ತೆಯಲ್ಲಿ ಪ್ರತಿದಿನ ಲಕ್ಷ ವಾಹನಗಳು ಸಂಚರಿಸುತ್ತವೆ ಎಂದು ಅಂದಾಜಿಸಲಾಗಿದೆ. 2 ಟೋಲ್‌ಗಳಿಂದ ದಿನಕ್ಕೆ 10 ಕೋಟಿ ರೂ. ಸಂಗ್ರಹವಾಗುತ್ತಿದೆ. 30 ವರ್ಷಕ್ಕೆ ಟೋಲ್ ಸಂಗ್ರಹಕ್ಕೆ ಟೆಂಡರ್ ನೀಡಲಾಗಿದೆ. ವರ್ಷಕ್ಕೆ 3,650 ಕೋಟಿಯಂತೆ 10 ವರ್ಷಕ್ಕೆ 36,500 ಕೋಟಿ ಸಂಗ್ರಹ ಆಗುತ್ತದೆ. 30 ವರ್ಷಕ್ಕೆ 1 ಲಕ್ಷ ಕೋಟಿ ಸಂಗ್ರಹ ಮಾಡಲಾಗುತ್ತದೆ. ಆದರೆ ಈ ರಸ್ತೆಗೆ ನಿರ್ಮಾಣಕ್ಕೆ 9,550 ಕೋಟಿ ರೂ. ಬಳಸಲಾಗಿದೆ. ಇದು ಕೇಂದ್ರ ಸರ್ಕಾರ ಮಾಡುತ್ತಿರುವ ರೋಡ್ ರಾಬರಿ ಎಂದು ಕಿಡಿಕಾರಿದರು.

ಟೋಲ್ ಸಂಗ್ರಹದ ಟೆಂಡರ್ ಅನ್ನು ಸ್ಕೈ ಲಾರ್ಜ್ ಕಂಪನಿಗೆ ನೀಡಲಾಗಿದೆ. ಎಷ್ಟು ಲಕ್ಷಕ್ಕೆ ಇವರಿಗೆ ಟೆಂಡರ್ ನೀಡಲಾಗಿದೆ ಎಂದು ಬಹಿರಂಗ ಮಾಡಬೇಕು. ಸರ್ಕಾರ ಪ್ರತಿದಿನ 59 ಲಕ್ಷ ರೂ. ಸಂಗ್ರಹಿಸಲು ಟೆಂಡರ್ ನೀಡಿದೆ ಎನ್ನಲಾಗಿದೆ. ಅಲ್ಲದೆ, ರಸ್ತೆ ನಿರ್ಮಿಸಿರುವ ಸಂಸ್ಥೆಗೆ ಟೆಂಡರ್ ನೀಡದೆ, ಮೂರನೇ ವ್ಯಕ್ತಿಗೆ ಟೋಲ್ ಸಂಗ್ರಹಕ್ಕೆ ಅವಕಾಶ ನೀಡಿರುವುದರ ಹಿಂದೆ ಲೂಟಿ ಮಾಡುವ ಸಂಚು ಅಡಗಿದೆ. ಕಳೆದ 8 ತಿಂಗಳಿಂದ 3 ಬಾರಿ ಟೋಲ್ ಏರಿಕೆ ಮಾಡಲಾಗಿದೆ. ಇದರಲ್ಲಿ ಪ್ರತಾಪ್ ಸಿಂಹ ಪಾತ್ರ ಏನು? ಎಂದು ಲಕ್ಷ್ಮಣ್ ಪ್ರಶ್ನಿಸಿದರು.

ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಿ ಮೊದಲು: ಹೊಸ ಸರ್ಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳಾಯಿತು. ಬಿಜೆಪಿಯವರು ವಿರೋಧ ಪಕ್ಷ ನಾಯಕನ ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ನಾಯಕರು ಟೀಕಿಸುವ ಮೊದಲು ವಿರೋಧ ಪಕ್ಷದ ನಾಯಕ ಯಾರೆಂಬದು ತಿಳಿಸಬೇಕು ಎಂದರು.

ಮಳೆ ಕೊರತೆ: ರಾಜ್ಯದಲ್ಲಿ ಮಳೆಯ ಅಭಾವ ಉಂಟಾಗಿದೆ. ಜುಲೈ ತಿಂಗಳಿಂದ ಮಳೆಯಾಗುವ ಸಾಧ್ಯತೆ ಇದೆ. ಕುಡಿಯುವ ನೀರಿಗೆ ಸಮಸ್ಯೆಯಾಗುವ ವಾತಾವರಣ ಇದೆ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆ. ತಮಿಳುನಾಡಿಗೆ ಈ ಬಾರಿ ನೀರು ಕೊಡಲು ಸಾಧ್ಯವಾಗಲ್ಲ ಎಂದು ತಿಳಿಸಿದರು.

ನಾಲ್ಕು ಜಲಾನಯನ ಪ್ರದೇಶಗಳಾದ ಕಾವೇರಿ, ಕಬಿನಿ, ಹಾರಂಗಿ, ಹೇಮಾವತಿಯಲ್ಲಿ 7 ಟಿಎಂಸಿ ನೀರು ಮಾತ್ರ ಸಂಗ್ರಹ ಇದೆ. ಕೆ.ಆರ್.ಎಸ್‌ನಲ್ಲಿ 2.825, ಹಾರಂಗಿಯಲ್ಲಿ 1.556, ಕಬಿನಿಯಲ್ಲಿ 0.68, ಹೇಮಾವತಿಯಲ್ಲಿ 2 ಟಿಎಂಸಿ ನೀರಿದೆ. ಬೆಂಗಳೂರು ನಗರ ಒಂದಕ್ಕೆ ಮೂರೂವರೆ ಟಿಎಂಸಿ ನೀರು ಬೇಕು. ಹಾಸನ, ಮಡಿಕೇರಿ, ಮೈಸೂರು ಚಾಮರಾಜನಗರ, ರಾಮನಗರ, ಮಂಡ್ಯ, ತುಮಕೂರು, ಬೆಂಗಳೂರು ಗ್ರಾಮಾಂತರಕ್ಕೆ ಎರಡೂವರೆ ಟಿಎಂಸಿ ನೀರು ಬೇಕು. ಕೃಷಿಗೆ 5 ಟಿಎಂಸಿ ನೀರು ಬೇಕು. ನಾವು ತಮಿಳುನಾಡಿಗೆ 3.5 ಟಿಎಂಸಿ ನೀರು ಬಿಡಬೇಕು. ನಮ್ಮಲ್ಲಿ ಇರೋದು 7 ಟಿಎಂಸಿ ನೀರು ಮಾತ್ರ. ತಮಿಳುನಾಡಿಗೆ ನೀರು ಬಿಟ್ಟರೆ ಬಹಳ ಸಮಸ್ಯೆ ಆಗುತ್ತದೆ. ಹೀಗಾಗಿ ತಮಿಳುನಾಡಿಗೆ ನೀರು ಬಿಡಲಾಗಲ್ಲ. ಕೇಂದ್ರ ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಕಾರ್ಯದರ್ಶಿ ಗಿರೀಶ್, ಮಾಧ್ಯಮ ವಕ್ತಾರ ಎಂ.ಮಹೇಶ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಒಂದನೇ ಪುಟದಿಂದ

ಗ್ಯಾರಂಟಿ ಜಾರಿ ಮಾಡುತ್ತೇವೆ

ಒಟ್ಟಾಗಿಸಿ ಮಹಾಸಂಸ್ಥಾನಕ್ಕೆ ನಾಂದಿ ಹಾಡಲಾಯಿತು. ಮೊದಲ ಸ್ವಾಮೀಜಿ ತಾರಕಾನಂದಪುರಿ ಶ್ರೀಗಳ ಸಾನ್ನಿಧ್ಯದಲ್ಲಿ ಸಾಮಾಜಿಕ ಚಟುವಟಿಕೆ ಮಾಡಿಕೊಂಡು ಬರುತ್ತಿತ್ತು. ಈಗ ನಿರಂಜನಾನಂದಪುರಿ ಶ್ರೀ ಸಾನ್ನಿಧ್ಯದಲ್ಲಿ ಸಮಾಜಮುಖಿ ಕಾರ್ಯಗಳು ನಡೆಯುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಾವು ಚುನಾವಣೆ ವೇಳೆ ನೀಡಿರುವ 5 ಗ್ಯಾರಂಟಿಗಳನ್ನು ಎಷ್ಟೇ ಕಷ್ಟ ಬಂದರೂ ಜಾರಿ ಮಾಡುತ್ತೇವೆ. ಯಾರೇ ಆಡಿಕೊಂಡರೂ ಈ ವರ್ಷದ ಬಜೆಟ್‌ನಲ್ಲೇ 5 ಘೋಷಣೆಗಳಿಗೂ ಹಣ ಕೊಡುತ್ತೇವೆ. ನಮ್ಮ ಘೋಷಣೆಗಳು ಜಾತಿ-ಧರ್ಮ ಮೀರಿರುವಂತಹ ಘೋಷಣೆಗಳಾಗಿದೆ. ಎಲ್ಲಾ ಜನಾಂಗದ ಬಡವರು ಮತ್ತು ಮಧ್ಯಮ ವರ್ಗದವರು ಬಹಳ ಸಂಕಷ್ಟದಲ್ಲಿದ್ದಾರೆ. ಇವರ ಸಂಕಷ್ಟ ನಿವಾರಣೆಗಾಗಿ ಈ ಘೋಷಣೆಗಳನ್ನು ಈಡೇರಿಸುತ್ತಿದ್ದೇವೆ ಎಂದು ಹೇಳಿದ್ದಾರೆ.

ನಾನು ಅಧಿಕಾರದಲ್ಲಿ ಇರುವವರೆಗೂ ಶೋಷಿತ ಜಾತಿಗಳಿಗೆ, ದಲಿತ ಸಮುದಾಯಗಳಿಗೆ, ಅಲ್ಪ ಸಂಖ್ಯಾತ ಸಮುದಾಯಗಳು ಹಾಗೂ ಎಲ್ಲಾ ಜಾತಿಯ ಬಡವರ ಏಳಿಗೆಗೆ ಶ್ರಮಿಸುತ್ತೇನೆ. ನಾನು ಮತ್ತೆ ಚುನಾವಣೆಗೆ ನಿಲ್ಲುವುದಿಲ್ಲ. ಆದರೆ ಕೊನೆಯವರೆಗೂ ರಾಜಕಾರಣದಲ್ಲಿ ಕ್ರಿಯಾಶೀಲವಾಗಿರುತ್ತೇನೆ. ಬಡವರ ಪರ ರಾಜಕಾರಣ, ಹೋರಾಟ ಮುಂದುವರೆಸುತ್ತೇನೆ. ಈ ಸಲುವಾಗಿ ಹೋರಾಡುತ್ತೇನೆ ಎಂದು ಭರವಸೆ ಎಂದಿದ್ದಾರೆ.

ಕಾರ್ಯಕ್ರಮದಲ್ಲಿ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶಾಖಾ ಮಠದ ಈಶ್ವರಾನಂದಪುರಿ ಮಹಾಸ್ವಾಮೀಜಿ, ಸಿದ್ದರಾಮಾನಂದಪುರಿ ಮಹಾಸ್ವಾಮೀಜಿ, ಶಿವಾನಂದಪುರಿ ಮಹಾಸ್ವಾಮೀಜಿ, ತ್ರಿದಂಡಿ ವೆಂಕಟರಾಮಾನುಜ ಮಹಾಸ್ವಾಮೀಜಿ, ಸಮಾಜದ ಮುಖಂಡರಾದ ಎ.ಹೆಚ್.ವಿಶ್ವನಾಥ್, ಸಚಿವರಾದ ಭೈರತಿ ಸುರೇಶ್, ಶಾಸಕರಾದ ಎಸ್.ಟಿ.ಸೋಮಶೇಖರ್, ಮಾಜಿ ಸಚಿವರಾದ ಹೆಚ್.ಎಂ.ರೇವಣ್ಣ, ಕೆ.ಎಸ್.ಈಶ್ವರಪ್ಪ, ಬಂಡೆಪ್ಪ ಕಾಶಂಪುರ್, ಕೊಪ್ಪಳ ವಿವಿ ಕುಲಪತಿ ಬಿ.ಕೆ.ರವಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ವಿಧಾನಮಂಡಲ ಅಧಿವೇಶನ

ಟೀಕಿಸಲಾದ ಹಿಂದಿನ ಬಿಜೆಪಿ ಸರಕಾರದ ಅವಧಿಯ ಎಪಿಎಂಸಿ ಕಾಯಿದೆ ತಿದ್ದುಪಡಿಯನ್ನೂ ರದ್ದುಗೊಳಿಸುವ ನಿರ್ಣಯದಂತೆ ಇದೇ ಅಧಿವೇಶನದಲ್ಲಿ ವಿಧೇಯಕ ಅಂಗೀಕಾರಕ್ಕೂ ಸರಕಾರ ತೀರ್ಮಾನಿಸಿದೆ.

ಒಟ್ಟು 11 ಕಾನೂನು ತಿದ್ದುಪಡಿ ವಿಧೇಯಕಗಳನ್ನು ಅಧಿವೇಶನದಲ್ಲಿ ಮಂಡನೆ ಮಾಡಲು ಸರಕಾರ ಪಟ್ಟಿ ಮಾಡಿದೆ. ಜತೆಗೆ, ವಿವಾದಿತ ಕೃಷಿ ಕಾಯಿದೆ ಹಿಂಪಡೆಯುವುದು, ಗೋಹತ್ಯೆ ನಿಷೇಧ ಕಾಯಿದೆ ವಾಪಸ್ ಮತ್ತಿತರ ಕಾನೂನು ತಿದ್ದುಪಡಿಗಳನ್ನೂ ಇದೇ ಅಧಿವೇಶನದಲ್ಲಿ ತರಲು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಅಧ್ಯಕ್ಷತೆಯ ಪರಿಶೀಲನಾ ಸಮಿತಿ ಸಿದ್ಧತೆಯಲ್ಲಿ ತೊಡಗಿದೆ.

ವಿಪಕ್ಷ ನಾಯಕನ ಆಯ್ಕೆ ಕಗ್ಗಂಟು

ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಅಮಿತ್ ಶಾ ಅವರಿಗೆ ರಾಜ್ಯ ರಾಜಕೀಯ ವಿದ್ಯಮಾನಗಳ ಬಗ್ಗೆ ಮಾಹಿತಿ ನೀಡಿದ್ದೇನೆ. ವಿಧಾನಸಭೆ ವಿಪಕ್ಷ ನಾಯಕರ ಆಯ್ಕೆ ವಿಚಾರವಾಗಿ ನಾಳೆ ವಿನೋದ್ ದಾವ್ಡೆ ಮತ್ತು ಮನ್ಸುಖ್ ಮಾಂಡವಿಯ ವೀಕ್ಷಕರಾಗಿ ಬೆಂಗಳೂರಿಗೆ ಆಗಮಿಸುತ್ತಿದ್ದಾರೆ. ಇವರು ಶಾಸಕರೊಂದಿಗೆ ಚರ್ಚಿಸಿ ಪಕ್ಷದ ವರಿಷ್ಠರಿಗೆ ವರದಿ ಸಲ್ಲಿಸಿದ ನಂತರ ವಿಪಕ್ಷ ನಾಯಕರ ಆಯ್ಕೆ ನಡೆಯಲಿದೆ. ಇದಕ್ಕೆ ಇನ್ನೂ ಎರಡು ಅಥವಾ ಮೂರು ದಿನ ಆಗಬಹುದು. ಅಗತ್ಯ ಬಿದ್ದರೆ ನನ್ನನ್ನು ಮತ್ತೊಮ್ಮೆ ದೆಹಲಿಗೆ ಕರೆಸಿಕೊಳ್ಳುವುದಾಗಿ ವರಿಷ್ಠರು ತಿಳಿಸಿದ್ದಾರೆ ಎಂದು ಯಡಿಯೂರಪ್ಪ ಹೇಳಿದರು.

ಪವಾರ್ ಎನ್‌ಸಿಪಿ ಇಭ್ಭಾಗ

ಈ ಸಂದರ್ಭದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂಧೆ, ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಉಪಸ್ಥಿತರಿದ್ದರು. ಎನ್‌ಸಿಪಿಯ ಎಲ್ಲಾ ಶಾಸಕರು ತಮ್ಮೊಂದಿಗಿದ್ದಾರೆ ಎಂದು ಹೇಳಿರುವ ನೂತನ ಡಿಸಿಎಂ ಅಜಿತ್ ಪವಾರ್ ಭವಿಷ್ಯದಲ್ಲೂ ತಾವು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ಎನ್‌ಸಿಪಿ ಚಿಹ್ನೆಯಡಿ ಸ್ಪರ್ಧಿಸುವುದಾಗಿ ಘೋಷಿಸಿದರು. ಬಿಜೆಪಿ ಜೊತೆ ಕೈಜೋಡಿಸಿದ್ದನ್ನು ಸಮರ್ಥಿಸಿಕೊಂಡ ಅವರು, ನಾವು ಶಿವಸೇನೆ ಜೊತೆ ಸೇರಬಹುದಾದರೆ, ಬಿಜೆಪಿ ಜೊತೆಯೂ ಸೇರಬಹುದು ಎಂದು ಹೇಳಿದರು.

2022ರ ಜೂನ್‌ನಲ್ಲಿ ನಡೆದಿದ್ದ ರಾಜಕೀಯ ಬೆಳವಣಿಗೆಯಲ್ಲಿ ಶಿವಸೇನೆಯ ಏಕನಾಥ ಶಿಂಧೆ ಅವರು ತಮ್ಮ ಬೆಂಬಲಿತ ಶಾಸಕರೊಡಗೂಡಿ ಎನ್‌ಸಿಪಿ, ಶಿವಸೇನೆ ಮತ್ತು ಕಾಂಗ್ರೆಸ್ ಮೈತ್ರಿ ಕೂಟದ ಸರ್ಕಾರವನ್ನು ಕಿತ್ತೊಗೆದು ಬಿಜೆಪಿ ಜೊತೆ ಸೇರಿ ಸರ್ಕಾರ ರಚಿಸಿದ್ದರು. ಇದಾದ ಒಂದೇ ವರ್ಷದಲ್ಲಿ ವಿಪಕ್ಷ ನಾಯಕನಾಗಿದ್ದ ಎನ್‌ಸಿಪಿ ಶಾಸಕ ಇದೀಗ ಏಕನಾಥ ಶಿಂಧೆ ಜೊತೆ ಸೇರಿದ್ದಾರೆ.

2019ರ ಅಕ್ಟೋಬರ್‌ನಲ್ಲಿ ನಡೆದ ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯಲ್ಲಿ ಒಟ್ಟು 288 ಸ್ಥಾನಗಳ ಪೈಕಿ ಬಿಜೆಪಿ 105, ಶಿವಸೇನೆ 56, ಎನ್‌ಸಿಪಿ 54, ಕಾಂಗ್ರೆಸ್ 44 ಹಾಗೂ ಇತರರು 29 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದರು. 2024ರ ಅಕ್ಟೋಬರ್‌ನಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಗೃಹಜ್ಯೋತಿಗೆ ಅರ್ಹರು



ಆಗಸ್ಟ್ ತಿಂಗಳ ಬಿಲ್‌ನಲ್ಲಿ ಪ್ರಯೋಜನ ಸಿಗಲಿದೆ. ಅದೇ ರೀತಿ ಜುಲೈ 25ರಿಂದ ಆಗಸ್ಟ್ 25ರೊಳಗೆ ನೋಂದಾಯಿಸಿಕೊಂಡರೆ ಸೆಪ್ಟೆಂಬರ್ ತಿಂಗಳ ಬಿಲ್‌ನಲ್ಲಿ ಪ್ರಯೋಜನ ದೊರೆಯಲಿದೆ (ಪ್ರತಿ ತಿಂಗಳು 25ನೇ ತಾರೀಕಿನಿಂದ ನಂತರದ ತಿಂಗಳ 25ನೇ ತಾರೀಕಿನವರೆಗೆ ಬಿಲ್ ಮಾಡಲಾಗುತ್ತದೆ). ಯೋಜನೆಯ ಪ್ರಯೋಜನ ಪಡೆಯಲು ವಿದ್ಯುತ್ ಬಳಕೆಯ ಸರಾಸರಿ 200 ಯೂನಿಟ್ ಮೀರಿರಬಾರದು. ಗ್ರಾಹಕರು ಜುಲೈ 25ರ ನಂತರ ಅರ್ಜಿ ಸಲ್ಲಿಸಿದರೆ ಅವರಿಗೆ ಆಗಸ್ಟ್ ತಿಂಗಳಲ್ಲಿ ಬರುವ ಬಿಲ್‌ನಲ್ಲಿ ಪ್ರಯೋಜನ ಸಿಗುವುದಿಲ್ಲ. ಆದರೆ, ಯೋಜನೆಯ ಪ್ರಯೋಜನವನ್ನು ಸೆಪ್ಟೆಂಬರ್ ತಿಂಗಳಲ್ಲಿ ಪಡೆಯಲಿದ್ದಾರೆ. ಹೀಗಾಗಿ, ಯೋಜನೆಯ ಪ್ರಯೋಜನ ಪಡೆಯಲು ತಕ್ಷಣವೇ ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಥೆ ಹೇಳುವ ಬಗೆ ಕಲಿಸಿದ್ದು ಭಾರತ

ಆಯಿತು. ಇಡೀ ಊರಿನ ಹೆಂಗಸರು ಅಲ್ಲಿ ಹೋಗಿ ಆಕೆಯ ಆರೈಕೆಯಲ್ಲಿ ನಿರತರಾದರು. ಮಗು ಯಾವುದೇ ಹಿನ್ನೆಲೆಯಲ್ಲಿ ಜನ್ಮತಾಳಿದರೂ ನಮ್ಮ ಲೋಕಕ್ಕೆ ಬರುತ್ತಿದ್ದೆ ಎಂದಾಗ, ವೈಭವದಿಂದ ಸಂಭ್ರಮಿಸಲಾಗುತ್ತಿತ್ತು. ಇದೆಲ್ಲವನ್ನೂ ಒಳಗೊಂಡಂತೆ ಕಥೆ ಬರೆಯಬೇಕೆಂದು ಶುರು ಮಾಡಿದೆ. ಈ ರೀತಿಯಲ್ಲಿ ಹುಟ್ಟಿದ್ದು ಕರಿಮಾಯಿ. ನಮ್ಮ ಸ್ನೇಹಿರೊಳಗೆ ಬರಹ ಬಲ್ಲವನು ಮತ್ತು ಆಸಕ್ತಿ ಇದ್ದವನು ನಾನೊಬ್ಬನೇ ಎಂದು ವಿವರಿಸಿದರು.

ಬಿ.ಜಯಶ್ರೀ ಅವರನ್ನು ಉದ್ದೇಶಿಸಿ ಮಾತನಾಡಿದ ಪ್ರೀತಿ ನಾಗರಾಜ್, ಕರಿಮಾಯಿ ಕಾದಂಬರಿಯನ್ನು ರಂಗಕ್ಕೆ ಅಳವಡಿಸಿದ್ದೀರಿ. ಆಗ ನಿಮ್ಮ ಸಿದ್ಧತೆ ಹೇಗಿತ್ತು. ನಾಟಕ ಇಷ್ಟು ವರ್ಷಕ್ಕೂ ನಡೆಯುತ್ತದೆ ಎನ್ನಿಸಿತ್ತೇ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಯಶ್ರೀ, 'ಕರಿಮಾಯಿ' ಕಾದಂಬರಿ ಪುಸ್ತಕ ತೆಗೆದು ಕೊಂಡಾಗ ಅದರ ಮುಖಪುಟ ನೋಡಿ ಬಹಳ ಖುಷಿ ಆಯಿತು. ಕಪ್ಪು ಮತ್ತು ಹಳದಿಯ ಒಂದು ಚಿತ್ರ ಅಲ್ಲಿತ್ತು. ಕಾದಂಬರಿಯನ್ನು ಓದಬೇಕಾದರೆ ಪ್ರಾರಂಭದಲ್ಲೇ ಕಂಬಾರರು ಪಾತ್ರಗಳ ಪರಿಚಯ ಮಾಡಿದ್ದಾರೆ. ಅಂದರೆ ಏಕೆ ಈ ಪಾತ್ರಗಳಿಗೆ ಇಂತಹ ಹೆಸರುಗಳು ಬಂದಿದೆ ಎಂದು ತಿಳಿಸಿದ್ದಾರೆ. ಉದಾಹರಣೆಗೆ ಗುಣಶೇಖರ ಎಂಬ ಪಾತ್ರ ಬರುಬರುತ್ತಾ ಗುಡಸಿಕರ ಆಗುತ್ತದೆ. ಮತ್ತೊಂದು ಪಾತ್ರ ಶಾಲೆಯ ಮೇಸ್ತ್ರು. ಈತ ಪ್ರಶ್ನೆ ಕೇಳಿ ತಾನೇ ಉತ್ತರ ಹೇಳುತ್ತಿದ್ದ ಹಿನ್ನೆಲೆಯಲ್ಲಿ 'ಪ್ರಶ್ನೋತ್ತರ ಮಾಸ್ತ್ರ' ಎಂದು ಊರಿನ ಜನ ಕರೆಯುತ್ತಾರೆ. ಅಂದರೆ ಹೆಸರು ಹೇಳುತ್ತಿದ್ದಂತೆ ಪಾತ್ರಗಳ ವ್ಯಕ್ತಿತ್ವ ಕಣ್ಣ ಮುಂದೆ ತೆರೆದುಕೊಳ್ಳುತ್ತದೆ. ಈ ಕಾದಂಬರಿ ಓದಿದ ಬಳಿಕ ನಾಟಕ ಮಾಡಿದರೆ ಸೊಗಸಾಗಿ ಇರುತ್ತದೆ ಎಂದು ಅನಿಸಿತು ಎಂದು ವಿವರಿಸಿದರು.

ಕಂಬಾರರನ್ನು ನಾಟಕ ಮಾಡಬೇಕೆಂದು ಅನುಮತಿ ಕೇಳಲು ಹೋದಾಗ, ಅವರು ಯಾರಿಗೂ ದುಡ್ಡು ಕೊಡುತ್ತಿದ್ದರು. ಇದೇ ವೇಳೆ ನಾನು ಕೈಯೊಡ್ಡಿದೆ. ಆಗ ಅವರು 5, 2, 10 ಮತ್ತು 1 ಪೈಸೆ ಹುಡುಕಿ ಕೊಟ್ಟರು. ಅದನ್ನು ಖರ್ಚು ಮಾಡದೇ ಇಟ್ಟಿದ್ದು, ಅದೇ ನನಗೆ ಶ್ರೀರಕ್ಷೆ ಎಂದು ಅಭಿಮಾನ ವ್ಯಕ್ತಪಡಿಸಿದರು.

ಬಳಿಕ ಕಂಬಾರರನ್ನು ಉದ್ದೇಶಿಸಿ ಮಾತನಾಡಿದ ಪ್ರೀತಿ ನಾಗರಾಜ್, ನಿಮ್ಮ 'ಕರಿಮಾಯಿ' ನಾಟಕ ನೋಡಿದಾಗ, ಇದು ನಾನು ಬರೆದಿರುವುದಕ್ಕೆ ಪೂರಕವಾಗಿದೆ ಎನ್ನಿಸಿತೇ ಅಥವಾ ರಂಗರೂಪಕ್ಕೆ ಅಳವಡಿಸಿದಾಗ, ಸಾಕಷ್ಟು ಬದಲಾವಣೆ ಕಂಡಿದೆ ಎನ್ನಿಸಿತೇ? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಂಬಾರರು, ನಾನು ಬರೆದಿರುವುದಕ್ಕೆ ಪೂರಕವಾಗಿದೆ ಎಂದೇ ಅನಿಸಿತು. ಜೊತೆಗೆ ನನ್ನ ಸಲಹೆ ತೆಗೆದುಕೊಂಡು ಅಗತ್ಯ ಬದಲಾವಣೆ ಮಾಡಿಕೊಳ್ಳುತ್ತಿದ್ದರು ಎಂದು ಉತ್ತರಿಸಿದರು. ಕರಿಮಾಯಿ ಕಾದಂಬರಿಯನ್ನು ರಂಗರೂಪಕ್ಕೆ ಅಳವಡಿಸುವಾಗ, ಏನನ್ನು ತೆಗೆದುಕೊಳ್ಳಬೇಕು. ಯಾವುದನ್ನು ಬಿಡಬೇಕು ಅನ್ನಿಸಿತು. ರಂಗರೂಪಕ್ಕೆ ಅಳವಡಿಸುವುದು ಸವಾಲು ಎನ್ನಿಸಿತೇ ಎಂಬ ಪ್ರೀತಿ ನಾಗರಾಜ್ ಅವರು ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಯಶ್ರೀ, ನಾವು ನಾಟಕ ಕಂಪನಿಯವರು. ಆದ್ದರಿಂದ ಅಡೆತಡೆ ಬಗ್ಗೆ ತಲೆಯಲ್ಲಿ ಇರಲಿಲ್ಲ. ಒಂದು ವಸ್ತುವನ್ನು ನಮ್ಮದಾಗಿ ಮಾಡಿಕೊಳ್ಳಬೇಕೆಂಬ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದೆ ಎಂದು ಹೇಳಿದರು.

ನಿಂತಿದ್ದ ಟ್ರಾಕ್ಟರ್‌ಗೆ ಬೈಕ್ ಡಿಕ್ಕಿ: ಸವಾರ ಸಾವು

ಭಾರತೀನಗರ, ಜು.2– ಪಂಕ್ಚರ್ ಆಗಿ ನಿಂತಿದ್ದ ಟ್ರಾಕ್ಟರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮುಡೀನಹಳ್ಳಿ ಗೇಟ್ ಬಳಿ ಭಾನುವಾರ ರಾತ್ರಿ ನಡೆದಿದೆ.

ಹೆಚ್.ಹೊಸಹಳ್ಳಿ ಗ್ರಾಮದ ನಿವಾಸಿ ಮಲ್ಲೇಶ್(50) ಮೃತಪಟ್ಟವರು. ಈತ ಹೊಸಹಳ್ಳಿ ಗ್ರಾಮದಿಂದ ತೊರೆಬೊಮ್ಮನಹಳ್ಳಿ ಮಾರ್ಗವಾಗಿ ಕೆ.ಎಂ.ದೊಡ್ಡಿಗೆ ಬೈಕ್‌ನಲ್ಲಿ ಬರುವಾಗ ಕತ್ತಲೆ ಇದ್ದ ಕಾರಣ ಪಂಕ್ಚರ್ ಆಗಿ ನಿಂತಿದ್ದ ಟ್ರಾಕ್ಟರ್‌ಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ತೀವ್ರ ಗಾಯಗೊಂಡ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಮಿಸಿದ ಕೆ.ಎಂ.ದೊಡ್ಡಿ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ

ಮಂಡ್ಯ, ಜು.2– ಮಂಡ್ಯ ವಿಶ್ವವಿದ್ಯಾಲಯದಿಂದ ಜು.3 ರಿಂದ 9ರವರೆಗೆ ಉಪ್ಪರಕನಹಳ್ಳಿಯಲ್ಲಿ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ಆಯೋಜಿಸಲಾಗಿದೆ ಎಂದು ಮಂಡ್ಯ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಲ ರಾಜಕಾರಣಿಗಳಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಅರಿವಿಲ್ಲ

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ವಿಷಾದ



ಮಂಡ್ಯ, ಜು.2– ಪ್ರಸ್ತುತ ಕೆಲ ರಾಜಕಾರಣಿಗಳಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಅರಿವಿಲ್ಲ. ರಾಜಕಾರಣಕ್ಕೆ ಇಂದಿನ ಯುವ ಪೀಳಿಗೆ ಬರುತ್ತಿರುವುದು ನಾಯಕರಾಗುವ ಸಲುವಾಗಿ ಹೊರತು ಪ್ರಜಾಪ್ರಭುತ್ವದ ಮೌಲ್ಯ ಎತ್ತಿ ಹಿಡಿಯಲು ಅಲ್ಲ. ಈ ನಿಟ್ಟಿನಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರಿತವರು ರಾಜಕೀಯಕ್ಕೆ ಬಂದರೆ ದೇಶದ ರಾಜಕಾರಣ ಪ್ರಬುದ್ಧತೆಯಿಂದ ಕೂಡಿರುತ್ತದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಭಾನುವಾರ ನಗರದ ಗಾಂಧಿ ಭವನದಲ್ಲಿ ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಘಟಕ ಆಯೋಜಿಸಿದ್ದ ಪ್ರಸ್ತುತ ರಾಜಕೀಯದಲ್ಲಿ ಯುವಜನರ ಪಾತ್ರ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ದೇಶ ಸ್ವಾತಂತ್ರ್ಯವಾದಾಗ ಅಂದಿನ ಜನಕ್ಕೆ ಪ್ರಜಾಪ್ರಭುತ್ವದ ಮೌಲ್ಯದ ಬಗ್ಗೆ ಅರಿವಿತ್ತು. ನಮ್ಮನ್ನು ಬ್ರಿಟಿಷರು ಹಾಗೂ ರಾಜಮಹಾರಾಜರು ಆಳ್ವಿಕೆ ಮಾಡುವುದನ್ನು ಬಿಟ್ಟು ಪ್ರಜೆಗಳೇ ತಮ್ಮನ್ನಾಳುವ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಅರಿವು ಹೊಂದಿದ್ದರು. ಆಗ ಉತ್ತಮ ಜನಪ್ರತಿನಿಧಿಗಳು ಆಯ್ಕೆಯಾಗುತ್ತಿದ್ದರು. ಇದೀಗ ಆ ಪರಿಸ್ಥಿತಿ ಬದಲಾಗಿದೆ ಎಂದು ವಿಷಾದಿಸಿದರು.

ನಮ್ಮ ಹಿರಿಯರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು. ಅದಕ್ಕಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದರು. ಇದನ್ನು ಇಂದಿನ ಯುವಪೀಳಿಗೆ ಅರ್ಥ ಮಾಡಿಕೊಳ್ಳಬೇಕು. ರಾಜಕೀಯ ಕ್ಷೇತ್ರದಲ್ಲಿ ಉತ್ತಮ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಯುವಕರು ಜಾಗರೂಕತೆಯಿಂದಿರಬೇಕು. ಯುವಕರಿಗೆ ಪ್ರಜಾಪ್ರಭುತ್ವ ಉಳಿಸುವುದು ಹೇಗೆಂಬ ನೀತಿ ಪಾಠವನ್ನು ಹೇಳಿಕೊಡುವ ಕೆಲಸವಾಗಬೇಕು. ಪ್ರಜಾಪ್ರಭುತ್ವದ ಜವಾಬ್ದಾರಿ ತಿಳಿಸುವ ಕಾರ್ಯವೂ ನಮ್ಮ ಸಮಾಜದಲ್ಲಿ ನಡೆಯಬೇಕೆಂದು ಕರೆ ನೀಡಿದರು. ಪ್ರತಿಯೊಬ್ಬರೂ ತೃಪ್ತಿ ಹಾಗೂ ಮಾನವೀಯತೆ ಈ ಎರಡು ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು. ತೃಪ್ತಿ ಇಲ್ಲದಿದ್ದರೆ ದುರಾಸೆ ಹೆಚ್ಚಾಗುತ್ತದೆ. ಅದಕ್ಕೆ ಮದ್ದಿಲ್ಲ ಎಂದ ಅವರು ಮಾನವೀಯತೆ ಬಗ್ಗೆ ದೊಡ್ಡವರು ಹೇಳಿದ್ದಾರೆ. ಮೊದಲು ಮಾನವನಾಗು ಎಂಬ ನಾಣ್ನುಡಿಯನ್ನು ಮೈಗೂಡಿಸಿಕೊಳ್ಳಿ ಎಂದರು.

ಇಂದು ಒಂದು ಪಕ್ಷದವರು ಮತ್ತೊಂದು ಪಕ್ಷವನ್ನು 40% ಸರ್ಕಾರ ಎನ್ನುತ್ತಾರೆ. ಆರೋಪ ಮಾಡಿದ ಪಕ್ಷದವರನ್ನು ನಿಮ್ಮ ಪಕ್ಷ ಆಡಳಿತದಲ್ಲಿದ್ದಾಗ ಎಷ್ಟು ಪರ್ಸೆಂಟ್ ಇತ್ತು ಎಂದರೆ ಬರೀ 10% ಎನ್ನುತ್ತಾರೆ. ಈ ಮಾತಿಗೆ ಒಂದು ಗಾದೆ ನೆನಪಾಗುತ್ತದೆ. ಆನೆ ಕದ್ದರೂ ಕಳ್ಳ, ಅಡಿಕೆ ಕದ್ದರೂ ಕಳ್ಳ ಅಂತ. ಆದರೆ ನಾವು ಮಾತ್ರ ಮತ್ತೆ ಮತ್ತೆ ಇಂತಹ ವ್ಯಕ್ತಿಗಳನ್ನೇ ಚುನಾಯಿಸುತ್ತೇವೆ. ಕಳೆದ 5 ದಶಕಗಳಿಂದ ನಮ್ಮ ದೇಶದಲ್ಲಿ ಹಗರಣಗಳು ನಡೆಯುತ್ತಲೇ ಇವೆ. ಜೀಪ್ ಹಗರಣ ನಡೆದಾಗ ದೇಶಕ್ಕೆ 52 ಲಕ್ಷ ನಷ್ಟವಾಯಿತು. ಬೋಫೋರ್ಸ್ ಹಗರಣದಲ್ಲಿ 64 ಕೋಟಿ ಭ್ರಷ್ಟಾಚಾರ ನಡೆಯಿತು. ಕಾಮನ್ವೆಲ್ತ್ ಹಗರಣದಲ್ಲಿ 70 ಸಾವಿರ ಕೋಟಿ ಕೊಳ್ಳೆ ಹೊಡೆದರು. ತದನಂತರ 2ಜಿ ಹಗರಣದಲ್ಲಿ 1.76 ಸಾವಿರ ಕೋಟಿ ಹಗರಣ ನಡೆಯಿತು. ಕಲ್ಲಿದ್ದಲು ಹಗರಣದಲ್ಲಿ 1.80 ಸಾವಿರ ಕೋಟಿ ಹೀಗೆ ಇಷ್ಟೊಂದು ಹಗರಣದಲ್ಲಿ ಸಾವಿರಾರು ಕೋಟಿ ಹಣ ಕೆಲವೇ ಕೆಲವರ ಪಾಲಾದರೆ ದೇಶ ಅಭಿವೃದ್ಧಿ ಹೇಗೆ ಎಂದು ಪ್ರಶ್ನಿಸಿದರು.

ರಾಜಕೀಯ ಎಂದರೆ ಅದು ಪ್ರಮುಖ ಹುದ್ದೆಯಾಗಿದೆ. ಡಾಕ್ಟರ್, ಇಂಜಿನಿಯರ್‌ಗಿಂತ ಇಂದು ರಾಜಕಾರಣ ದೊಡ್ಡ ಹುದ್ದೆಯಾಗಿದೆ. ರಾಜಕೀಯ ಇಂದು ದೇಶ ಹಾಗೂ ರಾಜ್ಯಕ್ಕೆ ಸಂಬಂಧಿಸಿದ ಹುದ್ದೆಯಾಗಿಲ್ಲ. ಬದಲಾಗಿ ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಹುದ್ದೆಯಾಗಿ ಮಾರ್ಪಟ್ಟಿದೆ. ಇಂದಿನ ಯುವ ಪೀಳಿಗೆ ರಾಜಕೀಯ

> 6 ಮಂಡ್ಯ ಜಿಲ್ಲೆ ಸಾರ್ವಜನಿಕ ಕ್ಷೇತ್ರದಲ್ಲಿ ರಾಜ್ಯಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ರಾಜಕೀಯ ಕ್ಷೇತ್ರದಲ್ಲಿ ಕೆ.ವಿ.ಶಂಕರೇಗೌಡ, ಹೆಚ್.ಕೆ.ವೀರಣ್ಣಗೌಡ, ಜಿ.ಮಾದೇಗೌಡ, ಎಸ್.ಎಂ.ಕೃಷ್ಣ, ಸಿನಿಮಾ ಕ್ಷೇತ್ರದಲ್ಲಿ ಅಂಬರೀಷ್, ಕೃಷಿ ಕ್ಷೇತ್ರದಲ್ಲಿ ರಾಗಿ ಲಕ್ಷ್ಮಣಯ್ಯ ಅವರುಗಳು ಸಾರ್ವಜನಿಕ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹೋರಾಟ ಕ್ಷೇತ್ರದಲ್ಲೂ ಮಂಡ್ಯ ಜಿಲ್ಲೆ ತನ್ನದೇ ಆದ ಕೊಡುಗೆ ನೀಡಿದೆ. ಕನ್ನಡಪರ, ದಲಿತ ಪರ, ರೈತರ ಪರ ಹೋರಾಟಗಳು ಜಿಲ್ಲೆಯಲ್ಲಿ ನಡೆದಿವೆ. ಜಾಗೃತಿ, ಸಂಘಟನೆ, ಹೋರಾಟವಿದ್ದರೆ ಸರ್ಕಾರಗಳು ಎಚ್ಚರದಿಂದ ಕಾರ್ಯ ನಿರ್ವಹಿಸುತ್ತವೆ.
>
> – ವಿ.ಆರ್.ಸುದರ್ಶನ್, ವಿಧಾನ ಪರಿಷತ್ ಮಾಜಿ ಸಭಾಪತಿ.

ದೇಶದ ಅಥವಾ ರಾಜ್ಯದ ಅಭಿವೃದ್ಧಿಗಾಗಿ ಇರುವುದು ಎಂಬುದನ್ನು ತೋರಿಸಿಕೊಡಬೇಕೆಂದು ಕರೆ ನೀಡಿದರು.

ಪ್ರತಿಯೊಬ್ಬರೂ ಸಮಾಜವನ್ನು ಬದಲಿಸುವ ಕಡೆಗೆ ಗಮನಹರಿಸಬೇಕು. ತಮ್ಮ ಒಂದೊಂದು ಮತವನ್ನು ಸಮಾಜಕೋಸ್ಕರ ದುಡಿಯುವವರಿಗೆ ನೀಡಬೇಕು. ಧರ್ಮ, ಭಾಷೆ, ನನಗೆ ಅವನಿಂದ ಲಾಭ ಸಿಗುವ ಹಿನ್ನಲೆಯಲ್ಲಿ ಮತ ಹಾಕಲ್ಲ ಎಂಬ ಪ್ರತಿಜ್ಞೆ ಸ್ವೀಕರಿಸ ಬೇಕಿದೆ. ಒಳ್ಳೆಯವರು ರಾಜಕೀಯದಲ್ಲಿ ಇರಬೇಕು. ದೇಶಸೇವೆ ಮಾಡುವ ಇಚ್ಛೆ ಇರಬೇಕು. ಹಿಂದೆ ಸಂಸದ, ಶಾಸಕರಿಗೆ ಯಾವ ಸಂಭಾವನೆ ಇರಲಿಲ್ಲ. ಹಿಂದೆ ಜನರೇ ತಮ್ಮ ಜನಪ್ರತಿನಿಧಿ ದೆಹಲಿ ಅಥವಾ ಬೆಂಗಳೂರಿಗೆ ಹೋಗಲು ಖರ್ಚಿಗೆ ಹಣ ಕೊಟ್ಟು ಇರಲು ವ್ಯವಸ್ಥೆ ಮಾಡುತ್ತಿದ್ದರು. ಆದರೆ ಇಂದಿನ ರಾಜಕಾರಣ 365 ದಿನದ ರಾಜಕಾರಣವಾಗಿದೆ. ಪ್ರಾಮಾಣಿಕತೆ ಕಡಿಮೆಯಾಗಿದೆ. ಜನತಾಸೇವೆ ಮಾಡಲು ಮುಂದಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಕ್ಷೇತ್ರದಿಂದ ಚುನಾವಣೆಗೆ ನಿಂತ ವ್ಯಕ್ತಿ ನಮ್ಮ ಇಚ್ಛೆಯನ್ನು ಪೂರೈಸುತ್ತಾನಾ ಎಂದು ಯೋಚಿಸಿ ಮತಕೊಡಬೇಕು. ನಿಮಗೆ ಯಾರು ಇಷ್ಟವಿಲ್ಲ ಎಂದರೆ ನೋಟಾಗೆ ಮತ ಕೊಡಿ. ಆಗ ರಾಜಕೀಯ ವ್ಯಕ್ತಿಗಳಿಗೆ ಮತದಾರರಿಗೆ ನಮ್ಮ ಬಗ್ಗೆ ಒಲವಿಲ್ಲ ಎಂಬುದು ಅರ್ಥವಾಗಿ ಬದಲಾಗುತ್ತಾರೆ ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಕನ್ನಡ ಸೇನೆ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್, ಜಿಲ್ಲಾಧ್ಯಕ್ಷ ಹೆಚ್.ಸಿ.ಮಂಜುನಾಥ್, ರಾಜ್ಯ ಉಪಾಧ್ಯಕ್ಷ ಮುನಿರಾಜೇಗೌಡ, ರಾಜ್ಯ ಕಾರ್ಯಾಧ್ಯಕ್ಷ ಮುನಿಕೃಷ್ಣ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸೌಭಾಗ್ಯ ಶಿವಲಿಂಗು ಉಪಸ್ಥಿತರಿದ್ದರು.

ಪಾಂಡವಪುರದಲ್ಲಿ ವಿಶ್ವ ವೈದ್ಯರ ದಿನಾಚರಣೆ



ಪಾಂಡವಪುರ, ಜು.2– ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವಿಶ್ವ ವೈದ್ಯರ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಕುಮಾರ್, ಸಮಾಜದಲ್ಲಿ ಜನರು ವೈದ್ಯರಿಗೆ ವೈದ್ಯೋನಾರಾಯಣ ಹರಿ ಎಂದು ದೇವರ ಸ್ಥಾನ ನೀಡಿದ್ದಾರೆ. ವೈದ್ಯರಾದ ನಾವು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ತಿಳಿಸಿದರು. ಇದೇ ವೇಳೆ ಆಸ್ಪತ್ರೆ ಮಕ್ಕಳ ತಜ್ಞ ಡಾ.ರವಿಕುಮಾರ್ ಅವರನ್ನು ಅಭಿನಂದಿಸಲಾಯಿತು. ಮಹಿಳಾ ತಜ್ಞೆ ಡಾ.ಶಿಲ್ಪಶ್ರೀ ಇತರರಿದ್ದರು.

ಜು.8, ಲೋಕ್ ಅದಾಲತ್

ಮಂಡ್ಯ, ಜು.2– ದೇಶಾದ್ಯಂತ ಲೋಕ್ ಅದಾಲತ್ ಅನ್ನು ಜು.8 ರಂದು ಆಯೋಜಿಸಿದ್ದು, ಮಂಡ್ಯ ಜಿಲ್ಲೆಯಲ್ಲೂ ಹಮ್ಮಿಕೊಳ್ಳಲಾಗಿದೆ. ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಸಿವಿಲ್, ಚೆಕ್‌ಬೌನ್ಸ್, ಸಾಲ ವಸೂಲಾತಿ, ಬ್ಯಾಂಕ್, ಕಾರ್ಮಿಕರ ವ್ಯಾಜ್ಯ, ನೀರಿನ ಬಿಲ್ ಮತ್ತು ವಿದ್ಯುತ್ ಬಿಲ್, ಮೋಟಾರು ವಾಹನ, ಎಂಎಂಆರ್ಡಿ, ರಾಜಿ ಆಗಬಹುದಾದಂತಹ ಕ್ರಿಮಿನಲ್ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಬೃಹತ್ ಲೋಕ್ ಅದಾಲತ್ ಅನ್ನು ಹಮ್ಮಿಕೊಳ್ಳಲಾಗಿದೆ.

ಜು.9, ಮೇಲುಕೋಟೆಯಲ್ಲಿ ಶ್ರೀಕೃಷ್ಣರಾಜಮುಡಿ ಉತ್ಸವ

ಮೇಲುಕೋಟೆ, ಜು.2– ಶ್ರೀಚೆಲುವನಾರಾಯಣಸ್ವಾಮಿಯವರ ಶ್ರೀಕೃಷ್ಣರಾಜಮುಡಿ ಉತ್ಸವ ಜು.9 ರಂದು ನಡೆಯಲಿದೆ.



ಮೈಸೂರು ಮಹಾರಾಜ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಆಷಾಢ ಮಾಸದಲ್ಲಿ ತಮ್ಮ ಕುಲದೈವ ಚೆಲುವನಾರಾಯಣಸ್ವಾಮಿಗೆ ಬ್ರಹ್ಮೋತ್ಸವ ಆರಂಭಿಸಿ ಉತ್ಸವದ ನಾಲ್ಕನೇ ದಿನವಾದ ಗರುಡೋತ್ಸವಕ್ಕೆ ಅಮೂಲ್ಯ ಕೆಂಪು, ಬಿಳಿವಜ್ರಗಳಿಂದ ಕೂಡಿದ ವಜ್ರಖಚಿತ ಕೃಷ್ಣರಾಜಮುಡಿ ಕಿರೀಟ ಮತ್ತು ಮೈಸೂರು ರಾಜಲಾಂಛನ ಗಂಡು ಬೇರುಂಡ ಪದಕವನ್ನು ಕೊಡುಗೆಯಾಗಿ ನೀಡಿದ್ದರು. ಬ್ರಹ್ಮೋತ್ಸವ ನೆನಪಿಗಾಗಿ ಕಲ್ಯಾಣಿ ಸಮುಚ್ಚಯದಲ್ಲಿ ಅತ್ಯಾಕರ್ಷಕ 16 ಕಂಬಗಳ ಭುವನೇಶ್ವರಿ ಮಂಟಪವನ್ನು ನಿರ್ಮಿಸಿ ತೀರ್ಥಸ್ನಾನದ ದಿನ ಅಲ್ಲಿಯೇ ಚೆಲುವನಾರಾಯಣಸ್ವಾಮಿಗೆ ಪೂಜೆ ನಡೆಯಬೇಕೆಂಬ ವ್ಯವಸ್ಥೆ ಮಾಡಿದ್ದರು. ಇಂತಹ ಐತಿಹಾಸಿಕ ಮಹೋತ್ಸವದಲ್ಲಿ ಪ್ರಮುಖ ದಿನವಾದ ನಾಲ್ಕನೇ ತಿರುನಾಳ್ ದಿನವಾದ ಜು.9ರಂದು ರಾತ್ರಿ ಕೃಷ್ಣರಾಜಮುಡಿ ಉತ್ಸವದಂದು ರಾತ್ರಿ 7 ಗಂಟೆಗೆ ಶ್ರೀದೇವಿ ಭೂದೇವಿ ಸಮೇತನಾಗಿ ಅರ್ಧಚಂದ್ರ ಪ್ರಭಾವಳಿಯಲ್ಲಿ ಗರುಡಾರೂಢನಾದ ಚೆಲುವನಾರಾಯಣಸ್ವಾಮಿಗೆ "ಕೃಷ್ಣರಾಜಮುಡಿ" ಧರಿಸಿ ದಿವ್ಯ ಪ್ರಬಂಧ ಪಾರಾಯಣ ಮತ್ತು ಮಂಗಳವಾದ್ಯದೊಂದಿಗೆ ಉತ್ಸವ ನೆರವೇರಿಸಲಾಗುತ್ತದೆ.

ವೈರಮುಡಿ ಜಾತ್ರಾ ಮಹೋತ್ಸವ ಕಲ್ಯಾಣೋತ್ಸವದಿಂದ ಆರಂಭವಾಗಿ ಮಹಾಭಿಷೇಕದೊಂದಿಗೆ ಮುಕ್ತಾಯವಾದರೆ ಆಷಾಢಮಾಸದ ಕೃಷ್ಣರಾಜಮುಡಿ ಜಾತ್ರಾ ಮಹೋತ್ಸವ ಮೈಸೂರು ದೊರೆಯಾಗಿದ್ದ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಜನ್ಮ ನಕ್ಷತ್ರದಂದು ಮಹಾಭಿಷೇಕದೊಂದಿಗೆ ಆರಂಭವಾಗಿ ಪುಷ್ಪಯಾಗದೊಂದಿಗೆ ಸಂಪನ್ನವಾಗಲಿದೆ. ಬೆರಳೆಣಿಕೆಯ ಭಕ್ತರಷ್ಟೆ ಭಾಗವಹಿಸುವ ಕೃಷ್ಣರಾಜಮುಡಿ ಬ್ರಹ್ಮೋತ್ಸವ ಮಹಾರಾಜರ ಹೆಸರಲ್ಲಿ ಹತ್ತು ದಿನಗಳ ಕಾಲ ನಡೆಯುವ ಕರ್ನಾಟಕದ ಏಕೈಕ ಜಾತ್ರಾ ಮಹೋತ್ಸವ. ಧಾರ್ಮಿಕ ಕೈಂಕರ್ಯಗಳು ಜು.4ರ ಅಂಕುರಾರ್ಪಣೆಯೊಂದಿಗೆ ಆರಂಭವಾಗಲಿದ್ದು, ಜು.5ರಂದು ಆಷಾಢ ದ್ವಿತೀಯೆ ಶ್ರವಣ ನಕ್ಷತ್ರ ಕೂಡಿದ ದಿನದಂದು ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ವರ್ಧಂತಿ ನಿಮಿತ್ತ ಮೂಲಮೂರ್ತಿ ಚೆಲ್ವತಿರುನಾರಾಯಣ ಸ್ವಾಮಿ ಮತ್ತು ಯೋಗನರಸಿಂಹಸ್ವಾಮಿಗೆ ಮಹಾಭಿಷೇಕ ಸಂಜೆ ಅಮ್ಮನವರ ಸನ್ನಿಧಿಯ ಸಭಾಂಗಣದಲ್ಲಿ ಉತ್ಸವ ಮೂರ್ತಿ ಚೆಲುವನಾರಾಯಣಸ್ವಾಮಿ ಮತ್ತು ಕಲ್ಯಾಣನಾಯಕಿ ಅಮ್ಮನವರಿಗೆ ಕಲ್ಯಾಣೋತ್ಸವ ನೆರವೇರಲಿದೆ. ಇದೇ ದಿನ ಅಧಿವಾಸರ–ರಕ್ಷಾಬಂಧನ ಮತ್ತು ಧ್ವಜಪ್ರತಿಷ್ಠೆ ನಡೆಯಲಿದೆ.

ಜು.6ರಂದು ಬೆಳಗ್ಗೆ ಧ್ವಜಾರೋಹಣ, 8 ರಂದು ಸಂಜೆ ನಾಗವಲ್ಲಿ ಮಹೋತ್ಸವ ನರಂದಾಳಿಕಾರೋಹಣ, 11 ರಂದು ಸಂಜೆ ಗಜೇಂದ್ರ ಮೋಕ್ಷ, 12 ರಂದು ಬೆಳಗ್ಗೆ ರಥೋತ್ಸವ, 14 ರಂದು ಅವಭೃತ, ಪಟ್ಟಾಭಿಷೇಕ, ಪಡಿಮಾಲೆ ನೆರವೇರಲಿದೆ. ಈ ಜಾತ್ರಾ ಮಹೋತ್ಸವದಲ್ಲಿ ತೆಪ್ಪೋತ್ಸವ, ರಥೋತ್ಸವಗಳು ಸಾಂಕೇತಿಕ ಉತ್ಸವವಾಗಿ ಆಚರಿಸಲ್ಪಟ್ಟರೆ ಜಾತ್ರೆಯ ಎಲ್ಲಾ ಉತ್ಸವಗಳು ಸಹ ಆಡಂಬರವಿಲ್ಲದೆ ಅತ್ಯಂತ ಸರಳವಾಗಿ ನಡೆಯುತ್ತವೆ.

ಫೋನ್‌ಪೇ ಮೂಲಕ ಲಂಚ ಸ್ವೀಕರಿಸಿದ ಆರೋಪ

ಗ್ರಾಮಲೆಕ್ಕಿಗನಿಗೆ ಜಿಲ್ಲಾಧಿಕಾರಿ ನೋಟೀಸ್ ಜಾರಿ


ನಾಗಮಂಗಲ, ಜು.2– ತಾಲೂಕಿನ ಬಿಂಡಿಗನವಿಲೆ ನಾಡಕಚೇರಿ ಲಾಳನಕೆರೆ ವೃತ್ತದ ಗ್ರಾಮಲೆಕ್ಕಿಗ ನಿಂಗಪ್ಪ ಸುರಪುರ ಎಂಬುವರು ಲಾಳನಕೆರೆ ಗ್ರಾಮದ ಮಹಿಳೆ ಮೀನಾಕ್ಷಿ ಎಂಬುವರ ಬಳಿ ಜಂಟಿ ಖಾತೆ ಮಾಡಿಕೊಡಲು 66 ಸಾವಿರ ರೂ.ಗಳನ್ನು 5 ಕಂತುಗಳಲ್ಲಿ ಫೋನ್ ಪೇ ಹಾಗೂ ನೇರವಾಗಿ ಪಡೆದ ಆರೋಪ ಕೇಳಿ ಬಂದಿದೆ.

ಈ ಸಂಬಂಧ ನೊಂದ ಮಹಿಳೆ ಮೀನಾಕ್ಷಿ ನಾಗಮಂಗಲ ತಹಸೀಲ್ದಾರ್ ಹಾಗೂ ಮಂಡ್ಯ ಜಿಲ್ಲಾಧಿಕಾರಿಗೆ ದೂರು ನೀಡಿದ್ದು, ಗ್ರಾಮಲೆಕ್ಕಿಗ ನಿಂಗಪ್ಪ ಸುರಪುರಗೆ ಜಿಲ್ಲಾಧಿಕಾರಿ ಡಾ.ಕುಮಾರ್ ತುರ್ತು ನೋಟಿಸ್ ಜಾರಿ ಮಾಡಿದ್ದಾರೆ. ಮಹಿಳೆ ಆರೋಪಕ್ಕೆ ಉತ್ತರಿಸಬೇಕಾದ ನಿಂಗಪ್ಪ ಸುರಪುರ ಕಳೆದ 5 ದಿನದಿಂದ ಕಚೇರಿಗೆ ಗೈರು ಹಾಜರಾಗಿದ್ದು, ನನಗೆ ನ್ಯಾಯ ಒದಗಿಸಿ ಕೊಡಬೇಕೆಂದು ನೊಂದ ಮಹಿಳೆ ಮನವಿ ಮಾಡಿದ್ದಾರೆ.

ಗ್ರಾಮಲೆಕ್ಕಿಗ ನಿಂಗಪ್ಪ ಸುರಪುರ ವಿರುದ್ಧ ನೇರ ಆರೋಪ ಮಾಡಿರುವ ಮೀನಾಕ್ಷಿ, ನಾನು ಮೈಸೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ನನ್ನ ಮಾವ ಚುಂಚೇಗೌಡರ ಜಮೀನನ್ನು ನನ್ನ ಗಂಡ ನಿಂಗಪ್ಪ ಮತ್ತು ಅವರ ಸಹೋದರರ ಹೆಸರಿಗೆ ಜಂಟಿ ಖಾತೆ ಮಾಡಿಕೊಡಲು ಸೂಕ್ತ ದಾಖಲಾತಿಗಳೊಂದಿಗೆ ತೆರಳಿದಾಗ ಖಾತೆ ಮಾಡಿಕೊಡಲು 66 ಸಾವಿರ ಹಣ ಕೇಳಿ, ಮರಣ– ಜನನ ಪತ್ರಕ್ಕೆಂದು ನನ್ನ ಬಳಿ ಮೊದಲ ಬಾರಿಗೆ 26 ಸಾವಿರ ರೂ.ಗಳನ್ನು ಪಡೆದರು. ನಂತರ ಕಂತುಗಳಲ್ಲಿ 66 ಸಾವಿರ ರೂ.ಗಳನ್ನು ಪಡೆದಿದ್ದಾರೆ. ಕಳೆದ ಒಂದು ವರ್ಷದಿಂದ ಖಾತೆ ಮಾಡಿಕೊಡಲು ಸತಾಯಿಸುತ್ತಿದ್ದು ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಮಾಡಿದ್ದಾರೆ.

ಇಂದು ಮೈಸೂರಿನ ವಿವಿಧೆಡೆ ಗುರುಪೂರ್ಣಿಮಾ

ಮೈಸೂರು, ಜು.2– ಮೈಸೂರು ನಗರದ ವಿವಿಧೆಡೆ ಸಂಘ–ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಪ್ರತ್ಯೇಕವಾಗಿ ಗುರುಪೂರ್ಣಿಮೆಯನ್ನು ನಾಳೆ (ಸೋಮವಾರ) ಆಚರಿಸುತ್ತಿವೆ.



ಶ್ರೀರಾಮಕೃಷ್ಣ ಆಶ್ರಮ: ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಸೋಮವಾರ ಮುಂಜಾನೆ 5 ಗಂಟೆಯಿಂದ ವೇದ ಪಠಣ ಮತ್ತು ಗುರು ಸ್ತೋತ್ರದ ಮೂಲಕ ಗುರು ಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ. ಮಹಾಮಂಗಳಾರತಿ, ಭಜನೆ, ವಿಷ್ಣು ಸಹಸ್ರನಾಮ ಪಾರಾಯಣ, ಗ್ರಂಥ ವಾಚನ ನಡೆಯಲಿದೆ. ನಂತರ ಗುರು ಪೂರ್ಣಿಮೆ ಅಂಗವಾಗಿ ಪ್ರವಚನ ಮತ್ತು ಪುಸ್ತಕ ಬಿಡುಗಡೆ ಮತ್ತು ಶ್ರೀರಾಮಕೃಷ್ಣ ಅಷ್ಟೋತ್ತರ ಅರ್ಚನೆ ಕೂಡ ಇರುತ್ತದೆ.

ಆರ್ಟ್ ಆಫ್ ಲಿವಿಂಗ್: ಗುರುಪೂರ್ಣಿಮೆ ಅಂಗವಾಗಿ ನಗರದ ಲಲಿತಾದ್ರಿಪುರ ರಸ್ತೆಯಲ್ಲಿ ರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ವಿಶೇಷ ಆನಂದ ಅನುಭೂತಿ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6 ರಿಂದ 8.30 ಮತ್ತು ಸಂಜೆ 6ರಿಂದ ರಾತ್ರಿ 8.30ರವರೆಗೆ ನಡೆಯಲಿದೆ. ಶಾಂತ ಮನಸ್ಸನ್ನು ಅನುಭವಿಸಿ, ಆತಂಕವನ್ನು ಕಡಿಮೆ ಮಾಡಿ ಪ್ರಾಣ ಶಕ್ತಿಯ ಮಟ್ಟವನ್ನು ಹೆಚ್ಚಿಸಿ, ಸುಸ್ಥಿರವಾಗಿರಲು ಈ ಶಿಬಿರ ಪ್ರಯೋಜನಕಾರಿಯಾಗಿರಲಿದೆ.

ನಮೋ ಯೋಗ ಭವನ: ಮೈಸೂರಿನ ಕೆ.ಆರ್. ಮೊಹಲ್ಲಾದ ರಾಮಾನುಜ ಮುಖ್ಯ ರಸ್ತೆಯಲ್ಲಿ ರುವ ನಮೋ ಯೋಗ ಭವನದಲ್ಲಿ ಜು.3ರಂದು ಸಂಜೆ 6 ಗಂಟೆಯಿಂದ ಗುರು ಪೂರ್ಣಿಮೆಯನ್ನು ಆಚರಿಸಲಾಗುವುದು. ಭರತನಾಟ್ಯ ತಜ್ಞರಾದ ಡಾ. ಶೀಲಾ ಶ್ರೀಧರ್, ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಸೇರಿದಂತೆ ಇನ್ನಿತರರು ಭಾಗವಹಿಸುವರು.

ಬ್ರಾಹ್ಮಣ ಯುವ ವೇದಿಕೆ: ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಗುರು ಪೂರ್ಣಿಮೆ ಅಂಗವಾಗಿ ಗೋಪೂಜೆ, ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ ಮತ್ತು ಸಸಿ ನೆಡುವ ಮೂಲಕ ಗುರುವಂದನಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಧಾರ್ಮಿಕ ಮುಖಂಡರಾದ ವೇದ ಬ್ರಹ್ಮ ಶ್ರೀ ಭಾನುಪ್ರಕಾಶ್ ಶರ್ಮ, ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಮತ್ತು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕೆ.ರಘುರಾಂ ವಾಜಪೇಯಿ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ.



ನಗರದ ನಾಗರೀಕ ಹಿತರಕ್ಷಣಾ ವೇದಿಕೆಯ 35ನೇ ವಾರ್ಷಿಕೋತ್ಸವದ ಅಂಗವಾಗಿ ನಗರದ 3ನೇ ಇನ್‌ಫೆಂಟ್ರಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್(ಮಿಲ್ಕ್‌ಮಂಜು), ಡಾ.ರಾಜೇಂದ್ರ, ವೇದಿಕೆಯ ಗೌರವ ಸಲಹೆಗಾರ ಮೋಹನ್ ಕುಮಾರ್, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಗೌಡ, ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶೀ ವೆಂಕಟೇಶ್, ರಂಗಪ್ಪಗೌಡ, ಮೊಹಮ್ಮದ್ ಮತ್ತು ಬಾಬು ಉಪಸ್ಥಿತರಿದ್ದರು.

ಭ್ರಷ್ಟಾಚಾರಕ್ಕೆ ಜನರೇ ಕಡಿವಾಣ ಹಾಕಿ ಅಭಿವೃದ್ಧಿಗೆ ಪಣ ತೊಡಬೇಕು

ತಿ.ನರಸೀಪುರದ ದತ್ತಿ ಉಪನ್ಯಾಸದಲ್ಲಿ ವಿಶ್ರಾಂತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಕರೆ



ತಿ.ನರಸೀಪುರ ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಉದ್ಘಾಟಿಸಿದರು.

ತಿ.ನರಸೀಪುರ, ಜು.2– ಲಂಚ ಎಂಬ ಮಹಾಮಾರಿ ಭಾರತ ದೇಶಕ್ಕೆ ಅಂಟಿದ ರೋಗ, ಭ್ರಷ್ಟಾಚಾರಕ್ಕೆ ಸ್ವತಃ ಜನರೇ ಕಡಿವಾಣ ಹಾಕುವ ಮೂಲಕ ದೇಶದ ಅಭಿವೃದ್ಧಿಗೆ ಪಣ ತೊಡಬೇಕು ಎಂದು ವಿಶ್ರಾಂತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಕರೆ ನೀಡಿದ್ದಾರೆ.

ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತಾಲೂಕು ಶರಣ ಸಾಹಿತ್ಯ ಪರಿಷತ್ ಮತ್ತು ಗ್ರಾಮ ವಿದ್ಯೋದಯ ಸಂಘಗಳ ವತಿಯಿಂದ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಹಗರಣಗಳ ತವರೂರು. ದೇಶದಲ್ಲಿ ನಿರಂತರ ಹಗರಣಗಳು ನಡೆಯುತ್ತಲೇ ಇವೆ. ದೇಶದ ಸಂಪತ್ತು ಹಗರಣಗಳ ಪಾಲಾದರೆ ದೇಶದ ಅಭಿವೃದ್ಧಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು ಲಂಚ ಭಾರತ ದೇಶಕ್ಕೆ ಅಂಟಿದ ರೋಗ. ಭ್ರಷ್ಟಾಚಾರಕ್ಕೆ ಸ್ವತಃ ಜನರೇ ಕಡಿವಾಣ ಹಾಕುವ ಮುಖೇನ ದೇಶದ ಅಭಿವೃದ್ಧಿ ಮಾಡಬೇಕು. ಪ್ರತಿಯೊಬ್ಬರು ಚೆನ್ನಾಗಿ ಓದಬೇಕು, ಒಳ್ಳೆಯ ಕೆಲಸ ಪಡೆಯಬೇಕು ಮತ್ತು ಎಲ್ಲರೂ ಶ್ರೀಮಂತ ಆಗಬೇಕು. ಆದರೆ, ಬೇರೆಯವರ ಜೇಬಿಗೆ ಕತ್ತರಿ ಹಾಕಿ ಶ್ರೀಮಂತ ಆಗಬೇಕಿಲ್ಲ ಎಂದು ಸಲಹೆ ನೀಡಿದರು. ನಾನು ಲೋಕಾಯುಕ್ತಕ್ಕೆ ನ್ಯಾಯ ಮೂರ್ತಿ ಆಗುವವರೆಗೂ ಜನರ ಕಷ್ಟಗಳ ಬಗ್ಗೆ ಸ್ಪಷ್ಟ ಅರಿವು ಇರಲಿಲ್ಲ. ನಾನೂ ಪ್ರಾಮಾಣಿಕವಾಗಿದ್ದು, ವ್ಯವಸ್ಥೆಯೂ ಪ್ರಾಮಾಣಿಕವಾಗಿ ಇದೆ ಎಂದು ತಿಳಿದಿದ್ದೆ. ಆದರೆ, ಅಧಿಕಾರಿಗಳ ಶ್ರೀಮಂತಿಕೆಯ ಗೀಳಿನಿಂದ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಮಿತಿಮೀರಿದೆ ಎಂದರು.

ಪುರಾತನ ಕಾಲದಲ್ಲಿ ತಪ್ಪು ಮಾಡಿದವನಿಗೆ ಶಿಕ್ಷೆ ಇರುತ್ತಿತ್ತು. ಸಾಮಾಜಿಕವಾಗಿಯೂ ಅಪರಾಧಿಗಳಿಗೆ ಶಿಕ್ಷೆ ಇತ್ತು ಹಾಗಾಗಿ ಆಗಿನ ಕಾಲದ ಜನರು ತಪ್ಪು ಮಾಡಲು ಹೆದರುತ್ತಿದ್ದರು.ಇಂದು ತಪ್ಪು ಮಾಡಿದ ವ್ಯಕ್ತಿಯನ್ನು ವಿಜೃಂಭಿಸುತ್ತಿರುವುದರಿಂದ ರಾಜ್ಯ ಮತ್ತು ರಾಷ್ಟ್ರ ಅವನತಿ ಅಂಚಿಗೆ ತಲುಪಲು ಕಾರಣವಾಗುತ್ತಿದೆ ಎಂದು ಅವರು ಆತಂಕ ವ್ಯಕ್ತ ಪಡಿಸಿದರು.

ಹಣ ಹೆಚ್ಚಾದಂತೆ ಅದರಿಂದ ಅಧಿಕಾರವನ್ನು ಪಡೆಯಬಹುದು ಎಂಬುದು ಈಗಿನ ಕಾಲದ ಜನತೆಯ ಮನಸ್ಥಿತಿಯಿದ್ದು, ಹಿರಿಯರು ತಮ್ಮ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು. ಇಲ್ಲದಿದ್ದಲ್ಲಿ ದೇಶದ ಭವಿಷ್ಯ ಎಲ್ಲಿಗೆ ಹೋಗಿ ತಲುಪಲಿದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ ಎಂದರು.

ಮಾನವೀಯತೆ ಎಂಬುದು ಹಿರಿಯರು ಕಟ್ಟಿದ ಮೌಲ್ಯ.ಹುಟ್ಟುವಾಗ ಮಾನವನಾಗಿ ಹುಟ್ಟದಿದ್ದರೂ ಸಾಯುವಾಗ ಪ್ರತಿಯೊಬ್ಬರು ಮಾನವನಾಗಿ ಸಾಯಲೇಬೇಕು. ಮೊದಲು ನಾವು ಬದಲಾಗಬೇಕು. ಆಮೇಲೆ ಸಮಾಜದ ಬದಲಾವಣೆಯ ಪ್ರಯತ್ನ ಮಾಡಬೇಕು. ಇಂದು ಸಾಮಾಜಿಕ ಮೌಲ್ಯ ಕುಸಿದಿದೆ. ನಿಸ್ವಾರ್ಥ ಸೇವೆ ಮನುಷ್ಯನಿಗೆ ತೃಪ್ತಿ ಮತ್ತು ಸಾರ್ಥಕತೆ ನೀಡುತ್ತದೆ. ಜನರಿಂದ ಜನರು ಜನರಿಗಾಗಿ ನಡೆಸುವ ಆಳ್ವಿಕೆ ಪ್ರಜಾಪ್ರಭುತ್ವ ಎನ್ನಲಾಗಿತ್ತು. ಆದರೆ, ಇಂದಿನ ದಿನಮಾನಗಳಲ್ಲಿ ಕೆಲವರಿಂದ, ಕೆಲವರಿಗೋಸ್ಕರ, ಕೆಲವರಿಗಾಗಿ ಎಂದು ಪ್ರಜಾಪ್ರಭುತ್ವದ ಅರ್ಥ ಬದಲಾಗಿದೆ. ಇದು ಆತಂಕಕಾರಿ ಬೆಳವಣಿಗೆ ಎಂದರು.

ಗ್ರಾಮ ವಿದ್ಯೋದಯ ಸಂಘದ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಮಾತನಾಡಿ, ಶಿವಾನಂದ ಶರ್ಮ ಅತ್ಯಂತ ಪ್ರಾಮಾಣಿಕ, ಸಾಧಾರಣ ವ್ಯಕ್ತಿ.ಅವರು ನಿಸ್ವಾರ್ಥ ಸೇವೆ ಸಲ್ಲಿಸಲು ಶಿಕ್ಷಣ ಸಂಸ್ಥೆಯನ್ನು ಕಟ್ಟಬೇಕೆನ್ನುವ ಅವರ ಛಲ ಒಂದು ಅದ್ಭುತ ಕಥಾನಕ. ಅವರು ಎಲ್ಲರಿಂದಲೂ ದತ್ತಿ ಪಡೆದು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಅವರು ಸ್ಥಾಪಿಸಿದ ಹಲವು ಸಂಸ್ಥೆಗಳು ಇಂದು ವಿಶ್ವದಾದ್ಯಂತ ಒಳ್ಳೆಯ ಹೆಸರು ಪಡೆದಿವೆ. ಶರ್ಮರ ಹೆಸರನ್ನು ಚಿರಸ್ಥಾಯಿಯಾಗಿಸಲು ಸರಕಾರದಿಂದ ಅನುದಾನ ಪಡೆಯದ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು ಮತ್ತು ಮಠಮಾನ್ಯಗಳಿಗೆ ಜಾತ್ಯತೀತವಾಗಿ ಗ್ರಾಮ ವಿದ್ಯೋದಯ ಸಂಘದ ವತಿಯಿಂದ ದತ್ತಿ ನೀಡಲಾಗುವುದು ಎಂದರು.

ವಾಟಾಳು ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿಗಳು ಆಶೀರ್ವಚಿಸಿದರು. ಕಾರ್ಯಕ್ರಮದಲ್ಲಿ ನಿವೃತ್ತ ವಾಣಿಜ್ಯ ತೆರಿಗೆ ಆಯುಕ್ತ ಹೆಳವರ ಹುಂಡಿ ಸಿದ್ದಪ್ಪ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೊಂಟೇಶ್, ಜಿಲ್ಲಾ ಶರಣಸಾಹಿತ್ಯ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ನಿಕಟಪೂರ್ವ ಬಿಜೆಪಿ ಅಭ್ಯರ್ಥಿ ಡಾ.ರೇವಣ್ಣ, ಕು.ಶಿ.ಭೃಂಗೀಶ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಶರಣ ಸಾಹಿತ್ಯ ಪರಿಷತ್ ಖಜಾಂಚಿ ಹೆಳವರಹುಂಡಿ ಮೂರ್ತಿ, ಮಾಜಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಷಣ್ಮುಖಸ್ವಾಮಿ, ನಾಗೇಶ್. ಫ್ರಾನ್ಸಿ ಮೋಹನ್. ಅಂಗಡಿ ಶೇಖರ್.ಮಾಜಿ ತಾ.ಪಂ ಅಧ್ಯಕ್ಷ ಗುರುಮೂರ್ತಿ, ತುರುಗನೂರು ಮಲ್ಲೇಶ್,ಡಣಾಯಕಪುರ ಮಲ್ಲಣ್ಣ ಇತರರು ಹಾಜರಿದ್ದರು.

ಅಜಿತ್ ಪವಾರ್ ಬದಲಿಗೆ ಮಹಾರಾಷ್ಟ್ರ ವಿಪಕ್ಷ ನಾಯಕರಾಗಿ ಜಿತೇಂದ್ರ ಅವ್ಹಾದ್ ನೇಮಕ



ಮುಂಬೈ, ಜು.2– ಅಜಿತ್ ಪವಾರ್ ಅವರು ಏಕನಾಥ್ ಶಿಂಧೆ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ) ಮಹಾರಾಷ್ಟ್ರ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರನ್ನಾಗಿ ಶಾಸಕ ಜಿತೇಂದ್ರ ಅವ್ಹಾದ್ ಅವರನ್ನು ನೇಮಿಸಿದೆ ಎಂದು ನೆರೆಯ ಥಾಣೆ ಜಿಲ್ಲೆಯ ಮುಂಬ್ರಾ–ಕಲ್ವಾ ಶಾಸಕ ಅವ್ಹಾದ್ ಹೇಳಿದ್ದಾರೆ. ಇದುವರೆಗೆ ವಿರೋಧ ಪಕ್ಷದ ನಾಯಕರಾಗಿದ್ದ ಅಜಿತ್ ಪವಾರ್ ಅವರ ಸ್ಥಾನಕ್ಕೆ ಅವ್ಹಾದ್ ನೇಮಕಗೊಳ್ಳಲಿದ್ದಾರೆ. ಎನ್‌ಸಿಪಿ ಬಿಕ್ಕಟ್ಟಿನ ನಂತರ ಸಂಭವನೀಯ ಪಕ್ಷಾಂತರ ಮತ್ತು ಅನರ್ಹತೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಶಾಸಕರು ನನ್ನ ವಿಪ್ ಅನ್ನು ಪಾಲಿಸಬೇಕಾಗುತ್ತದೆ ಎಂದು ಅವ್ಹಾದ್ ಹೇಳಿದರು. ಅವ್ಹಾದ್ ಅವರು, ಕಳೆದ 25 ವರ್ಷಗಳಲ್ಲಿ ಪಕ್ಷವು ತಮ್ಮನ್ನು ಸಚಿವರನ್ನಾಗಿ ಮಾಡಿದೆ ಎಂಬುದನ್ನು ಈ ನಾಯಕರು ಮರೆಯಬಾರದು. ಈಗ ಅವರು ತಮ್ಮ ನಾಯಕ ಶರದ್ ಪವಾರ್ ಅವರನ್ನು ತೊರೆಯುತ್ತಿದ್ದಾರೆ ಎಂದರು.



ದೇವರಾಜ ಮಾರುಕಟ್ಟೆಯ ಬಳಿಯ ಚಿಕ್ಕ ಗಡಿಯಾರ ವೃತ್ತದ ಹಣ್ಣಿನ ವ್ಯಾಪಾರಿಗಳು ಭಾನುವಾರ ಆಯೋಜಿಸಿದ್ದ ತಾಯಿ ಚಾಮುಂಡೇಶ್ವರಿ ಪೂಜೆ ಮಹೋತ್ಸವದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಭಾಗವಹಿಸಿ, ಪ್ರಸಾದ ವಿತರಿಸಿದರು. ಈ ವೇಳೆ ವ್ಯಾಪಾರಿಗಳಿ ಅವರೊಟ್ಟಿಗಿದ್ದರು.

ಕೆಪಿಸಿಸಿ ಸದಸ್ಯರಾಗಿ ನಟರಾಜ್ ನೇಮಕ



ಮೈಸೂರು, ಜು.2– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ನಜರ್‌ಬಾದ್ ನಟರಾಜ್ ಅವರನ್ನು ಕೆಪಿಸಿಸಿ ನೂತನ ಸದಸ್ಯರಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇಮಕ ಮಾಡಿದ್ದಾರೆ ಎಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪ್ರಕಟಣೆಯಲ್ಲಿ ತಿಳಿಸಿದೆ.



ಮೈಸೂರಿಗೆ ಆಗಮಿಸಿದ್ದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರನ್ನು ಜೆ.ಪಿ.ನಗರದ ಅಕ್ಕಮಹಾದೇವಿ ಸರ್ಕಲ್ ಬಳಿ ಅಭಿಮಾನಿಗಳು ಅದ್ದೂರಿಯಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಾಜಿ ಉಪಮೇಯರ್ ಸಿದ್ದರಾಜು, ಅವರ ಪುತ್ರ ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಜ್, ತೀರು, ಡಿ.ಸಿ.ನಾಗೇಶ್, ಕೃಷ್ಣ, ಸಿದ್ಧಾರ್ಥ ಸೇರಿದಂತೆ ಜೆ.ಪಿ. ನಗರದ ಯುವಕರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 3 ಜುಲೈ 2023

ಮಳೆಗಾಲದಲ್ಲಿ ನದಿ ಪ್ರವಾಹ ಉಂಟಾಗದಂತೆ ಎಚ್ಚರಿಕೆ ವಹಿಸಿ

ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಶಾಸಕ ಡಾ.ಮಂತರ್ ಗೌಡ ಸೂಚನೆ



ಕುಶಾಲನಗರ, ಜು.2– ಮಳೆಗಾಲ ಅವಧಿಯಲ್ಲಿ ಯಾವುದೇ ಸಂದರ್ಭ ಪ್ರವಾಹ ಉಂಟಾಗದಂತೆ ಎಚ್ಚರ ವಹಿಸಲು ಮಡಿಕೇರಿ ಕ್ಷೇತ್ರ ಶಾಸಕ ಡಾ ಮಂಥರ್ ಗೌಡ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಹಾರಂಗಿ ಪ್ರವಾಸಿ ಮಂದಿರದಲ್ಲಿ ನಡೆದ ಕಾವೇರಿ ನೀರಾವರಿ ನಿಗಮ, ಅರಣ್ಯ ಇಲಾಖೆ ಮತ್ತು ವಿದ್ಯುತ್ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅವರು ಚರ್ಚಿಸಿ, ಯಾವುದೇ ಸಂದರ್ಭ ನದಿ ನೀರು ಬಡಾವಣೆಗಳಿಗೆ ನುಗ್ಗದಂತೆ ಎಚ್ಚರವಹಿಸಬೇಕು. ಹಾರಂಗಿ ಜಲಾಶಯದಲ್ಲಿ ನೀರಿನ ಸಂಗ್ರಹ ಮಾಡುವ ಸಂದರ್ಭ ನಿಯಮಗಳನ್ನು ಪಾಲಿಸುವುದು. ನದಿ ತಟದ ಬಡಾವಣೆಗಳು ಪ್ರವಾಹ ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸುವಂತೆ ಸೂಚನೆ ನೀಡಿದರು.

ಹಾರಂಗಿ ಜಲಾಶಯದ ಹೂಳೆತ್ತುವ ಯೋಜನೆ ವಿಳಂಬವಾಗಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕರು ಕೂಡಲೇ ಕಾಮಗಾರಿ ಪ್ರಾರಂಭಿಸಬೇಕು, ಇಲ್ಲವಾದಲ್ಲಿ ಗುತ್ತಿಗೆದಾರರನ್ನು ಬದಲಾಯಿಸಲು ಸರ್ಕಾರದ ಗಮನಕ್ಕೆ ತರುವಂತೆ ಸಲಹೆ ನೀಡಿದರು.

ಹಾರಂಗಿ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಕಾಮಗಾರಿಗಳ ಬಗ್ಗೆ ಅಧಿಕಾರಿಗಳಿಂದ ಶಾಸಕರು ಮಾಹಿತಿ ಪಡೆದರು. ಯಾವುದೇ ಕಾಮಗಾರಿಗಳು ವಿಳಂಬವಾಗದೆ ಇರುವಂತೆ ಗಮನಹರಿಸಬೇಕು. ಗುಣಮಟ್ಟದ ಕಾಮಗಾರಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಶಾಸಕ ಮಂತರ್ ಗೌಡ ಅವರು ಕಿವಿಮಾತು ಹೇಳಿದರು. ಜನರಿಂದ ದೂರು ಬರದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ಹೇಳಿದ ಶಾಸಕರು, ತಪ್ಪು ಕಂಡು ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು.

ಕಚೇರಿಗಳಲ್ಲಿ ಯಾವುದೇ ರೀತಿಯ ಅನವಶ್ಯಕ ದುಂದುವೆಚ್ಚಗಳಿಗೆ ಕಡಿವಾಣ ಹಾಕಬೇಕು ಎಂದು ಸಲಹೆ ನೀಡಿದ ಶಾಸಕರು ಸರಕಾರಿ ಹಣ ಪೋಲಾಗದಂತೆ ಎಚ್ಚರವಹಿಸುವಂತೆ ತಿಳಿಸಿದರು.

ಕುಶಾಲನಗರ ಸಾಯಿ ಬಡಾವಣೆ, ಕುವೆಂಪು ಬಡಾವಣೆ ಪ್ರವಾಹದಿಂದ ಜನರಿಗೆ ಸಮಸ್ಯೆ ಆಗದಂತೆ ಕೂಡಲೇ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭ ಹಾರಂಗಿ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರ ರಘುಪತಿ, ಕಾರ್ಯಪಾಲಕ ಅಭಿಯಂತರ ಪುಟ್ಟಸ್ವಾಮಿ, ಅರಣ್ಯ ಇಲಾಖೆ ಡಿಎಫ್ಓ ಪೂವಯ್ಯ, ಮತ್ತಿತರ ಇಲಾಖೆ ಅಧಿಕಾರಿಗಳು ಇದ್ದರು.

ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ ಸನ್ಮಾನಿಸುವ ಕಾರ್ಯ ಶ್ಲಾಘನೀಯ

ವಿರಾಜಪೇಟೆ ಪತ್ರಕರ್ತರ ಸಂಘದ ವಾರ್ಷಿಕ ಸಭೆ, ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭ



ವಿರಾಜಪೇಟೆ, ಜು.2– ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಗೌರವಿಸುತ್ತಿರುವುದು ಉತ್ತಮ ಕಾರ್ಯ ಎಂದು ಅಂತರರಾಷ್ಟ್ರೀಯ ರಗ್ಬಿ ಆಟಗಾರ, ಪ್ರಗತಿ ಶಾಲೆಯ ವ್ಯವಸ್ಥಾಪಕ ನಿರ್ದೇಶಕ ಮಾದಂಡ ತಿಮ್ಮಯ್ಯ ಹೇಳಿದರು.

ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಡೆದ ವಾರ್ಷಿಕ ಮಹಾಸಭೆ, ಪ್ರಶಸ್ತಿ ಪ್ರದಾನ ಹಾಗೂ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಸನ್ಮಾನಗಳು, ಸ್ಫೂರ್ತಿಯಾಗಲಿದ್ದು, ಸಾಧನೆಗೆ ಸಿಗುವ ಸನ್ಮಾನಗಳು ಸದಾ ನೆನಪಿನಲ್ಲಿ ಉಳಿಯಲಿದೆ. ಪತ್ರಕರ್ತರ ಸಂಘದ ಕಾರ್ಯ ಶ್ಲಾಘನೀಯ ಎಂದರು.

ಜಿಲ್ಲಾ ಸಂಘದ ಅಧ್ಯಕ್ಷ ಬಿ.ಆರ್ ಸವಿತಾ ರೈ ಮಾತನಾಡಿ, ಜಿಲ್ಲೆಯ ತಾಲೂಕು ಸಂಘಗಳು ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಮಾದರಿಯಾಗಿದೆ. ಸಂಘದ ಸದಸ್ಯರ ಒಗ್ಗಟ್ಟಿನಿಂದ ಮುಂದಿನ ದಿನಗಳಲ್ಲಿ ಮತ್ತಷ್ಟು ಕಾರ್ಯಕ್ರಮಗಳು ನಡೆಯಲಿ ಎಂದರು. ರಾಜ್ಯ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಮಾತನಾಡಿ, ತಾಲೂಕು ಮಟ್ಟದಲ್ಲಿ ಅತ್ಯುತ್ತಮ ವರದಿಗೆ ಪತ್ರಕರ್ತರನ್ನು ಗುರುತಿಸಿ ಸನ್ಮಾನಿಸುವುದರ ಜೊತೆಗೆ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿರುವುದರಿಂದ ಮಕ್ಕಳ ಕಲಿಕೆಗೆ ಉತ್ತೇಜನ ನೀಡಿದಂತಾಗಲಿದೆ ಎಂದರು. ತಾಲೂಕು ಸಂಘದ ಅಧ್ಯಕ್ಷ ರೆಜಿತ್ ಕುಮಾರ್ ಗುಹ್ಯ ಅಧ್ಯಕ್ಷತೆಯಲ್ಲಿ ವಿರಾಜಪೇಟೆಯ ಎ ಟು ಜಡ್ ಸಭಾಂಗಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎ.ಎಸ್ ಮುಸ್ತಫ ವಾರ್ಷಿಕ ವರದಿ ವಾಚಿಸಿದರು. ಕೋಶಾಧಿಕಾರಿ ಡಾ. ಹೇಮಂತ್ ಲೆಕ್ಕಪತ್ರ ಮಂಡಿಸಿದರು.

ವಾರ್ಷಿಕ ಪ್ರಶಸ್ತಿ ಪ್ರದಾನ: ಶಾಸಕ ಎ.ಎಸ್ ಪೊನ್ನಣ್ಣ ಅವರು ತಮ್ಮ ತಂದೆ ದಿವಂಗತ ಎ.ಕೆ ಸುಬ್ಬಯ್ಯ ಹಾಗೂ ತಾಯಿ ದಿವಂಗತ ಎ.ಎಸ್ ಪೊನ್ನಮ್ಮ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಕ್ರೀಡಾ ವರದಿಗೆ ಶಕ್ತಿ ಪತ್ರಿಕೆಯಲ್ಲಿ ಪ್ರಕಟವಾದ 'ಮಾಲ್ದಾರೆ ಶಾಲಾ ಮಕ್ಕಳಿಗಿಲ್ಲ ಆಟದ ಮೈದಾನ' ವರದಿಗೆ ಎ.ಎನ್ ವಾಸು, ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಬಿ.ಆರ್ ಸವಿತಾ ರೈ ಅವರು ತಮ್ಮ ತಂದೆ ಕೃಷಿಕರಾಗಿದ್ದ ದಿವಂಗತ ಬಿ.ಎಸ್ ರಂಗನಾಥ ರೈ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಕೃಷಿ ವರದಿಗೆ ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ "ಪ್ರಯೋಗಶೀಲ ಕೃಷಿಕ ಬಿ.ಎಸ್ ನಾರಾಯಣ್ ರಾವ್" ವರದಿಗೆ ರಜಿತಾ ಕಾರ್ಯಪ್ಪ, ಸಿದ್ದಾಪುರದ ಸಮಾಜ ಸೇವಕರಾದ ಕೆ.ಯು ಅಬ್ದುಲ್ ಮಜೀದ್ ಅವರು ತಮ್ಮ ತಂದೆ ದಿವಂಗತ ಉಸ್ಮಾನ್ ಹಾಜಿ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಮಾನವೀಯ ವರದಿಗೆ ಶಕ್ತಿ ಪತ್ರಿಕೆಯಲ್ಲಿ ಪ್ರಕಟವಾದ "ದಿಗ್ಬಂಧನಕ್ಕೆ ಒಳಗಾಗಿರುವ ಕುಟುಂಬಕ್ಕೆ ಇನ್ನೂ ದೊರೆತಿಲ್ಲ ನ್ಯಾಯ" ವರದಿಗೆ ಪುತ್ತಂ ಪ್ರದೀಪ್, ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕರಾದ ಕೋಲತಂಡ ರಘು ಮಾಚಯ್ಯ ಅವರು ತಮ್ಮ ತಂದೆ ದಿವಂಗತ ಕೋಲತಂಡ ಉತ್ತಪ್ಪ ಹಾಗೂ ತಾಯಿ ಕಾಮವ್ವ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಅರಣ್ಯ ಮತ್ತು ವನ್ಯಜೀವಿ ವರದಿಗೆ ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರಕಟವಾದ "ಸಾರ್ವಜನಿಕರಿಗೆ ತಲೆನೋವಾಗಿದ್ದ ಪುಂಡಾನೆ ಸೆರೆ" ವರದಿಗೆ ಆರ್. ಸುಬ್ರಮಣಿ ಮತ್ತು ವಿರಾಜಪೇಟೆಯ ಪ್ರಗತಿ ಶಾಲೆಯ ವ್ಯವಸ್ಥಾಪಕರಾದ ಮಾದಂಡ ತಿಮ್ಮಯ್ಯ ಅವರು ತಮ್ಮ ತಾಯಿ ದಿವಂಗತ ತುಂಗಾ ಪೂವಯ್ಯ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಶೈಕ್ಷಣಿಕ ವರದಿಗೆ ಆಂದೋಲನ ಪತ್ರಿಕೆಯಲ್ಲಿ ಪ್ರಕಟವಾದ "ಶಿಕ್ಷಣದಿಂದ ದೂರ ಉಳಿದ ವಲಸೆ ಕಾರ್ಮಿಕರ ಮಕ್ಕಳು" ವರದಿಗೆ ಎಂ.ಎ ಕೃಷ್ಣ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರತಿಭಾ ಪುರಸ್ಕಾರ: ಸಂಘದ ಸದಸ್ಯರಾದ ಕೃಷ್ಣ ಅವರ ಮಕ್ಕಳಾದ ಜೀಶ್ಮ ಎಂ.ಕೆ, ಜಸ್ಮಿತಾ ಎಂ.ಕೆ, ರಜಿತ ಕಾರ್ಯಪ್ಪ ಅವರ ಮಗಳು ಕೆ.ಈಶಾನ್ವಿ, ಎ.ಎನ್ ವಾಸು ಅವರ ಮಗಳು ಸಮೃದ್ಧಿ ಎ.ವಿ, ಗಿರೀಶ್ ವಿ.ಕೆ ಅವರ ಮಗ ಅಗಿಲ್ ವಿ.ಜಿ, ಸುನಿಲ್ ಕೆ.ಎಸ್ ಅವರ ಮಗ ರೆನಿಲ್ ಕೆ.ಎಸ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಜಿಲ್ಲಾ ಸಂಘದ ಕೋಶಾಧಿಕಾರಿ ಆನಂದ್, ರಾಜ್ಯ ಸಮಿತಿ ಸದಸ್ಯ ಟಿ.ಎನ್ ಮಂಜುನಾಥ್, ಜಿಲ್ಲಾ ಸಂಘದ ನಿರ್ದೇಶಕ ಕೋಲತಂಡ ರಘು ಮಾಚಯ್ಯ, ತಾಲೂಕು ಸಂಘದ ಉಪಾಧ್ಯಕ್ಷ ಪುತ್ತಂ ಪ್ರದೀಪ್, ಕಾರ್ಯದರ್ಶಿ ರಜಿತಾ ಕಾರ್ಯಪ್ಪ, ನಿರ್ದೇಶಕ ಡಿ. ಮಂಜುನಾಥ್ ಮತ್ತಿತರರು ಇದ್ದರು. ಕಿಶೋರ್ ಕುಮಾರ್ ಶೆಟ್ಟಿ ಸ್ವಾಗತಿಸಿ, ರವಿಕುಮಾರ್ ನಿರೂಪಿಸಿ, ಡಾ. ಹೇಮಂತ್ ವಂದಿಸಿದರು.

ಕಾಳಿಂಗಸರ್ಪವನ್ನು ರಕ್ಷಿಸಿದ ಉರಗತಜ್ಞ

ನಾಪೋಕ್ಲು, ಜು.2– ಸಮೀಪದ ಮರಂಡೊದ ಗ್ರಾಮದ ಮೇರಿಯಂಡ ಅಪ್ಪಣ್ಣನವರ ತೋಟದಲ್ಲಿ ಸೇರಿಕೊಂಡಿದ್ದ 12 ಅಡಿ ಉದ್ದದ ಕಾಳಿಂಗಸರ್ಪವನ್ನು ಸೆರೆ ಹಿಡಿದು ಮಾಕುಟ್ಟ ರಕ್ಷಿತಾರಣ್ಯಕ್ಕೆ ಬಿಡಲಾಯಿತು.



ಮೇರಿಯಂಡ ಅಪ್ಪಣ್ಣ ತೋಟಕ್ಕೆ ಕೆಲಸಗಾರರನ್ನು ಭಾನುವಾರ ಕರೆದುಕೊಂಡು ಹೋದ ಸಂದರ್ಭ ಕಾಳಿಂಗಸರ್ಪವನ್ನು ಕಂಡು ಭಯಗೊಂಡು ಕಾರ್ಮಿಕರು ಹಿಂತಿರುಗಿದ್ದಾರೆ. ಕೂಡಲೇ ಉರಗತಜ್ಞ ಪೊನ್ನೀರ ಸ್ನೇಕ್ ಗಗನ್‌ಗೆ ತಿಳಿಸಿದ ಮೇರೆಗೆ ಅವರು ಆಗಮಿಸಿ ಬೃಹತ್ ಗಾತ್ರದ ಕಾಳಿಂಗಸರ್ಪವನ್ನು ಸೆರೆಹಿಡಿದು ಪೆರುಂಬಾಡಿಯ ರಕ್ಷಿತಾರಣ್ಯಕ್ಕೆ ಬಿಟ್ಟರು. ಪೊನ್ನೀರ ಗಗನ್ ಮಾತನಾಡಿ, ಒಂದೇ ವಾರದಲ್ಲಿ ಎರಡು ಕಾಳಿಂಗಸರ್ಪವನ್ನು ಹಿಡಿದು ರಕ್ಷಿಸಲಾಗಿದೆ. ಕಳೆದ ಶುಕ್ರವಾರ ವಿರಾಜಪೇಟೆಯ ಬಾಳುಗೋಡು ಗ್ರಾಮದ ಪುಚ್ಚಿಮಂಡ ತಿಮ್ಮ ತಿಮ್ಮಯ್ಯನವರ ಮನೆಯ ಒಳಗಡೆ ಸೇರಿಕೊಂಡಿದ್ದ 10 ಅಡಿ ಉದ್ದದ ಕಾಳಿಂಗ ಸರ್ಪವನ್ನು ರಕ್ಷಿಸಿದ್ದೇನೆ ಎಂದರು. ಎಲ್ಲಾದರೂ ಸರ್ಪಗಳನ್ನು ಕಂಡರೆ ಕೊಲ್ಲದೆ ಸಮೀಪದ ಉರಗತಜ್ಞರಿಗೆ ಕರೆ ಮಾಡಿ ಹಾವನ್ನು ಸುರಕ್ಷಿತವಾಗಿ ಹಿಡಿದು ಕಾಡಿಗೆ ಬಿಡುವ ಪ್ರಯತ್ನ ಮಾಡಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಕಾರಾಗೃಹದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಮಡಿಕೇರಿ, ಜು.2– 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಜಿಲ್ಲಾ ಕಾರಾಗೃಹದಲ್ಲಿ ಬಂದಿ ನಿವಾಸಿಗಳಿಗೆ ಯೋಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ಜಿಲ್ಲಾ ಕಾರಾಗೃಹದ ಅಧೀಕ್ಷಕ ಸಂಜಯ್ ಜತ್ತಿ, ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರಾದ ಟಿ.ಡಿ. ಪುಟ್ಟರಂಗಸ್ವಾಮಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಬಿ.ಪ್ರಸಾದ್ ಅವರು ಪಾಲ್ಗೊಂಡಿದ್ದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ.ರಂಗಧಾಮಯ್ಯ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ.ಬೇಬಿಮ್ಯಾಥ್ಯು, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಡಾ.ಸದಾಶಿವ ಪಲ್ಲೇದ್, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಾರ್ಯದರ್ಶಿ ಎಂ.ಎಂ.ವಸಂತಿ, ಸಹ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ, ಸಹ ಕಾರ್ಯದರ್ಶಿ ಎಚ್.ಆರ್. ಮುತ್ತಪ್ಪ ಸ್ಥಾನಿಕ ಆಯುಕ್ತ ಅಜ್ಜಮಕ್ಕಡ ವಿನುಕುಮಾರ್, ಕಾರ್ಯದರ್ಶಿ ಸ್ಥಳೀಯ ಸಂಸ್ಥೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಬ್ರಹ್ಮಕುಮಾರಿ ಧನಲಕ್ಷ್ಮಿ, ಯೋಗ ತರಬೇತಿದಾರರಾದ ಅಲಿಮ ಪಿ.ಎಚ್, ವಾಟೆಕಾಡು ಹಿರಿಯ ಪ್ರಾಥಮಿಕ ಶಾಲೆ ಸ್ಕೌಟ್ ಮಾಸ್ಟರ್ ಶಿಕ್ಷಕರು ಕುಮಾರಸ್ವಾಮಿ, ಅಲ್ಲದೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಸಂಘಟಕರಾದ ಯು.ಸಿ.ದಮಯಂತಿ ಉಪಸ್ಥಿತರಿದ್ದರು.

ರುದ್ರಭೂಮಿಯಲ್ಲಿ ಗಿಡನೆಟ್ಟು ಪರಿಸರ ಸಪ್ತಾಹ ಆಚರಣೆ



ನಾಪೋಕ್ಲು, ಜು.2– ಸ್ಥಳೀಯ ವಿಪತ್ತು ನಿರ್ವಹಣಾ ಘಟಕದ ವತಿಯಿಂದ ಗಿಡ ನೆಡುವುದರ ಮೂಲಕ ಪರಿಸರ ಸಪ್ತಾಹ ಕಾರ್ಯಕ್ರಮವನ್ನು ಭಾನುವಾರ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಯಿತು.

ಇಲ್ಲಿಗೆ ಸಮೀಪದ ಕಲ್ಲುಮೊಟ್ಟೆ ಹಿಂದೂ ರುದ್ರ ಭೂಮಿಯಲ್ಲಿ 50 ವಿವಿಧ ಜಾತಿಯ ಹಣ್ಣು ಹಂಪಲು ಮತ್ತು ಔಷಧಿಯ ಗಿಡಗಳನ್ನು ತಂದು ಸ್ಮಶಾನದ ಆವರಣದಲ್ಲಿ ನೆಡುವುದರ ಮೂಲಕ ಶ್ರಮದಾನ ಮಾಡಲಾಯಿತು. ಈ ಸಂದರ್ಭ ಘಟಕದ ಸಂಯೋಜಕಿ ದಿವ್ಯ, ಶಂಕರ್, ಸೀನ ಮಾಧವನ್, ದಿಲೀಶ್, ಸುರೇಶ್, ಅಜಯ್, ಸಂದೇಶ್, ಉಮಾಲಕ್ಷ್ಮಿ, ಗೀತಾ, ಚಂದ್ರಕಲಾ ಮತ್ತು ಪುಟಾಣಿಗಳು ಸೇವೆಯಲ್ಲಿ ಭಾಗವಹಿಸಿ ಸಮಾಜಕ್ಕೆ ಮಾದರಿಯಾದರು.

ಇಂದು ಇತಿಹಾಸ ಪ್ರಸಿದ್ಧ ಶ್ರೀ ಚಾಮರಾಜೇಶ್ವರ ರಥೋತ್ಸವ



- ರಥೋತ್ಸವಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ
- ಜಿಲ್ಲಾ ಪೊಲೀಸರಿಂದ ಬಿಗಿ ಬಂದೋಬಸ್ತ್

ಚಾಮರಾಜನಗರ, ಜು.2– ನಗರದಲ್ಲಿ ಆಷಾಢ ಮಾಸದಲ್ಲಿ ನಡೆಯುವ ಇತಿಹಾಸ ಪ್ರಸಿದ್ಧ ಚಾಮರಾಜೇಶ್ವರ ರಥೋತ್ಸವ (ಜು.3) ಸೋಮವಾರ ವಿಜೃಂಭಣೆಯಿಂದ ನಡೆಯಲಿದೆ.


ಮಧ್ಯಾಹ್ನ 12 ರಿಂದ 1 ಗಂಟೆಯೊಳಗೆ ಸಲ್ಲುವ ಶುಭ ಕನ್ಯಾ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ದೊರೆಯಲಿದೆ. ರಥ ದೇವಾಲಯದ ಸುತ್ತ ಒಂದು ಸುತ್ತು ಹಾಕಲಿದ್ದು, ಸುಮಾರು 4 ಗಂಟೆ ವೇಳೆಗೆ ಸ್ವಸ್ಥಾನ ಸೇರಲಿದೆ. ಇದಕ್ಕಾಗಿ ಮುಜರಾಯಿ ಇಲಾಖೆ, ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ದೇವಸ್ಥಾನದ ಆಡಳಿತ ಮಂಡಳಿಯಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ. ರಥವು ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಿಂದ ಹೊರಟು ರಥದ ಬೀದಿ, ಹಳೇ ಮಾರುಕಟ್ಟೆ ರಸ್ತೆ, ವೀರಭದ್ರೇಶ್ವರಸ್ವಾಮಿ ದೇವಸ್ಥಾನ, ಮಾರಿಗುಡಿ ದೇವಸ್ಥಾನ, ಮಾರುಕಟ್ಟೆ ರಸ್ತೆಯ ಮೂಲಕ ಮತ್ತೆ ಸ್ವಸ್ಥಾನಕ್ಕೆ ಸೇರಲಿದೆ.

ಆರು ರಥಗಳ ವೈಭವ: ಚಾಮರಾಜೇಶ್ವರ ದೊಡ್ಡ ರಥದ ಮುಂದೆ ಗಣಪತಿ ರಥ, ಸುಬ್ರಹ್ಮಣ್ಯಸ್ವಾಮಿ ಚಿಕ್ಕರಥ, ಚಂಡಿಕೇಶ್ವರ ಚಿಕ್ಕರಥ, ಮಹಾರಾಜರ ಉತ್ಸವ ಮೂರ್ತಿ ಸಾಗುತ್ತದೆ. ದೊಡ್ಡರಥದ ಹಿಂದೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಚಿಕ್ಕರಥ ಸಾಗುತ್ತದೆ. ಇದು ಜಾತ್ರೆಯ ವಿಶೇಷವಾಗಿದೆ.

ಆಷಾಢ ಮಾಸದಲ್ಲಿ ಶುಭ ಕಾರ್ಯ ನಡೆಯುವುದಿಲ್ಲ. ಆದರೆ, ಚಾಮರಾಜೇಶ್ವರ ರಥೋತ್ಸವ ನಡೆಯುವುದು ಮಾತ್ರ ವಿಶೇಷ. ಹೀಗಾಗಿ ಆಷಾಢ ಜಾತ್ರೆ ಎಂದೇ ಪ್ರಸಿದ್ಧಿ ಪಡೆದಿದೆ. ಪುರಾಣ ಪ್ರಸಿದ್ಧವಾಗಿರುವ ಚಾಮರಾಜೇಶ್ವರ ರಥೋತ್ಸವ ಈ ಹಿಂದೆ ಅತೀ ವೈಭವವಾಗಿ ನಡೆದು, ತೆಪ್ಪೋತ್ಸವ ನಡೆಯುತ್ತಿತ್ತು. 1836ರಲ್ಲಿ ಮೊದಲ ಬಾರಿಗೆ ಆಷಾಢ ಶುದ್ಧ ಹುಣ್ಣಿಮೆ ಸೋಮವಾರದಂದು ರಥೋತ್ಸವ ನಡೆಯಿತು. ರಥವನ್ನು ಅರೇಪುರದ ಬಸವರಾಜೇ ಅರಸು ಮಾಡಿಸಿಕೊಟ್ಟಿದ್ದರು. 1970ರಲ್ಲಿ ತೇರಿನ ಚಕ್ರವನ್ನು ಬದಲಾಯಿಸಲಾಯಿತು. ಈ ಹಿಂದೆ ತೇರು ಕಟ್ಟುವ ಕಾರ್ಯಕ್ಕೆ 15 ದಿನ ಹಿಡಿಯುತ್ತಿತ್ತು. ಒಟ್ಟು 56 ಕಂಬ, 84 ಅಡ್ಡ ಪಟ್ಟಿಗಳಿಂದ ತೇರು ಕಟ್ಟಿದ ನಂತರ, ಧ್ವಜ ಅಲಂಕಾರ, ಬಟ್ಟೆಗಳಿಂದ ಸಿಂಗಾರ ಮಾಡಲಾಗುತ್ತಿತ್ತು. 2017ರ ಫೆಬ್ರವರಿಯಲ್ಲಿ ಮಾನಸಿಕ ಅಸ್ವಸ್ಥನೊಬ್ಬ ರಥಕ್ಕೆ ಬೆಂಕಿ ಹಾಕಿದ್ದರಿಂದ ರಥ ಸುಟ್ಟು ಹೋಗಿತ್ತು. ಆ ಬಳಿಕ ರಥೋತ್ಸವ ಸ್ಥಗಿತಗೊಂಡಿತ್ತು. ಐದು ವರ್ಷಗಳ ಬಳಿಕ 2022ರಿಂದ ಮತ್ತೆ ರಥೋತ್ಸವ ಆರಂಭವಾಯಿತು.

ನವ ಜೋಡಿಗಳ ಜಾತ್ರೆ: ಚಾಮರಾಜೇಶ್ವರನ ಆಷಾಢ ಜಾತ್ರೆ ನವಜೋಡಿಗಳನ್ನು ಒಂದುಗೂಡಿಸುತ್ತದೆ. ಜಾತ್ರೆಗೆ ಜಿಲ್ಲೆ ಅಲ್ಲದೆ ಹೊರ ಜಿಲ್ಲೆಯ ನವಜೋಡಿಗಳು ಆಗಮಿಸಿ ರಥಕ್ಕೆ ಹಣ್ಣು ಜವನ ಎಸೆಯುವ ಮೂಲಕ ಇಷ್ಟಾರ್ಥ ನೆರವೇರಿಸುವಂತೆ ಪ್ರಾರ್ಥಿಸುತ್ತಾರೆ. ಅಲ್ಲದೇ ರೈತರು ಸಹ ಮಳೆ ಬೆಳೆಗಾಗಿ ಪ್ರಾರ್ಥಿಸುತ್ತಾರೆ.

ಬಿಗಿ ಪೊಲೀಸ್ ಬಂದೋಬಸ್ತ್: ರಥೋತ್ಸವ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಅಲ್ಲದೇ ಜಿಲ್ಲಾಧಿಕಾರಿಗಳು ಕಾನೂನು ಮತ್ತು ಸುವ್ಯವಸ್ಥೆ ಹಿತದೃಷ್ಟಿಯಿಂದ ಹಾಗೂ ಮುಂಜಾಗ್ರತಾ ಕ್ರಮವಾಗಿ ಜು.2ರ ಮಧ್ಯರಾತ್ರಿಯಿಂದ ಜು.3ರ ಮಧ್ಯರಾತ್ರಿವರೆಗೆ ಚಾಮರಾಜನಗರ ಪಟ್ಟಣ ವ್ಯಾಪ್ತಿಯ 5 ಕಿಮೀ ಸರಹದ್ದಿನಲ್ಲಿ ಎಲ್ಲಾ ರೀತಿಯ ಮದ್ಯ ಮಾರಾಟ, ಸಾಗಾಣಿಕೆ, ಅಕ್ರಮ ಮದ್ಯ ದಾಸ್ತಾನು ನಿಷೇಧಿಸಿ, ಒಣ ದಿನಗಳೆಂದು ಘೋಷಿಸಿದ್ದು, ಸಾರ್ವನಿಕರು ಸಹಕರಿಸುವಂತೆ ಮನವಿ ಮಾಡಿದ್ದಾರೆ.



ಇತಿಹಾಸದ ಪುಟಗಳಲ್ಲಿ: 1826ರ ವೇಳೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತನ್ನ ತಂದೆ ಜನಿಸಿದ ಅರಿಕುಠಾರದಲ್ಲಿ ದೇಗುಲ ಕಟ್ಟಿಸಿ ಚಾಮರಾಜನಗರವೆಂದು ನಾಮಕರಣ ಮಾಡಿದರು. ಶೃಂಗೇರಿ ಶ್ರೀಗಳು ಇಲ್ಲಿನ ರಕ್ತವರ್ಣದ ನರ್ಮದಾ ಶಿವಲಿಂಗ ನೀಡಿ, ಚಾಮರಾಜೇಶ್ವರ ಎಂದು ಪ್ರತಿಷ್ಠಾಪಿಸಿದ್ದರು. ದೇಗುಲದ ಅಭಿವೃದ್ಧಿಗೆ ಮಹಾರಾಜರ ಆಡಳಿತದ ವೇಳೆ 13 ಗ್ರಾಮಗಳ ಉಂಬಳಿಯೊಂದಿಗೆ ಒಡವೆ ದಾನ ನೀಡಿರುವ ಕುರಿತು ಚರಿತ್ರೆಯ ಪುಟಗಳು ಹೇಳುತ್ತವೆ.

ಬಿಳಿಗಿರಿರಂಗನಾಥಸ್ವಾಮಿ ಬೆಟ್ಟಕ್ಕೆ ತೆರಳಲು ನೂಕುನುಗ್ಗಲು



- ಸಕಾಲಕ್ಕೆ ಬಾರದ ಕೆಎಸ್‌ಆರ್‌ಟಿಸಿ ಬಸ್: ಪ್ರವಾಸಿಗರು, ಭಕ್ತರ ಪರದಾಟ
- ಚಾಲಕನ ಬಾಗಿಲು, ಕಿಟಕಿಯಿಂದ ಬಸ್ ಹತ್ತಿದ ನಾರಿಯರು

ಯಳಂದೂರು, ಜು.2– ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟಕ್ಕೆ ತೆರಳಲು ಸಕಾಲಕ್ಕೆ ಕೆಎಸ್‌ಆರ್‌ಟಿಸಿ ಬಸ್ ಬಾರದ ಹಿನ್ನೆಲೆಯಲ್ಲಿ ಭಕ್ತರು ಮತ್ತು ಪ್ರವಾಸಿಗರು ಪರದಾಡುವಂತಾಯಿತು.

ಭಾನುವಾರ ರಜಾ ದಿನವಾಗಿದ್ದರಿಂದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಬಿಳಿಗಿರಿರಂಗನಬೆಟ್ಟಕ್ಕೆ ತೆರಳಲು ಯಳಂದೂರು ಬಸ್ ನಿಲ್ದಾಣದಲ್ಲಿ ಗಂಟೆಗಟ್ಟಲೇ ಕಾದು ಬಸವಳಿದರು.

ಸಾರಿಗೆ ಸಂಸ್ಥೆಯವರು ಶನಿವಾರ, ಭಾನುವಾರ ಸೇರಿದಂತೆ ವಿಶೇಷ ದಿನಗಳಲ್ಲಿ ಬೆಟ್ಟಕ್ಕೆ ತೆರಳುವ ಭಕ್ತರಿಗೆ ಅನುಕೂಲವಾಗಲು ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸುತ್ತಿದ್ದರು. ಆದರೆ, ಭಾನುವಾರ ಹೆಚ್ಚುವರಿ ಬಸ್ ನೀಡದ ಹಿನ್ನೆಲೆಯಲ್ಲಿ ಪ್ರಯಾಣಿಕರು ಪರದಾಡಿದರು.

ಚಾಮರಾಜನಗರ ಮತ್ತು ಕೊಳ್ಳೇಗಾಲ ಮಾರ್ಗವಾಗಿ ಯಳಂದೂರಿಗೆ ಬರುವ ಕೆಎಸ್‌ಆರ್‌ಟಿಸಿ ಬಸ್ ಬಂದರೆ ಸಾಕು ಬೆಟ್ಟಕ್ಕೆ ಹೋಗುವ ಭಕ್ತರು ಬಸ್ ತಡೆದು ಹತ್ತಲು ಮುಂದಾಗುತ್ತಿದ್ದು, ಕಂಡು ಬಂತು. ಆದರೆ, ಆ ಬಸ್ ಬೆಟ್ಟಕ್ಕೆ ಹೋಗುವುದಿಲ್ಲ ಎಂದು ನಿರ್ವಾಹಕರು ಹೇಳಿದರೆ ಭಕ್ತರು ನಿರಾಸೆಯಿಂದ ಹಿಂದಿರುಗುತ್ತಿದ್ದರು.

ಬಸ್ ಹತ್ತಲು ನೂಕು ನುಗ್ಗಲು: ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗುವ ಬಸ್‌ಗೆ ಮಹಿಳೆಯರು ಚಾಲಕನ ಬಾಗಿಲು, ಕಿಟಕಿ ಮೂಲಕ ಹತ್ತುತ್ತಿದ್ದು ಸಾಮಾನ್ಯವಾಗಿತ್ತು. ಕೆಲವರು ಖಾಸಗಿ ಬಸ್‌ನಲ್ಲಿ ಬೆಟ್ಟಕ್ಕೆ ತೆರಳಿದರು.

ಫ್ರೀ ಬಸ್ ಬಿಡಲು ಹಿಂದೇಟು: ಚಾಮರಾಜನಗರ ಮತ್ತು ಕೊಳ್ಳೇಗಾಲಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಇದ್ದರೂ ಹೆಚ್ಚಿಗೆ ಬಸ್ ಬಿಡಲು ಸಾರಿಗೆ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಅಧಿಕಾರಿಗಳು ಪ್ರವಾಸಿ ತಾಣಗಳಿಗೆ ಬಸ್ ಬಿಡಲು ಹಿಂದೇಟು ಹಾಕುತ್ತಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದ್ದು, ಈ ಬಗ್ಗೆ ಸ್ಥಳೀಯ ಶಾಸಕರು ಮತ್ತು ಜಿಲ್ಲಾಡಳಿತ ಕ್ರಮಕ್ಕೆ ಮುಂದಾಗಬೇಕಾಗಿದೆ.



“ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟಕ್ಕೆ ಈಗಾಗಲೇ 5 ವಿಶೇಷ ಬಸ್ ಬಿಡಲಾಗಿದ್ದು, ಅದರ ಜೊತೆಯಲ್ಲೇ 5 ರೂಟ್ ಬಸ್ ಬಿಡಲಾಗಿದೆ. ಆದರೆ ಜನ ಜಾಸ್ತಿ ಬಂದರೆ ನಾವೇನೂ ಮಾಡಲು ಸಾಧ್ಯ, ಇರುವ ಬಸ್ಸಿನಲ್ಲಿ ಜನರು ಅನುಸರಿಸಿಕೊಂಡು ಪ್ರಯಾಣ ಮಾಡಬೇಕಾಗಿದೆ. ಹೆಚ್ಚಿಗೆ ಬಸ್ ಬಿಡಲು ಸಾಧ್ಯವಿಲ್ಲ.

-ಕುಮಾರ್ ನಾಯಕ್, ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್, ಚಾಮರಾಜನಗರ.

“ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರ ಉಚಿತ ಪ್ರಯಾಣದ ವೆಚ್ಚವನ್ನು ಸರ್ಕಾರವೇ ಭರಿಸುತ್ತಿದೆ. ಆದರೂ ಸಾರಿಗೆ ಇಲಾಖೆ ಅಧಿಕಾರಿಗಳು ವಿಶೇಷ ದಿನಗಳಲ್ಲಿ ಹೆಚ್ಚಿಗೆ ಬಸ್ ಬಿಡದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇನ್ನಾದರೂ ಸರ್ಕಾರ ಮತ್ತು ಸ್ಥಳೀಯ ಜನಪ್ರತಿನಿಧಿಗಳು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು.

- ಶಕುಂತಲಾ ರಮೇಶ್, ಮೈಸೂರು ನಿವಾಸಿ.

ಕಣ್ಣಿನ ತಪಾಸಣಾ ಶಿಬಿರ ಸದ್ಬಳಕೆ ಮಾಡಿಕೊಳ್ಳಿ



ಹನೂರು, ಜು.2– ಪಟ್ಟಣದಲ್ಲಿ ಪ್ರತಿ ತಿಂಗಳು ನಡೆಯುವ ಕಣ್ಣಿನ ತಪಾಸಣಾ ಶಿಬಿರವನ್ನು ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮುಖಂಡ ಲೋಕೇಶ್ ಜತ್ತಿ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಜನಧ್ವನಿ ಬಿ.ವೆಂಕಟೇಶ್ ಅಭಿಮಾನಿ ಬಳಗ ಮತ್ತು ಓಬಿಸಿ ಮೋರ್ಚಾ ವತಿಯಿಂದ ಆಯೋಜಿಸಿದ್ದ ಕಣ್ಣಿನ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಕೆಲವರು ಕಣ್ಣಿನ ರಕ್ಷಣೆ ಬಗ್ಗೆ ಗಮನ ನೀಡುತ್ತಿಲ್ಲ. ಇದರಿಂದ ಚಿಕ್ಕ ವಯಸ್ಸಿನಲ್ಲೇ ಕಣ್ಣಿನ ದೋಷದಿಂದಾಗಿ ಕನ್ನಡಕ ಬಳಸುವಂತಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ದೃಷ್ಟಿ ವೃದ್ಧಿಸಬಲ್ಲ ಆಹಾರ ಪದಾರ್ಥಗಳು, ತರಕಾರಿ ಸೇವಿಸುವ ಮೂಲಕ ಕಣ್ಣಿನ ರಕ್ಷಣೆ ಹಾಗೂ ಆರೋಗ್ಯದ ಕಡೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಇದೇ ವೇಳೆ ಶಿಬಿರದಲ್ಲಿ ಹನೂರು ಸೇರಿದಂತೆ ಸುತ್ತಮುತ್ತಲ ಗ್ರಾಮಗಳ 191 ಮಂದಿ ತಪಾಸಣೆಗೆ ಒಳಪಟ್ಟರು. ಅಲ್ಲದೇ ಶಸ್ತ್ರಚಿಕಿತ್ಸೆ ಅವಶ್ಯವಿದ್ದ 74 ಮಂದಿಯನ್ನು ಬೆಂಗಳೂರಿಗೆ ಕರೆದೊಯ್ಯಲಾಯಿತು.

ಈ ಸಂದರ್ಭ ಶಂಕರ ಕಣ್ಣಿನ ಆಸ್ಪತ್ರೆ ವೈದ್ಯ ಡಾ.ಶ್ರೀಕಂಠಮೂರ್ತಿ, ಕೌದಳ್ಳಿ ಓಬಿಸಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮೀನಾ, ಜನಧ್ವನಿ ಬಿ.ವೆಂಕಟೇಶ್ ಕಚೇರಿ ಸಿಬ್ಬಂದಿಗಳಾದ ಅರವಿಂದ್, ರಾವ್ ಚರಣ್, ಅಪ್ಪು, ಮುಖಂಡ ರಾಜು ಹಾಜರಿದ್ದರು.

ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.2– ಚಾಮರಾಜನಗರ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗಾಗಿ ಅರ್ಹ ವಕೀಲರಿಂದ ಅರ್ಜಿ ಆಹ್ವಾನಿಸಲಾಗಿದೆ.

10 ವರ್ಷ ವಕೀಲ ವೃತ್ತಿ ಪೂರೈಸಿದ ಅರ್ಹ ವಕೀಲರು ಸಂಬಂಧಪಟ್ಟ ದಾಖಲಾತಿಗಳನ್ನು ದೃಢೀಕರಿಸಿ ಜು.15ರೊಳಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಬಹುದೆಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.2– ಜಿಲ್ಲೆಯ ಹೊಂಡರಬಾಳುವಿನಲ್ಲಿರುವ ಜವಾಹರ ನವೋದಯ ವಿದ್ಯಾಲಯದಲ್ಲಿ 2024–25ನೇ ಸಾಲಿನ 6ನೇ ತರಗತಿ ದಾಖಲಾತಿಗಾಗಿ 2024ರ ಜನವರಿ 20ರಂದು ನಡೆಯುವ ಜವಾಹರ ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆಗೆ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮೀಸಲಾತಿಯು ಕೇಂದ್ರ ಸರ್ಕಾರದ ನಿಯಮದಂತೆ ಅನ್ವಯವಾಗಲಿದೆ. ವೆಬ್‌ಸೈಟ್ https://cbseitms.rcil.gov.in/nvs/ ಮೂಲಕ ಉಚಿತವಾಗಿ ಅರ್ಜಿಯನ್ನು ಆಗಸ್ಟ್ 10ರೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://navodaya.gov.in ಗೆ ಭೇಟಿ ನೀಡಬಹುದು ಮತ್ತು ಸಹಾಯವಾಣಿ ಸಂಖ್ಯೆ 9742476738, 8249090898, 9964932482 ಸಂಪರ್ಕಿಸಬಹುದು.

ಮೈಸೂರು ಸಾಹಿತ್ಯೋತ್ಸವಕ್ಕೆ ತೆರೆ: ಸಾಧಕರಿಂದ ಅರ್ಥಪೂರ್ಣ ಸಂವಾದ

ಇತಿಹಾಸ, ಐತಿಹಾಸಿಕ ಕಥೆಗಳಲ್ಲಿ ರಾಜರ ಗುಣಗಾನ ಶೈಲಿ ವಾಸ್ತವತೆಗೆ ದೂರವಿದೆ

ಲೇಖಕ ವಸುಧೀಂದ್ರ ಅಭಿಮತ



ಮೈಸೂರು. ಜು. 2(ಸಿಎನ್)– ಪುರಾಣ, ಇತಿಹಾಸ, ಐತಿಹಾಸಿಕ ಕಥೆಗಳಲ್ಲಿ ಬರುವ ರಾಜರ ಆಡಳಿತ, ಗುಣಗಾನ ಶೈಲಿಯೂ, ವಾಸ್ತವತೆಯಿಂದ ದೂರವಿದೆ. ಎಲ್ಲಾ ರಾಜರು ತಮ್ಮ ಅಧಿಕಾರ ಸ್ಥಿರತೆ ಹಾಗೂ ರಾಜ್ಯ ವಿಸ್ತರಣೆ ದೃಷ್ಟಿಯಿಂದ ಸಮಾಜಕ್ಕೆ ಒಳ್ಳೆಯದು ಕೆಟ್ಟದ್ದು ಎರಡನ್ನೂ ಮಾಡಿದ್ದಾರೆ. ಹಾಗಾಗಿ ಒಬ್ಬ ರಾಜನನ್ನು ಹೊಗಳಿ, ಇನ್ನೊಬ್ಬರನ್ನು ತೆಗಳುವ ಕೆಲಸಕ್ಕೆ ಲೇಖನಕಾರರು ಜೋತು ಬೀಳ ಬಾರದು. ಸಾಮಾನ್ಯ ಜನರನ್ನು ಮನಸ್ಸಿನಲ್ಲಿಟ್ಟು ಕೊಂಡು ಕಥೆಗಳನ್ನು ಹೆಣೆಯಬೇಕು. ಇಂದಿನ ಪೀಳಿಗೆಯವರು ಸತ್ಯಾಂಶವನ್ನು ಅರಿತು ಮುಂದೆ ಸಾಗಬೇಕು ಎಂದು ಲೇಖಕ ವಸುಧೀಂದ್ರ ಸಲಹೆ ನೀಡಿದರು.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ 2015 ಇವರುಗಳ ವತಿಯಿಂದ ನಗರದ ಸದರನ್ ಸ್ಟಾರ್ ಹೋಟೆಲ್‌ನ ಜ್ಯೋತಿ ಸಭಾಂಗಣದಲ್ಲಿ, ಭಾನುವಾರ ಆಯೋಜಿಸಲಾಗಿದ್ದ, ಪ್ರಸಕ್ತ ಸಾಲಿನ 'ಮೈಸೂರು ಸಾಹಿತ್ಯೋತ್ಸವ' ಚರ್ಚಾ ಗೋಷ್ಠಿಯಲ್ಲಿ ನಡೆದ "Uncommon tales from unexpected realms' ವಿಷಯ ಕುರಿತು ಅವರು ವಿಶ್ಲೇಷಿದರು.

ಐತಿಹಾಸಿಕ, ಪುರಾಣ, ಕಲ್ಪನಾತ್ಮಕ, ಕಾದಂಬರಿಗಳ ಪುಸ್ತಕಗಳು ಈಗಿನ ಪೀಳಿಗೆಗೆ ಯಾವ ಸಂದೇಶ ನೀಡುತ್ತಿವೆ ಎಂಬ ಅರಿವು ಮೊದಲು ನಮಗಿರಬೇಕು. ಅದರ ಸತ್ಯಾಸತ್ಯತೆ ಅರಿತು ನಾವು ಮುಂದೆ ಸಾಗಬೇಕಾಗುತ್ತದೆ. ಅವರವರ ಸಮುದಾಯದ ರಾಜರ ಬಗ್ಗೆ ಹೊಗಳುಭಟ್ಟರ ರೀತಿ ಬಿಂಬಿಸಿ, ಇತಿಹಾಸವನ್ನು ತಿರುಚುವ ಕೆಲಸ ಎಲ್ಲರಿಂದಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

16 ನೇ ಶತಮಾನದ ಜೀವನವನ್ನು ನಾವು ಊಹಿಸಲು ಸಾಧ್ಯವಾಗಲ್ಲ. ಕೃಷ್ಣದೇವರಾಯ, 2 ನೇ ದೇವರಾಯ, ಬಹುಮನಿ ಸುಲ್ತಾನರು, ಬಿಜಾಪುರ ಸುಲ್ತಾನರು, ಕೆಳದಿ ನಾಯಕರು ಹಾಗೂ 17 ನೇ ಶತಮಾನದಲ್ಲಿ ಮರಾಠರು ಸೇರಿ ಹೀಗೆ ಹತ್ತು ಹಲವು ರಾಜರು ಕರ್ನಾಟಕವನ್ನು ಆಳಿದ್ದಾರೆ. ಅವರೆಲ್ಲರ ಧ್ಯೇಯೋದ್ದೇಶಗಳು ಬೇರೆಬೇರೆ ಆಗಿದ್ದವು. ಆ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೋ ಹಾಗೇ ರಾಜರ ಕಾರ್ಯವೈಖರಿ ಇತ್ತು. ಅವರ ಆಸ್ಥಾನದಲ್ಲಿದ್ದ ಕೆಲ ಪಂಡಿತರು ಅವರಿಗೆ ತಕ್ಕ ಹಾಗೇ ರಾಜರನ್ನು ಹೊಗಳಿ ಬರೆದಿದ್ದಾರೆ. ತಿರುಚಲಾದ ವಿಷಯಗಳ ಬಗ್ಗೆ ಇಂದಿನ ಪೀಳಿಗೆ ಅಭ್ಯಾಸ ನಡೆಸುತ್ತಿರುವುದು ಕಳವಳಕಾರಿ ವಿಚಾರವಾಗಿದೆ 50 ವರ್ಷಗಳ ಹಿಂದೆಯೇ ಬಾಹ್ಯಾಕಾಶ ವಿಜ್ಞಾನದ ಬಗ್ಗೆ ಉಲ್ಲೇಖಿಸಿದ ಕುರುಹುಗಳಿವೆ. ಆಗಿನ ಕಾಲದಲ್ಲಿ ಸಾಮಾಜಿಕ ಜಾಲತಾಣ, ಇಂಟರ್‌ನೆಟ್ ಸೇವೆ ಇಲ್ಲದ ಕಾರಣ ಇದರ ಬಗ್ಗೆ ಹೆಚ್ಚು ಸುದ್ದಿಯಾಗಿಲ್ಲ.

ಪುರಾಣದ ಬಗ್ಗೆ ಮಾತನಾಡುತ್ತಾ, ಮಹಾಭಾರತ ಹಾಗೂ ರಾಮಾಯಣ ಒಂದು ಈರುಳ್ಳಿ ಇದ್ದ ಹಾಗೇ ಕೆದಕಿದಷ್ಟು ಪರದೆಗಳು ತೆರೆಯುತ್ತವೆ. ಮಹಾಭಾರತ, ರಾಮಾಯಣ ಕಥೆಗಳು ಬೇರೆ ಬೇರೆ ಆದರೆ ಸಾರಾಂಶ ಒಂದೇ ಆಗಿದೆ. ಇಂತಹ ಮಹಾಕಾವ್ಯದ ಬಗ್ಗೆ ಬರೆಯಬೇಕಾದರೆ ಎಚ್ಚರಿಕೆಯಿಂದ ಬರೆಯಬೇಕು. ಗ್ರಂಥಗಳನ್ನು ಅರ್ಥೈಸಿಕೊಂಡು ಜನರ ಮನಮುಟ್ಟುವ ರೀತಿ ಪುಸ್ತಕಗಳನ್ನು ಬರೆಯಬೇಕು ಎಂದರು.

ಭಾರತವನ್ನು ಅನೇಕ ರಾಜರು ಆಳಿದ್ದಾರೆ. ದಕ್ಷಿಣದ ರಾಜ ರಾಜ ಚೋಳನ್ ತಮಿಳುನಾಡಿನ ಆರಾಧ್ಯ ರಾಜ, ಅದೇ ರಾಜನಿಗೆ ಕರ್ನಾಟಕದಲ್ಲಿ ವಿರೋಧವಿದೆ. ರಾಜರನ್ನು ವಿರೋಧಿಸುವ ನೀತಿ ಅನುಸರಿಸುವುದು ಒಳ್ಳೆಯದಲ್ಲ. ಆತನ ಕೆಲಸ ಅವನು ಮಾಡಿರುತ್ತಾನೆ. ಒಳ್ಳೆಯದನ್ನು ತೆಗೆದುಕೊಂಡು ಕೆಟ್ಟದ್ದನ್ನು ಬಿಡಬೇಕು. ಯಾರನ್ನು ಅತಿಯಾಗಿ ಹೊಗಳಬಾರದು ಎಂದರು.

ಮಹಿಳೆಯರಿಗೆ 12 ರಿಂದ 16 ನೇ ಶತಮಾನ ಉತ್ತಮವಾಗಿರಲಿಲ್ಲ. ಪುರುಷರ ಅಡಿಯಾಳಾಗಿದ್ದರು. ಆದರೆ ಪ್ರಸ್ತುತ ಹಾಗಿಲ್ಲ. ಹಿಂದಿನ ಹೊಯ್ಸಳ, ವಿಜಯನಗರ ಅರಸರ ಕಾಲದಲ್ಲಿದ್ದ ಅನೇಕ ಸಂಪ್ರದಾಯಗಳು ಇಂದಿಗೂ ಪ್ರಚಲಿತದಲ್ಲಿವೆ. ಅಂದು ರಾಜ ಯುದ್ಧಕ್ಕೆ ತೆರಳಿದರೆ ವಿಜಯ ತಿಲಕ ಇಟ್ಟು ಕಳುಹಿಸುತ್ತಿದ್ದರು. ಆ ಪದ್ಧತಿ ಇಂದು ಕೂಡ ಇದೆ ಯಾವುದು ವೌಢ್ಯವಲ್ಲವೋ ನಂಬಿಕೆಯಾಗಿರುತ್ತೋ, ಅದನ್ನು ಅನುಸರಿಸುವುದರಲ್ಲಿ ತಪ್ಪಿಲ್ಲ ಎಂದರು.

ಬಳಿಕ ಲೇಖಕ ಅರುಣ್ ಮಾತನಾಡಿ, ನಾನು ಇತಿಹಾಸಕಾರನೇನಲ್ಲ, ಆದರೆ 17ನೇ ಶತಮಾನದ ಬಗ್ಗೆ ಬರೆಯಲು ಯೋಚಿಸಿದ್ದೆ, ಅದಕ್ಕೆ ಪೂರಕವಾದ ಮಾಹಿತಿ ಲಭ್ಯವಾಗಲಿಲ್ಲ. ಒಬ್ಬ ಬರಹಗಾರನ ಕೌಶಲ್ಯ ಭಾಷೆ ಮೇಲಿನ ಹಿಡಿತ. ಜನರಿಗೆ ಅರ್ಥವಾಗುವ ರೀತಿಯಲ್ಲಿ ಬರೆದರೆ ಮಾತ್ರ ಪುಸ್ತಕಗಳು ಹೆಚ್ಚು ಸದ್ದು ಮಾಡುತ್ತವೆ. ಇತಿಹಾಸದ ಬಗ್ಗೆ ಬರೆದಿದ್ದು ಯಾವುದೇ ರಾಜರಲ್ಲ ಜನಸಾಮಾನ್ಯರೇ ಆಗಿದ್ದಾರೆ. ಮೊದಲು ರಾಜ್ಯಗಳ ರೀತಿ ನೋಡುತ್ತಿರಲಿಲ್ಲ. ಈಗ ತಮಿಳುನಾಡು, ಕರ್ನಾಟಕ, ಆಂಧ್ರಎಂದು ವಿಂಗಡಿಸುತ್ತಾರೆ ಎಂದರು.

ಇಮ್ಮಡಿ ಪುಲಕೇಶಿ, ಹರ್ಷವರ್ಧನ, ಚಾಲುಕ್ಯರು ಹಲವರು ನಮ್ಮ ದೇಶವನ್ನು ಆಳಿದ್ದಾರೆ ಅವರಿಂದ ಉತ್ತಮ ಕೆಲಸಗಳು ಆಗಿವೆ. ಕೆಟ್ಟ ಕೆಲಸಗಳು ಆಗಿವೆ. ಉತ್ತಮವಾದ ಕೆಲಸಗಳನ್ನು ಹೊಗಳಬೇಕು. ನನ್ನ ಮಕ್ಕಳು ನನ್ನನ್ನು ಕೇಳುತ್ತಾರೆ ಇತಿಹಾಸದ ಬಗ್ಗೆ ಹೇಳಿಕೊಡಿ ಎಂದು. ಆದರೆ ನಾನು ಅವರಿಗೆ ಹೇಳುತ್ತೇನೆ ಮೊದಲು ಅಂಕಗಳನ್ನು ಗಳಿಸಿ, ವಿದ್ಯಾಭ್ಯಾಸ ಮಾಡಿ ಅಮೇಲೆ ನಿಮಗೆ ಸತ್ಯಾಂಶವುಳ್ಳ ಇತಿಹಾಸ ಬೋಧಿಸುತ್ತೇನೆ ಎಂದಿದ್ದೇನೆ. ತಿರುಚಿರುವ ಇತಿಹಾಸ ಓದಿ ಪ್ರಯೋಜನ ಏನಿದೆ ಹೇಳಿ ಎಂದು ಸುದೀರ್ಘ ಮಾಹಿತಿ ನೀಡಿದರು.

ಪ್ರಸ್ತುತ ಕರ್ನಾಟಕದಲ್ಲಿ ದೊಡ್ಡ ಕಾಂಟ್ರವರ್ಸಿ ಎಂದರೆ ಟಿಪ್ಪು ಸುಲ್ತಾನ್. ಈತನನ್ನು ಹೊಗಳುವವರೂ ಇದ್ದಾರೆ ತೆಗಳುವವರೂ ಇದ್ದಾರೆ. ಕೆಲವರು ಟಿಪ್ಪು ಸುಲ್ತಾನನ ಪಠ್ಯ ಬ್ಯಾನ್ ಮಾಡಿ ಎಂದರೆ, ಮತ್ತಲವರು ಮೈಸೂರು ಹುಲಿ ಬಿರುದು ಸರಿಯಿಲ್ಲ ಎನ್ನುತ್ತಾರೆ. ಆದರೆ ನಾನು ಹೇಳುವುದು ಇಷ್ಟೆ ದ್ವೇಷದಿಂದ ಏನೂ ಸಾಧಿಸಲಾಗಲ್ಲ ಟಿಪ್ಪುವಿನ ಒಳ್ಳೆಯ ಕೆಲಸಗಳನ್ನು ಒಪ್ಪಬೇಕು, ಕೆಟ್ಟ ವಿಚಾರಗಳಿಂದ ದೂರವಿರುವುದು ಒಳ್ಳೆಯದು. ಮನುಷ್ಯತ್ವಕ್ಕಿಂತ ಮತ್ತೊಂದು ವಿಚಾರವಿಲ್ಲ ಎಂದರು.

ಚರ್ಚಾಗೋಷ್ಠಿಯಲ್ಲಿ ಲೇಖಕಿ ಕಾಮಿನಿ ದಂಡಪಾಣಿ ಡಾ. ಶಿವಶಾಸ್ತ್ರಿ ಗಾಯತ್ರಿ ಮತ್ತಿತರರು ಉಪಸ್ಥಿತರಿದ್ದರು.

ಬ್ರಿಟಿಷರು ಪರಿಚಯಿಸಿದ ಮನೋಕಲ್ಚರ್ ಅನುಸರಿಸಿ ನಮ್ಮ ಅರಣ್ಯಕ್ಕೆ ಅಪಾಯ ತಂದೊಡ್ಡಿದ್ದೇವೆ

ಪತ್ರಕರ್ತ ಶಿವಾನಂದ ಕಳವೆ ವಿಷಾದ

ಮೈಸೂರು,ಜು.2(ಎಂಟಿವೈ)– ಬ್ರಿಟಿಷರು ಪರಿಚಯಿಸಿದ ಮನೋಕಲ್ಚರ್ ಏಕಜಾತಿಯ ಸಸ್ಯಗಳ ನೆಡುತೋಪನ್ನು ಇಂದಿಗೂ ನೆಟ್ಟು ಕೈಗಾರೀಕರಣದ ದಾರಿಯಲ್ಲಿ ಸಾಗುತ್ತಾ ಹೋಗಿ ಇನ್ನಿಲ್ಲದ ಅಪಾಯವನ್ನು ಕರ್ನಾಟಕದ ಅರಣ್ಯಕ್ಕೆ ತಂದೊಡ್ಡಿದ್ದೇವೆ ಎಂದು ಪತ್ರಕರ್ತ ಶಿವಾನಂದ ಕಳವೆ ವಿಷಾದಿಸಿದ್ದಾರೆ.

ಮೈಸೂರು ಲಿಟರರಿ ಫೋರಮ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿರುವ 'ಮೈಸೂರು ಸಾಹಿತ್ಯ ಸಂಭ್ರಮ' ಕಾರ್ಯಕ್ರಮದಲ್ಲಿ 'ಪರಿಸರಕ್ಕಾಗಿ ನಾವು–ಪರಿಸರಕ್ಕಾಗಿ ನಾವು' ಸಂವಾದದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅರಣ್ಯ ಪ್ರದೇಶ ಸಂವೃದ್ಧವಾಗಿಲ್ಲ. ಎಲ್ಲೆಡೆ ಅರಣ್ಯ ಪ್ರದೇಶ ಕ್ಷೀಣಿಸುತ್ತಿದೆ. ಕರ್ನಾಟಕದಲ್ಲಿ ದೊಡ್ಡ ಕಾಡುಗಳನ್ನು ಹುಡುಕುವ ಪರಿಸ್ಥಿತಿಯಲ್ಲಿ ಸಾಗಿದಾಗ ಬೆಟ್ಟಗಳು ಬೋಳಾಗಿವೆ, ಬಯಲಾಗಿ ಪರಿವರ್ತನೆಯಾಗಿವೆ. ನಮ್ಮ ಅರಣ್ಯ ಪ್ರದೇಶ 'ಹಸಿರು ಹರಿದು, ಹರಿದು ಇರುವುದು ಒಂದು ಹಸಿರಿನ ತುಂಡು' ಎನ್ನುವಂತಾಗಿದೆ. ರಸ್ತೆ, ವಿದ್ಯುತ್ ಲೈನ್, ರೈಲ್ವೆ ಹಳಿ, ನಿವೇಶನವಾಗಿ ಪರಿವರ್ತನೆಯಾಗಬೇಕು. ಕೃಷಿ ವಿಸ್ತರಣೆಯಾಗಬೇಕು ಎನ್ನುವ ಪರಿಸ್ಥಿತಿಯಲ್ಲಿ ಕರ್ನಾಟಕದ ಅರಣ್ಯಗಳು ಛಿದ್ರಗೊಳ್ಳುತ್ತಿವೆ ಎಂದು ವಿಷಾದಿಸಿದರು.

ನಮ್ಮ ಸ್ಥಿತಿ(ಅರಣ್ಯ) ಸಣ್ಣ ತುಂಡು ಇಟ್ಟುಕೊಂಡು ಏನೆಲ್ಲಾ ವೈವಿಧ್ಯತೆ ಇದೆ ಎಂದು ಹೇಳಿಕೊಳ್ಳುವಂತಾಗಿದೆ. ಸಂರಕ್ಷಣೆಯ ದಾರಿಯಲ್ಲಿ ಕಾಲುದಾರಿಯ ಕಾರ್ಯಕರ್ತರ ಕೊರತೆ ಎದ್ದು ಕಾಣುತ್ತಿದೆ. ನಮಗೆ 80ರ ದಶಕದಲ್ಲೇ ಪರಿಸರ ಜ್ಞಾನ ಬಂದಿದೆ ಇರುವ ಜ್ಞಾನದಲ್ಲಿ ನೀರು, ಭೂಮಿ, ಕಾಡು, ಕೆರೆಯನ್ನು ಉಳಿಸಲು ಏನು ಮಾಡಬೇಕು ಎಂದು ಆಲೋಚಿಸಬೇಕು. ಪಠ್ಯ, ಪ್ರವಚನಗಳಲ್ಲಿ ಹೇಳುವುದರೊಂದಿಗೆ ಪ್ರಾಯೋಗಿಕವಾಗಿ ಸಂರಕ್ಷಣಾ ಕಾರ್ಯ ನಡೆಸಬೇಕು ಎಂದು ಅಭಿಪ್ರಾಯಪಟ್ಟರು.

ನಮ್ಮಲ್ಲಿ ಅಡಿಕೆ ಬೆಳೆಗೆ ಬೆಲೆ ಹೆಚ್ಚಾದರೆ, ಎಲ್ಲರೂ ಅಡಿಕೆಯನ್ನೇ ಬೆಳೆಯಲು ಮುಂದಾಗುತ್ತಾರೆ. ಒಂದು ಅಡಿಕೆ ಮರ ದಿನಕ್ಕೆ 14 ಲೀಟರ್ ನೀರು ಬಳಕೆಯಾಗುತ್ತದೆ. ಒಂದು ಎಕರೆಯಲ್ಲಿ 550 ಅಡಿಕೆ ಮರ ಬೆಳೆಯಲಾಗುತ್ತದೆ. ನೀರಿಲ್ಲದ ಊರಲ್ಲಿ ಕೃಷಿಯ ವಿಸ್ತರಣೆಗಳು ಆರ್ಥಿಕವಾಗಿ ಒಂದೇ ಬೆಳೆಯ ಹಿಂದೆ ಹೋಗುವುದು ಒಂದು ಕಡೆಯಾದರೆ, ಬೆಳೆದಿರುವ ಸಸ್ಯವನ್ನು ಕಡಿದು, ಬೋಳು ಮಾಡುವ ದುಸ್ಥಿತಿಯನ್ನೂ ಕಾಣುತ್ತಿದ್ದೇವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪರಿಸರ ಬಳಗ ಹಾಗೂ ಚಾಮುಂಡಿ ಬೆಟ್ಟ ಉಳಿಸಿ ಸಮಿತಿಯ ಪರಶುರಾಮೇಗೌಡ ಮಾತನಾಡಿ, ಯಾವುದೇ ಕೆಲಸ ಆರಂಭಿಸದೇ ಭರವಸೆ ಹುಟ್ಟುವುದಿಲ್ಲ. ಪರಿಸರ ಬಳಗದವರು ಸಣ್ಣ ಪ್ರಮಾಣದ ಕೆಲಸ ಮಾಡುತ್ತಿದ್ದೇವೆ. ನಮ್ಮಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಬೇಕು. ಬಹುತೇಕ ಕಡೆ ಪರಿಸರ ಹಾಳಾಗುತ್ತಿದೆ. ಯಾವೆಲ್ಲಾ ದೇಶದಲ್ಲಿ ಏನೆಲ್ಲಾ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸಬಹುದಾಗಿದೆ. ಈ ಹಿಂದೆ ಆದ್ರಿ ಮಳೆ ಸಮಯ ಸಾಕಷ್ಟು ಮಳೆ ಬರುತ್ತಿತ್ತು. ಚಳಿ ಹೆಚ್ಚಾಗಿರುತ್ತಿತ್ತು. ಆದರೆ, ಇಂದು ಪರಿಸ್ಥಿತಿ ಬದಲಾಗಿದೆ. ಹಿರಿಯರು ಈ ಹಿಂದೆ ರೋಹಿಣಿ ಮಳೆ ರೋಡ್ ಕೆಸರುಮಯವಾಗುತ್ತದೆ, ಭರಣಿ ಮಳೆಯಿಂದ ಧರಣಿ ಹಸಿರಾಗುತ್ತದೆ ಎಂದು ಹೇಳುತ್ತಿದ್ದು. ಆದರೆ ಮಳೆ ಬರುತ್ತಿಲ್ಲ ಆದರೂ ನಾವೆಲ್ಲಾ ಸುಮ್ಮನಿದ್ದೇವೆ. ಕೆರೆ ಮುಚ್ಚಿ ಸೈಟ್ ಮಾಡುತ್ತಿದ್ದೇವೆ. ಮರ ಕಡಿದು ರಸ್ತೆ, ರೈಲ್ವೆ ಹಳಿ ನಿರ್ಮಾಣ ಮಾಡುತ್ತಿದ್ದೇವೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಅನಾಹುತಕ್ಕೆ ಕಾರಣರಾಗುತ್ತೇವೆ. ಈ ಹಿನ್ನೆಲೆಯಲ್ಲಿ ಪರಿಸರ ಬಳಗದಿಂದ ಗಿಡ ನೆಡುವುದು. ಮರ ಕಡಿಯದೇ ಇರುವುದು, ಪ್ಲಾಸ್ಟಿಕ್ ಬಳಕೆ ಮಾಡಬಾರದು ಎಂದು ಜಾಗೃತಿ ಮೂಡಿಸುತ್ತೇವೆ ಸಾಕಷ್ಟು ಚಟುವಟಿಕೆ ಮಾಡುತ್ತಿದ್ದೇವೆ.

ಸಂವಾದವನ್ನು ಪತ್ರಕರ್ತ ಹೆಚ್.ಬಿ. ಇಂದ್ರೇಶ್ ಕುಮಾರ್ ನಡೆಸಿಕೊಟ್ಟರು.

ಪರಿಸರದ ಬಗೆಗಿನ ಬೇಜವಾಬ್ದಾರಿಯಿಂದ ಕರ್ನಾಟಕದಲ್ಲಿ ಮರುಭೂಮಿ ಸೃಷ್ಟಿ: ನಾಗೇಶ್ ಹೆಗ್ಡೆ ಆತಂಕ



ಮೈಸೂರು, ಜು.2(ಎಂಟಿವೈ)– ಪರಿಸರದ ಬಗ್ಗೆ ಇರುವ ಬೇಜವಾಬ್ದಾರಿ ಧೋರಣೆಯಿಂದ ದೇಶದ ಎರಡನೇ ದೊಡ್ಡ ಮರುಭೂಮಿ ಕರ್ನಾಟಕದಲ್ಲಿ ಸೃಷ್ಟಿಯಾಗುತ್ತಿದೆ ಎಂದು ವಿಜ್ಞಾನ ಬರಹಗಾರರೂ ಹಾಗೂ ಪರಿಸರವಾದಿಗಳೂ ಆದ ನಾಗೇಶ್ ಹೆಗ್ಡೆ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ಲಿಟರರಿ ಫೋರಮ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿರುವ 'ಮೈಸೂರು ಸಾಹಿತ್ಯ ಸಂಭ್ರಮ' ಕಾರ್ಯಕ್ರಮದಲ್ಲಿ 'ಪರಿಸರಕ್ಕಾಗಿ ನಾವು–ಪರಿಸರಕ್ಕಾಗಿ ನಾವು' ಸಂವಾದದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ವಿಶ್ವದ 170 ರಾಷ್ಟ್ರಗಳಲ್ಲಿ ವಿಶ್ವ ಮರುಭೂಮಿ ತಡೆಗಟ್ಟುವ ದಿನ ಆಚರಿಸಲಾಯಿತು. ಇದ'ರ' ಉದ್ದೇಶ ಹೊಸದಾಗಿ ಮರುಭೂಮಿ ಸೃಷ್ಟಿಯಾಗುವುದನ್ನು ತಡೆಗಟ್ಟುವುದೇ ಆಗಿದೆ. ಆದರೆ ಇನ್ನು ಅನೇಕ ಕಡೆ ಹೊಸದಾಗಿ ಮರುಭೂಮಿ ವಿಸ್ತರಣೆಯಾಗುತ್ತಿದೆ. ಭಾರತದ ಅತಿ ದೊಡ್ಡ ಮರುಭೂಮಿ ಕಚ್‌ನಲ್ಲಿದೆ. ಎರಡನೇ ಅತಿ ದೊಡ್ಡ ಮರುಭೂಮಿ ಕರ್ನಾಟಕದಲ್ಲಿ ಸೃಷ್ಟಿಯಾಗುತ್ತಿದೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ತೇವಾಂಶ ಕಡಿಮೆ, ಗಿಡ–ಮರಗಳ ಸಂಖ್ಯೆ ಕ್ಷೀಣಿಸುತ್ತಿದೆ. ನೆಲದ ಉಷ್ಣತೆ ಹೆಚ್ಚಾಗುತ್ತಿದೆ. ಕೋಲಾರ, ತುಮಕೂರಲ್ಲೂ ಪರಿಸ್ಥಿತಿ ಉಲ್ಬಣಿಸುತ್ತಿದೆ. ಮರುಭೂಮಿ ಎಂದರೆ ನೆಲದ ಮೇಲೆ ಮಾತ್ರವಲ್ಲ, ನೆಲದ ಕೆಳಗೂ ಮರುಭೂಮಿ ಮಾಡುತ್ತಿದ್ದೇವೆ ಎಂದು ವಿಷಾದಿಸಿದ್ದಾರೆ.

ರಾಜ್ಯದಲ್ಲಿ 49 ತಾಲೂಕುಗಳಲ್ಲಿ ನೀರಿನ ಅಭಾವ ಉದ್ಭವಿಸಿದೆ. ಭೂಮಿಯಿಂದ ಎಷ್ಟು ಕೆಳಗೆ ಹೋಗಿ ನೀರೆತ್ತುತ್ತಿವೋ ಅಷ್ಟರ ಮಟ್ಟಿಗೆ ಭೂಮಿ ನಮಗೆ ವಿಷ ಉಣಿಸುತ್ತದೆ. ವಾಸ್ತವವಾಗಿ ಮರದ ಬೇರು ಎಷ್ಟು ಆಳಕ್ಕೆ ಹೋಗಿರುತ್ತದೋ, ಅಷ್ಟು ಆಳದಲ್ಲಿ ಸಿಗುವ ನೀರು ಕುಡಿಯಲು ಯೋಗ್ಯವಿರುತ್ತದೆ. ಈ ಹಿಂದೆ ಬಾವಿ ತೆಗೆದಾಗ 40–60 ಅಡಿಗೆ ನೀರು ಸಿಗುತ್ತಿತ್ತು. ಈಗ 400–600 ಅಡಿವರೆಗೂ ಬೋರ್‌ವೆಲ್ ತೋಡುತ್ತಿದ್ದೇವೆ. ಅಷ್ಟು ಆಳದಲ್ಲಿ ಸಿಗುವ ನೀರಲ್ಲಿ ಲವಣಾಂಶ ಹೆಚ್ಚಾಗಿರುತ್ತದೆ. ಲವಣಾಂಶ ಕಡಿಮೆ ಮಾಡಲು ಯಾವುದೋ ಫಿಲ್ಟರ್ ಬಳಸುತ್ತೇವೆ. ಅದು ನೀರಿನಲ್ಲಿರುವ ಅಗತ್ಯ ಲವಣಾಂಶವನ್ನು ತೆಗೆದು ಹಾಕಿ ಡಿಸ್ಟಲಿರಿ ನೀರನ್ನು ಕೊಡುತ್ತದೆ. ನದಿ ನೀರಲ್ಲಿ ಲಭ್ಯವಿರುವ 230–250 ಪಿಪಿಎಂ ಲವಣಾಂಶ ಇರುತ್ತದೆ. ಇಷ್ಟು ಪ್ರಮಾಣದಲ್ಲಿ ಲವಣಾಂಶ ಇರುವ ನೀರು ಸೇವನೆ ಆರೋಗ್ಯಕ್ಕೆ ಪೂರಕವಾಗಿರುತ್ತದೆ. ಆದರೆ, ನಾವು 600–800 ಪಿಪಿಎಂ ನಷ್ಟು ಲವಣಾಂಶ ಇರುವ ನೀರನ್ನು ವಿಷದಂತೆ ಕುಡಿಯುತ್ತಿದ್ದೇವೆ. ಅಥವಾ ಯಾವುದೇ ಲವಣಾಂಶವಿಲ್ಲದ ನೀರನ್ನು ಕುಡಿಯುತ್ತಿದ್ದೇವೆ ಎಂದರು.

ಇತ್ತೀಚಿನ ದಿನಗಳಲ್ಲಿ ನಾವು ಅನೇಕ ಸಂದರ್ಭದಲ್ಲಿ ಹಾಗೂ ಬಹಳಷ್ಟು ವಿಷಯಗಳಲ್ಲಿ ಅಂಧರಾಗುತ್ತಿದ್ದೇವೆ. ಅರಣ್ಯ ಪ್ರದೇಶದಲ್ಲಿ ಎಲ್ಲಾ ಪಂಚೇಂದ್ರಿಯಗಳು ಜಾಗೃತವಾಗಬೇಕು. ಕಣ್ಣು ಸೂಕ್ಷ್ಮವಾಗಿರಬೇಕು. ಕಿವಿ ಸ್ಪಂದನಶೀಲವಾಗಿರಬೇಕು. ತುರಿಕೆ ಬಳ್ಳಿ ತಾಗದಂತೆ ಜಾಗೃತರಾಗಿರಬೇಕಾಗುತ್ತದೆ. ಆದರೆ, ನಾವು ನಗರ ಪ್ರದೇಶಕ್ಕೆ ಬಂದು ಇಂದ್ರೀಯಗಳನ್ನು ಬಂದ್ ಮಾಡಿಕೊಂಡಿದ್ದೇವೆ. ಮೊಮ್ಮಕ್ಕಳು ಮೊಬೈಲ್ ಹಿಡಿದುಕೊಂಡರೆ ಪಕ್ಕದಲ್ಲೇ ಅಮ್ಮ ಪೂರಿ ಮಾಡುತ್ತಿದ್ದರೆ, ಅದರ ವಾಸನೆ ಮಕ್ಕಳಿಗೆ ಗೊತ್ತಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಣ್ಣಲ್ಲಿ ಕಾಣುತ್ತಿಲ್ಲ. ಕಿವಿ ಕೇಳುವುದಿಲ್ಲ. ಮೂಗಿಗೆ ಪರಿಮಳ ಬರದಂತಹ ವಿಚಿತ್ರವಾದ ನಾಗರಿಕತೆ ಸೃಷ್ಟಿಸಿಕೊಂಡಿದ್ದೇವೆ ಎಂದರು.

2004ರಲ್ಲಿ ಇಂಡೋನೇಷ್ಯಾದಿಂದ ಬಂದ ದೊಡ್ಡ ಸುನಾಮಿಗೆ ಭಾರತದಲ್ಲಿ 15 ಸಾವಿರ ಜನ ತೇಲಿ ಹೋದರು. 1.5ಲಕ್ಷ ಜನ ನೀರು ಪಾಲಾದರು. ಆದರೆ, ಸುನಾಮಿಗೆ ಒಂದೇ ಒಂದು ತಿಮಿಂಗಿಲ, ಮೀನು, ಸಾಯಲಿಲ್ಲ. ಅವುಗಳಿಗೆ ಸ್ಪಂದಶೀಲತೆ ಇದೆ. ಆದ್ದರಿಂದ ಅವು ಆಳಕ್ಕೆ ಹೋಗಿ ರಕ್ಷಣೆ ಪಡೆದುಕೊಂಡವು. ನಿಸರ್ಗಕ್ಕೆ ಆದಷ್ಟು ಹತ್ತಿರ ಹೋಗಬೇಕು ಎಂದು ಸಲಹೆ ನೀಡಿದರು. ನಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವು ಅದ್ಭುತಗಳನ್ನು ಕಾಣಬಹುದಾಗಿದೆ. ಇರುವೆ, ಗೆದ್ದಲು ಹುಳದಲ್ಲೂ ಅದ್ಭುತ ಕಾಣಬಹುದು. ಗೆದ್ದಲು ಹುಳುಗಳು ಒಂದು ಚದರ ಮೀಟರ್ ಜಾಗದಲ್ಲಿ 180 ರಂಧ್ರಮಾಡುತ್ತವೆ. ಈ ರಂಧ್ರಗಳಿಂದಲೇ ಮಳೆ ನೀರು ಭೂಮಿ ಒಳಗೆ ಹೋಗಿ ನಮಗೆ ಕುಡಿಯಲು ನೀರು ಸಿಗುತ್ತದೆ ಎಂದರು.

ಸಿನಿಮಾದಲ್ಲಿ ಮಹಿಳೆಯರಿಲ್ಲದ ಕ್ಷಣ ಊಹಿಸಲು ಅಸಾಧ್ಯ



ಮೈಸೂರು, ಜು.2(ಎಸ್‌ಪಿಎನ್)– ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆ ಅನನ್ಯ. ಒಂದು ಸಿನಿಮಾಗೆ ಮಹಿಳೆಯಿಲ್ಲದ ಕ್ಷಣಗಳನ್ನು ಊಹಿಸಲೂ ಅಸಾಧ್ಯ ಎಂದು ಸಿನಿಮಾ ವಿಮರ್ಶಕಿ ಮೈಥಿಲಿ ರಾವ್ ಅಭಿಪ್ರಾಯಪಟ್ಟರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ 7ನೇ ಮೈಸೂರು ಸಾಹಿತ್ಯೋತ್ಸವ –2023ರ ವಿಚಾರಗೋಷ್ಠಿಯಲ್ಲಿ 'ಸಹಸ್ರಮಾನದ ಮಹಿಳೆಯರು buzz ಪದಕ್ಕಿಂತ ಹೆಚ್ಚೇ? ವಿಷಯ ಕುರಿತು ಮಾತನಾಡಿದರು.

ಇತ್ತೀಚಿನ ಜಾಹೀರಾತು ಕಂಪನಿಗಳು ಮಹಿಳೆಯರನ್ನು ಕೇಂದ್ರವಾಗಿಸಿಕೊಂಡು ಸಂಭಾಷಣೆ ಅಳವಡಿಸುತ್ತವೆ. ಆದರೆ, 1970 ದಶಕದಲ್ಲಿ ಜಾಹೀರಾತು ಕಂಪನಿಗಳು ಮಹಿಳೆಯರಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಿರಲಿಲ್ಲ. ಆದರೆ, ಇತ್ತೀಚೆಗೆ ನಟಿ ಪ್ರಿಯಾಂಕ ಛೋಪ್ರಾ ಹೆಚ್ಚಿನ ಜಾಹೀರಾತಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಅಂದರೆ, ಇವೆಲ್ಲವೂ ಮಹಿಳೆಯರ ಪಾತ್ರದ ಮಹತ್ವ ತೋರುತ್ತದೆ ಎಂದರು.

ಕಳೆದ ನೂರು ವರ್ಷಗಳಲ್ಲಿ ಭಾರತ ಸಿನಿಮಾ, ಕಲಾ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆ ಹಾದಿ ನೋಡಿದಾಗ, ಮಹಿಳೆ ಪುರುಷ ಪ್ರಧಾನ ವಲಯದಿಂದ ಹೊರಬಂದಿಲ್ಲ ಇಂದು ನಾಲ್ಕು ಗೋಡೆಗಳ ಮಧ್ಯೆ ಸ್ತ್ರೀ ಪಾತ್ರದ ಕುರಿತು ಅನೇಕ ಚರ್ಚೆಗಳು ನಡೆದಿವೆ. ಅದು ವಿವಿಧ ಸಿನಿಮಾಗಳ ಮೂಲಕ, ಸ್ತ್ರೀಯರು ವಿವಿಧ ಹಂತದಲ್ಲಿ ಅನುಭವಿಸುವ ಬವಣೆಗಳು, ಬದುಕಿನ ಶೈಲಿನ ಬಗ್ಗೆ ಸಿನಿಮಾ ಮೂಲಕ ಜನರಿಗೆ ತಿಳಿಸಿಕೊಟ್ಟಿವೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ನಟಿ ವಿದ್ಯಾಬಾಲನ್ ನಟಿಸಿರುವ ಸಿನಿಮಾಗಳು ಕುರಿತು ಹೆಚ್ಚು ಚರ್ಚೆಯಾಗುತ್ತಿದೆ. ಏಕೆಂದರೆ, ಅವರ ಅಭಿನಯದ ಸಿನಿಮಾಗಳು ಹೆಚ್ಚು ಯುವ ಜನರನ್ನು ಆಕರ್ಷಿಸಿವೆ. ಸಿನಿಮಾ ಜಗತ್ತಿನಲ್ಲಿ ಅನೇಕ ಪ್ರಸಿದ್ಧ ನಟಿಯರು ತಮ್ಮ ಕಾಲಘಟ್ಟ ಅವಧಿಯಲ್ಲಿ ಉತ್ತಮ ಅಭಿನಯ ತೋರಿದ್ದಾರೆ. ಹಿಂದಿನ ಸಿನಿಮಾ ನಟಿಯರು ಹಿರಿಯ ನಟ ಅಮಿತಾಬ್ ಬಚ್ಚನ್ ಸೇರಿದಂತೆ ಇತರೆ ಸ್ಟಾರ್ ನಟರ ಸರಿಸಮಾನಾಗಿ ಬೆಳೆದಿರುವ ಪ್ರಸಂಗವನ್ನು ವಿವರಿಸಿ, ಪ್ರಸ್ತುತ ನಟಿಯರು, ಹಿಂದಿನ ನಟಿಯರ ನಟನ ಶೈಲಿಯಾದ ಅಭಿ ನಯ, ಡ್ಯಾನ್ಸ್, ಕಥೆ, ಪ್ರಚಾರ ವೈಖರಿ ಕುರಿತು ಚರ್ಚಿಸಿದರು. ಈ ವೇಳೆ ಮಹಿಳಾ ಚಿಂತಕಿ ಪ್ರೀತಿ ಮರೋಲಿ ಸಂವಾದ ಮತ್ತು ಪ್ರಶ್ನೋತ್ತರ ನಡೆಸಿಕೊಟ್ಟರು.

ಗೋಲ್ಡನ್ ಗ್ಲೋಬ್ ರೇಸ್ ಸಾಹಸಮಯ ಅನುಭವವನ್ನು ಅನಾವರಣಗೊಳಿಸಿದ ನಿವೃತ್ತ ಕಮಾಂಡರ್ ಅಭಿಲಾಷ್ ಟೋಮಿ



ಮೈಸೂರು, ಜು.2(ಎಸ್‌ಪಿಎನ್)– 2018ರ ಗೋಲ್ಡನ್ ಗ್ಲೋಬ್ ರೇಸ್ ಪೂರ್ಣಗೊಳಿಸಿದ ಮೊದಲ ಭಾರತೀಯ ನೌಕಾಸೇನೆಯ ಕಮಾಂಡರ್(ನಿವೃತ್ತ) ಅಭಿಲಾಷ್ ಟೋಮಿ ಅವರ ಅನುಭವದ ವಿಶೇಷ ಉಪನ್ಯಾಸದ ಮೂಲಕ ಭಾನುವಾರ '7ನೇ ಮೈಸೂರು ಸಾಹಿತ್ಯೋತ್ಸವ 2023ಕ್ಕೆ ಅದ್ಧೂರಿ ತೆರೆಕಂಡಿತು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ 7ನೇ ಮೈಸೂರು ಸಾಹಿತ್ಯೋತ್ಸವ –2023ರ ಕೊನೆಯ ವಿಚಾರ ಗೋಷ್ಠಿಯಲ್ಲಿ 'ಏಳು ಸಮುದ್ರಗಳ ಬ್ರೇವೊ ಕಮಾಂಡರ್ ನೌಕಾಯಾನ್' ವಿಷಯ ಕುರಿತು ಮಾತನಾಡಿದರು.

ಸಮುದ್ರ ಪ್ರಯಾಣ ನಾವು–ನೀವು ಊಹಿಸಿದಷ್ಟು ಸುಲಭವಲ್ಲ. ಕಡಲಿನಲ್ಲಿ ನಾವು ಏನಾದರೂ ಸಾಧಿಸಬೇಕು ಎಂದು ಕೊಂಡಿದ್ದರೆ ಸಾಹಸಿಗರ ಜೀವನದ ಕ್ಷಣಿಕ ಸುಖಗಳನ್ನು ತ್ಯಾಗ ಮಾಡಬೇಕು ಎಂದು ನಿವೃತ್ತ ಕಮಾಂಡರ್ ಅಭಿಲಾಷ್ ಟೋಮಿ ಅಭಿಪ್ರಾಯಪಟ್ಟರು.

ಕಡಲ ಪ್ರಯಾಣಕ್ಕೆ ತಿಂಗಳುಗಟ್ಟಲೇ ಮಾನಸಿಕ ಸಿದ್ಧತೆ ಅತೀ ಮುಖ್ಯ. ಕಡಲ ನೌಕಾಯಾನಕ್ಕೆ ಹೋಗುವ ಮೊದಲು ಪ್ರಕೃತಿಯ ವೈಪರೀತ್ಯ ಹಾಗೂ ಕಡಲ ಏರಿಳಿತಗಳ ಬಗ್ಗೆ ಅರಿವು ಇರಬೇಕು. ನಂತರ ಕಡಲಿನಲ್ಲಿ ಪ್ರಯಾಣ ಮಾಡಬೇಕು. ಕುಟುಂಬದವರು, ಸ್ನೇಹಿತರು ಜನರ ಸಂಪರ್ಕವನ್ನು ಸಂಪೂರ್ಣ ಕಡಿತಗೊಂಡು ಸಾಧನೆಯಷ್ಟೇ ಮನಸ್ಸಿನಲ್ಲಿಟ್ಟುಕೊಂಡು ಸಮುದ್ರಯಾನವನ್ನು ಮುಂದುವರೆಸಬೇಕು ಎಂದು ಸಲಹೆ ನೀಡಿದರು.

ಜಗತ್ತಿನಲ್ಲಿ ಎವರೆಸ್ಟ್ ಶಿಖರವೇರಿದವರು ಸಾವಿರ ಮಂದಿ ಸಿಗಬಹುದು. ಬಾಹ್ಯಾಕಾಶಕ್ಕೆ ಹೋದವರು ನೂರಾರು ಮಂದಿ ಸಿಗಬಹುದು. ಆದರೆ, ಕಡಲಿನಲ್ಲಿ ಸಾಧನೆ ಮಾಡಿದವರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ನೌಕಾಯಾನದಲ್ಲಿ ತೊಡಗಿಸಿಕೊಂಡು ಸಾಧನೆ ಮಾಡುವ ಹಾದಿ ಕಠಿಣ ಪರಿಶ್ರಮ, ಏಕಾಗ್ರತೆ, ಕಡಲ ಏರಿಳಿತ ಸೇರಿದಂತೆ ಇತರೆ ಅರಿವಿನ ಮೂಲಕ ಸಾಧನೆ ಮಾಡಬೇಕು ಎಂದು ಯುವಕರಿಗೆ ಕರೆ ನೀಡಿದರು.

ಈ ಹಿಂದೆ ಯಾವುದೇ ಜಿಪಿಎಸ್, ಎಲೆಕ್ಟ್ರಾನಿಕ್ ವಾಚ್‌ಗಳಿಲ್ಲದ, ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇರಿದಂತೆ ಯಾವುದೇ ಆಧುನಿಕ ತಂತ್ರಜ್ಞಾನವನ್ನು ಬಳಸದೇ ತಡೆರಹಿತವಾಗಿ ಮತ್ತು ಭೂಮಿಯ ಸುತ್ತಲೂ ನೌಕಾಯಾನ ಮಾಡಲು ಪ್ರಯತ್ನಿಸುತ್ತಿದ್ದಾಗ ಸಾವಿನಿಂದ ಪಾರಾಗಿದ್ದ ಸಂದರ್ಭವನ್ನು ವಿವರಿಸಿದರಲ್ಲದೆ ಸಮುದ್ರದಲ್ಲಿ ಏಳುವ ಅಲೆಗಳ ಬಗ್ಗೆ ಊಹಿಸುವ ಮತ್ತು ಅದರಿಂದ ತಪ್ಪಿಸಿಕೊಳ್ಳುವ ಕಲೆ ಸಾಹಸಿಗರಿಗೆ ಕರಗತವಾಗಿರಬೇಕು ಎಂದು ತಿಳಿಸಿದರು.

2018ರ ನನ್ನ ಕಡಲ ಪ್ರಯಾಣವು ತುಂಬಾ ಕಷ್ಟಕರವಾಗಿತ್ತು. ಅನೇಕ ಸವಾಲುಗಳನ್ನು ಮೆಟ್ಟಿ ನಿಂತು ಗೋಲ್ಡನ್ ಗ್ಲೋಬ್ ರೇಸ್ ಪೂರ್ಣಗೊಳಿಸಿದ ಪ್ರಸಂಗವನ್ನು ವಿವರಿಸಿದರು. ಅಲ್ಲದೆ, ಮುಂದಿನ ದಿನಗಳಲ್ಲಿ ಸಮುದ್ರದಲ್ಲಿ ಸಾಹಸ ಮಾಡುವವರಿಗೆ ಸ್ವಲ್ಪ ಟಿಪ್ಸ್‌ಗಳನ್ನು ನೀಡಿದ ಅಭಿಲಾಷ್, ಕಡಲ ಪಯಣದಲ್ಲಿ ಸಾಹಸಿಗರ ಇಚ್ಛಾಶಕ್ತಿ ಮತ್ತು ಧೈರ್ಯವನ್ನು ಪರೀಕ್ಷಿಸುವ ಸವಾಲುಗಳು ಕುರಿತು ವಿವರಿಸಿದರು. 2018ರ ಪಯಣದಲ್ಲಿ ತನ್ನ ದೋಣಿ ಚುಡುಮಾರುತಕ್ಕೆ ಅಪ್ಪಳಿಸಿದ ನಂತರ ದಕ್ಷಿಣ ಹಿಂದೂ ಮಹಾಸಾಗರದ ಮಧ್ಯದಲ್ಲಿ ಬದುಕುಳಿದ ಸಾಹಸಮಯ ಘಟನೆಯನ್ನು ಸಭೆಗೆ ವಿವರಿಸಿದರು.

ನಾನು ಜಗತ್ತಿನಾದ್ಯಂತ ಏಕಾಂಗಿಯಾಗಿ ಸುತ್ತುವ ಮೊದಲು 2011ರಲ್ಲಿ ಕೇಪ್‌ಟೌನ್ ರಿಯೋ ರೇಸ್ ಎಂಟರ್‌ಪ್ರೈಸ್‌ಸ್ ವರ್ಲ್ಡ್ ಚಾಂಪಿಯನ್‌ಶಿಪ್, ಏಷ್ಯನ್ ಸೇಲಿಂಗ್ ಚಾಂಪಿಯನ್‌ಶಿಪ್ ಸೇರಿದಂತೆ ಹಲವಾರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಪ್ರಸಂಗ ಎಳೆಎಳೆಯಾಗಿ ಬಿಡಿಸಿದರಲ್ಲದೆ, 2006ರಲ್ಲಿ ವೈಸ್ ಆಡ್ಮಿರಲ್ ಎಂಪಿ ಅವತಿ ಅವರ ಪ್ರಸ್ತಾವನೆಯನ್ನು ಆಧರಿಸಿ, ನೌಕಾಪಡೆಯ ಐಎನ್‌ಎಸ್‌ವಿ ಮಹದೇಯ್ ಎಂಬ ಹಾಯಿದೋಣಿ ನಿರ್ಮಾಣದ ಪ್ರಸಂಗವನ್ನು ವಿವರಿಸಿದರಲ್ಲದೆ, ದಿಲೀಪ್ ದೋಂಡೆ ಸೇರಿದಂತೆ ಕಡಲ ಪಯಣ ಪೂರ್ಣಗಳಿಸಿದ ಸಾಹಸಿಗರ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು. ಭಾರತದ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ಗೇಟ್‌ವೇ ಆಫ್ ಇಂಡಿಯಾದಲ್ಲಿ ಸ್ವಾಗತ ದೊರೆತ ಪ್ರಸಂಗವನ್ನು ಎಳೆಎಳೆಯಾಗಿ ವಿವರಿಸಿದರು.

ವಿಶ್ವದಲ್ಲೇ ಅತೀ ಹೆಚ್ಚು ಹುಲಿ, ಆನೆ ಹೊಂದಿರುವ ರಾಷ್ಟ್ರ ಭಾರತ

ವನ್ಯಜೀವಿ ಛಾಯಾಗ್ರಾಹಕ ಅಮೋಘವರ್ಷ ಹೆಮ್ಮೆಯ ಮಾತು



ಮೈಸೂರು ಲಿಟರರಿ ಫೋರಮ್ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಉಪನ್ಯಾಸ ಕಾರ್ಯಕ್ರಮದ ಬಳಿಕ ವನ್ಯಜೀವಿ ಛಾಯಾಗ್ರಾಹಕ ಜೆ.ಎಸ್.ಅಮೋಘವರ್ಷ ವನ್ಯಜೀವಿ ಆಸಕ್ತರಿಗೆ ಹಸ್ತಾಕ್ಷರ ಹಾಕಿಕೊಡುತ್ತಿರುವುದು.

ಮೈಸೂರು, ಜು.2(ಎಂಟಿವೈ)– ಭಾರತ ದೇಶದಲ್ಲಿ 1.4 ಬಿಲಿಯನ್ ಜನಸಂಖ್ಯೆ ಇದ್ದರೂ ವಿಶ್ವದಲ್ಲೇ ಅತೀ ಹೆಚ್ಚು ಹುಲಿ ಹಾಗೂ ಆನೆ ಹೊಂದಿರುವ ರಾಷ್ಟ್ರ ಎನಿಸಿದೆ ಎಂದು ವನ್ಯಜೀವಿ ಛಾಯಾಗ್ರಾಹಕ ಜೆ.ಎಸ್.ಅಮೋಘ ವರ್ಷ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಲಿಟರರಿ ಫೋರಮ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಸದರನ್ ಸ್ಟಾರ್ ಹೋಟೆಲ್ ಆವರಣದಲ್ಲಿ ಆಯೋಜಿಸಿದ್ದ 'ಕ್ಯಾಮರಾದ ಮಾಂತ್ರಿಕ ಕಣ್ಣಲ್ಲಿ ಕರ್ನಾಟಕದ ಕಾಡುಗಳ ಸಿರಿಯ ಸೊಬಗು. ಅಪ್ಪುವಿನ ನೆನಪಿನ ಶ್ರೀಗಂಧದ ಘಮಘಮ' ವಿಷಯ ಕುರಿತು 'ಗಂಧದ ಗುಡಿ' ಟ್ರೇಲರ್ ಹಾಗೂ ಕಿರುಚಿತ್ರ ಪ್ರದರ್ಶನದೊಂದಿಗೆ ಮಾತನಾಡಿದ ಅವರು, ಭಾರತ ಹಾಗೂ ಕರ್ನಾಟಕದ ವನ್ಯ ಸಂಪತ್ತು ಸಂಪದ್ಭರಿತವಾಗಿದೆ. ಕೆಲವು ಸಂದರ್ಭದಲ್ಲಿ ಅಮೇರಿಕಾ ಹಾಗೂ ಯುಕೆಯಿಂದ ಬಂದವರು ವನ್ಯಜೀವಿ ಸಂರಕ್ಷಣೆ ಕುರಿತು ಮಾತನಾಡುತ್ತಾರೆ. ಆದರೆ, ಭಾರತದಲ್ಲಿ ವನ್ಯಸಂಪತ್ತಿನ ಸಂರಕ್ಷಣೆ ಉತ್ತಮವಾಗಿಯೇ ಇದೆ. ವಿಶ್ವದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿದ್ದರೂ, ವನ್ಯಜೀವಿಗಳ ಸಂಖ್ಯೆ ನಮ್ಮ ದೇಶದಲ್ಲಿ ಉತ್ತಮವಾಗಿದೆ. 1.4 ಬಿಲಿಯನ್ ಜನಸಂಖ್ಯೆ ಇರುವ ದೇಶದಲ್ಲಿ ವಿಶ್ವದಲ್ಲಿಯೇ ಅತಿ ಹೆಚ್ಚು ಹುಲಿ ಹಾಗೂ ಆನೆ ಹೊಂದಿರುವ ರಾಷ್ಟ್ರ ಎನಿಸಿರುವುದು ಹೆಮ್ಮೆ ಪಡುವ ಸಂಗತಿ ಎಂದರು.

ಕನ್ನಡ ಸಿನಿಮಾ ಇಂಡಸ್ಟ್ರಿನಲ್ಲಿ ಅನ್ವೇಷಣೆ (ಇನ್ನೋವೇಷನ್) ಮಾಡುವುದು ಹೆಚ್ಚಾಗಿದೆ. 50 ವರ್ಷದ ಹಿಂದೆಯೇ ವನ್ಯಜೀವಿ ಸಂರಕ್ಷಣೆ ಮಾಡುವ ಕಥಾಹಂದರವುಳ್ಳ 'ಗಂಧದಗುಡಿ' ಚಲನಚಿತ್ರವನ್ನು ನಿರ್ಮಿಸಿ ಅರಣ್ಯ ಸಂಪತ್ತಿನ ಮಹತ್ವವನ್ನು ತಿಳಿಸಲಾಯಿತು. 50 ವರ್ಷದ ಹಿಂದೆಯೇ ಇಂತಹ ಆಲೋಚನೆಯಲ್ಲಿ ಬೇರೆ ಯಾವ ಭಾಷೆಯಲ್ಲೂ ಚಲನಚಿತ್ರ ನಿರ್ಮಾಣವಾಗಿಲ್ಲ. ಈ ಹಿಂದೆ ಪೊಲೀಸ್ ಇಲಾಖೆ ಕುರಿತಂತೆ ಹತ್ತಾರು ಚಲನಚಿತ್ರಗಳು ತಯಾರಾಗುತ್ತಿದ್ದವು. ಆದರೆ, ಅರಣ್ಯ ಇಲಾಖೆ ಕುರಿತಂತೆ ಯಾವುದೇ ಚಲನಚಿತ್ರಗಳು ಬಂದಿರಲಿಲ್ಲ. ಗಂಧದಗುಡಿ ಚಲನಚಿತ್ರ ಬಿಡುಗಡೆ ಬಳಿಕ ಸಾಕಷ್ಟು ಮಂದಿ ಅರಣ್ಯ ಇಲಾಖೆ ಸೇರಿದರು. ನಾವು ಸೇವಿಸುವ ನೀರು, ಗಾಳಿ, ಅನ್ನ ಸಂರಕ್ಷಣೆ ಮಾಡುವ ಅರಣ್ಯ ಸಂಪತ್ತು ಉಳಿಸಿ, ಬೆಳೆಸಬೇಕಾದ ಜವಾಬ್ದಾರಿ ಎಲ್ಲರದ್ದಾಗಿದೆ ಎಂದು ತಿಳಿಸಿದರು.

ನಮ್ಮ ಸುತ್ತಮುತ್ತಲಿರುವ ಪರಿಸರ, ಅರಣ್ಯ, ವನ್ಯಸಂಪತ್ತು, ಜೀವಸಂಕುಲದ ಬಗ್ಗೆ ನೋಡಿ ಬರಲು ಈ ಹಿಂದೆ ನಾನು ಮತ್ತು ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್(ಅಪ್ಪು) ಸುತ್ತಾಡಿ ಬರೋದಕ್ಕೆ ಪ್ಲಾನ್ ಮಾಡಿ ಹೊರಟೆವು. ನಾನು ಹೋಗುತ್ತಿರುವಾಗಲೇ ಮಾಹಿತಿ ಹೆಚ್ಚು ಹೆಚ್ಚು ಸಿಗುತ್ತಿದ್ದಂತೆ ಅದನ್ನು 'ಸಿನಿಮಾ'ದಂತೆ ತೆರೆ ಮೇಲೆ ತರಲು ನಿರ್ಧರಿಸಲಾಯಿತು. ಅದಕ್ಕೆ ಯಾವ ಹೆಸರು ಇಡಬೇಕೆಂದು ಚಿಂತಿಸುತ್ತಿದ್ದಾಗ 'ಗಂಧದಗುಡಿ' ಹೆಸರನ್ನೇ ಇಡಲು ನಿರ್ಧರಿಸಲಾಯಿತು. ಅದು ಈಗಾಗಲೇ ಲಕ್ಷಾಂತರ ಮಂದಿಯ ಮನಸೂರೆಗೊಂಡಿದೆ ಎಂದರು.

ಕರ್ನಾಟಕದ ಅರಣ್ಯ ಸಂಪತ್ತು ಹೇರಳವಾಗಿದೆ. ಬಂಡೀಪುರ, ನಾಗರಹೊಳೆ ಸೇರಿದಂತೆ ಹಲವು ಸಂಪದ್ಭರಿತ ಕಾಡುಗಳು ನಮ್ಮಲಿವೆ. ಈ ಹಿನ್ನೆಲೆಯಲ್ಲಿ ನಮ್ಮಲ್ಲಿನ ಅರಣ್ಯ ಪ್ರದೇಶದಲ್ಲಿರುವ ವನ್ಯಜೀವಿ ಸಂಕುಲದ ಬಗ್ಗೆ ಮಾಹಿತಿ ಆಧರಿಸಿ 'ವೈಲ್ಡ್ ಕರ್ನಾಟಕ' ಸಾಕ್ಷ್ಯಚಿತ್ರ ನಿರ್ಮಿಸಲಾಯಿತು. ಈ ಚಿತ್ರವನ್ನು ಇಂಗ್ಲೆಂಡ್(ಯುಕೆ)ನಲ್ಲಿ ಪ್ರದರ್ಶಿಸಲಾಯಿತು. ಆ ಕಾರಣದಿಂದ ಯುಕೆನಲ್ಲಿನ ಜನರಿಗೆ ಕರ್ನಾಟಕದ ಪರಿಚಯವಾಗಿದೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಪುಸ್ತಕ ಓದುವ ಹವ್ಯಾಸ ಕ್ಷೀಣಿಸುತ್ತಿದೆ. ಈ ಹಿಂದೆ ನಾವೆಲ್ಲಾ ಪುಸ್ತುಕಗಳನ್ನು ಓದಿ ಜ್ಞಾನ ಸಂಪಾದಿಸುತ್ತಿದ್ದೆವು. ನಾವು ವಿದ್ಯಾರ್ಥಿಗಳಾಗಿದ್ದಾಗ ಕೇಬಲ್ ಇರಲಿಲ್ಲ. ನಮಗೆ ಗ್ರಂಥಾಲಯಗಳೇ ಜ್ಞಾನ ಭಂಡಾರವಾಗಿದ್ದವು. ಆದರೆ ಈಗ ಮೊಬೈಲ್ ಸೇರಿದಂತೆ ಸಾಮಾಜಿಕ ಜಾಲತಾಣಕ್ಕೆ ಮಾರುಹೋಗಿ 'ಕಲ್ಪನೆಯ ಅದ್ಭುತ ಲೋಕ'(ವಂಡರ್ ಆಫ್ ಇಮ್ಯಾಜಿನೇಷನ್)ವನ್ನು ಕಳೆದುಕೊಳ್ಳುತ್ತಿದ್ದೇವೆ ಎನ್ನಿಸುತ್ತದೆ. ಪ್ರತಿದಿನ ಟಿವಿ, ಚಲನಚಿತ್ರಗಳಲ್ಲಿ ಅಪರಾಧ, ಹಿಂಸೆ, ಅಕ್ರಮ ಸಂಬಂಧಗಳ ಬಗ್ಗೆ ಹೆಚ್ಚಾಗಿ ಬಿಂಬಿತವಾದ ಕಥೆಗಳೇ ಪ್ರಸಾರವಾಗುತ್ತದೆ. ಇದರಿಂದ ನಮ್ಮ ಮಾನಸಿಕ ಸ್ಥಿತಿ ಹೇಗಿರುತ್ತದೆ ಎಂದು ತಿಳಿದುಕೊಳ್ಳಬೇಕು. ಮಾನಸಿಕ ಹಾಗೂ ದೈಹಿಕ ಆರೋಗ್ಯ ಉತ್ತಮವಾಗಿದ್ದರೆ ನಾವು ಎಲ್ಲವನ್ನೂ ಗೌರವಿಸುತ್ತೇವೆ. ಆಗ ಯಾರೂ ಕೂಡ ನಮಗೆ ಪ್ಲಾಸ್ಟಿಕ್ ಎಸೆಯಬೇಡಿ' ಎಂದು ಹೇಳುವುದಿಲ್ಲ ಎಂದು ತಿಳಿಸಿದರು.

ಇದೇ ವೇಳೆ ವನ್ಯಜೀವಿ ಛಾಯಾಗ್ರಹಣ, ಗಂಧದಗುಡಿ ಚಿತ್ರದಲ್ಲಿ ಬಳಸಿರುವ ವಿಡಿಯೋ ಸೇರಿದಂತೆ ಇನ್ನಿತರ ವಿಷಯ ಕುರಿತು ಸಭಿಕರು ಪ್ರಶ್ನೆ ಕೇಳಿ ಉತ್ತರ ಪಡೆದುಕೊಂಡರು. ಕಾರ್ಯಕ್ರಮದ ಬಳಿಕ ವಿವಿಧ ಪುಸ್ತಕ ಹಿಡಿದುಕೊಂಡು ಬಂದ ಹಲವು ಮಂದಿ ಹಸ್ತಾಕ್ಷರ ಹಾಕಿಸಿಕೊಳ್ಳಲು ಮುಗಿಬಿದ್ದರು.

ಬಂಡಹಳ್ಳಿ ಡೈರಿ ಜೆಡಿಎಸ್ ತೆಕ್ಕೆಗೆ



ಚುಂಚನಕಟ್ಟೆ, ಜು.2– ಸಾಲಿಗ್ರಾಮ ತಾಲೂಕಿನ ಬಂಡಹಳ್ಳಿ ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದ ಆಡಳಿತ ಮಂಡಳಿಯ 11 ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 11 ಜೆಡಿಎಸ್ ಬೆಂಬಲಿತರು ಭರ್ಜರಿ ಗೆಲುವು ಸಾಧಿಸಿದ್ದಾರೆ

ಚುನಾವಣೆಯಲ್ಲಿ ಸಂಘದ ಸುಮಾರು 120 ಮತದಾರರಲ್ಲಿ 109 ಮಂದಿ ಮತದಾರರು ಹಕ್ಕು ಚಲಾಯಿಸಿದರು. ನಂತರ ಚುನಾವಣಾಧಿಕಾರಿಯಾಗಿದ್ದ ಕೆ.ಆರ್.ನಗರ ಸಹಕಾರ ಇಲಾಖೆಯ ಅಧಿಕಾರಿ ರವಿ ಅವರು ಫಲಿತಾಂಶವನ್ನು ಪ್ರಕಟಿಸಿದರು

ಜೆಡಿಎಸ್ ಬೆಂಬಲಿತರಾಗಿ ಸ್ಪರ್ಧಿಸಿದ್ದ ಬಿ.ಎಲ್.ಲೋಕೇಶ್(65), ಗಿರಿಗೌಡ(63), ಸತೀಶ(63), ವಸಂತಕುಮಾರ(53), ನಾಗರಾಜು(51), ರಾಮೇಗೌಡ(51), ಮಲ್ಲಯ್ಯ (49), ಅನುಸೂಯ(58), ಜ್ಯೋತಿ(51) ಮತಗಳನ್ನು ಪಡೆದು ಆಯ್ಕೆಯಾದರು.


ಇನ್ನು ಎರಡು ಸ್ಥಾನಗಳಿಗೆ ಸ್ಪರ್ಧಿಸಿದ್ದ ಕಾಂತರಾಜು, ಶಿವಣ್ಣೇಗೌಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇನ್ನು ಕಾಂಗ್ರೇಸ್ ಬೆಂಬಲಿತರಾಗಿ ಸ್ಪರ್ಧಿಸಿದ್ದ ಗಿರೀಶ(42), ಬಿ.ಟಿ.ಗೋಪಾಲ(39), ನಂದೀಶ(42), ಪ್ರಕಾಶ(41), ಬಿ.ಟಿ.ಬಸವರಾಜ(46), ಬಿ.ಆರ್.ಸತೀಶ(36), ಹಲಗೇಗೌಡ(46), ಸತ್ಯವತಿ(38) ಮತಗಳನ್ನು ಪಡೆದು ಪರಾಭವಗೊಂಡರು.

ಫಲಿತಾಂಶ ಪ್ರಕಟಿಸುತ್ತಿದ್ದಂತೆಯೇ ಎಪಿಎಂಸಿ ಮಾಜಿ ನಿರ್ದೇಶಕ ಬಂಡಹಳ್ಳಿ ಕುಚೇಲ್, ಗ್ರಾಪಂ ಸದಸ್ಯ ಅಶ್ವತ್‌ಕುಮಾರ್, ಶೀಲಾ, ಮುಖಂಡರಾದ ಬಿ.ಇ.ರಮೇಶ್, ಬಿ.ಎಚ್.ರುದ್ರೇಗೌಡ ನೂತನ ನಿರ್ದೇಶಕರನ್ನು ಅಭಿನಂದಿಸಿ ವಿಜಯೋತ್ಸವ ಆಚರಿಸಿದರು.

ಗ್ಯಾರಂಟಿ ಮಾತ್ರವಲ್ಲ, ಬಿಜೆಪಿ ವೈಫಲ್ಯದಿಂದ ಕಾಂಗ್ರೆಸ್‌ಗೆ ಗೆಲುವು

ಸೋಸಲೆ ಕೃತಜ್ಞತಾ ಸಭೆಯಲ್ಲಿ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಪ್ರತಿಪಾದನೆ

ತಿ.ನರಸೀಪುರ, ಜು.2–ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಭೂತಪೂರ್ವ ಜಯಗಳಿಸಲು ಪಕ್ಷ ನೀಡಿದ ಗ್ಯಾರಂಟಿಗಳು ಮಾತ್ರವೇ ಕಾರಣವಲ್ಲ, ಬದಲಿಗೆ ಬಿಜೆಪಿ ಸರ್ಕಾರ ತನ್ನ ಆಡಳಿತದ ಎಲ್ಲ ರಂಗಗಳಲ್ಲೂ ವೈಫಲ್ಯ ಕಂಡಿದ್ದರಿಂದ ಬೇಸತ್ತ ಜನತೆ ಜನಪರವಾದ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಕೊಟ್ಟಿದ್ದಾರೆ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.



ತಾಲೂಕಿನ ಸೋಸಲೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಸೋಸಲೆ ಹೋಬಳಿ ಮಟ್ಟದ ಕೃತಜ್ಞತಾ ಸಭೆಯ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ನೀಡಿದ ಗ್ಯಾರಂಟಿಗಳಿಂದಾಗಿ ನಮಗೆ ಸೋಲಾಯಿತು ಎಂದು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಸೋಲಿನ ವ್ಯಾಖ್ಯಾನ ಮಾಡುತ್ತಿವೆ. ಆದರೆ ಅವರ ಸೋಲಿಗೆ ನಮ್ಮ ಪಕ್ಷದ ಗೆಲುವಿಗೆ ಕೇವಲ ನಾವು ನೀಡಿದ ಗ್ಯಾರಂಟಿಗಳು ಮಾತ್ರವೇ ಅಲ್ಲದೇ, ಬಿಜೆಪಿ ಪಕ್ಷ ತನ್ನ ಆಡಳಿತಾವಧಿಯಲ್ಲಿ ಎಲ್ಲಾ ರಂಗಗಳಲ್ಲೂ ವೈಫಲ್ಯ ಕಂಡು, ವ್ಯಾಪಕ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತ ಮಾಡಿದ್ದರಿಂದ ಜನರು ಜನಪರ ಆಡಳಿತ ನೀಡಲು ಕಾಂಗ್ರೆಸ್ ಪಕ್ಷದಿಂದ ಮಾತ್ರವೇ ಸಾಧ್ಯ ಎಂದು ನಮ್ಮ ಪಕ್ಷಕ್ಕೆ ಅಭೂತಪೂರ್ವ ಬೆಂಬಲ ನೀಡಿ ನಮಗೆ ಅಧಿಕಾರ ನೀಡಿದರು ಎಂದು ತಮ್ಮ ಪಕ್ಷದ ಗೆಲುವಿನ ಬಗ್ಗೆ ಸಮರ್ಥನೆ ಮಾಡಿಕೊಂಡರು.

ಕೇಂದ್ರ ಸರ್ಕಾರಕ್ಕೆ ಬಡವರ ಕಾಳಜಿ ಇಲ್ಲ: ಮೊದಲು ಕೇಂದ್ರ ಸರ್ಕಾರ ಅನ್ನ ಭಾಗ್ಯಕ್ಕೆ ಅಕ್ಕಿ ಸರಬರಾಜು ಮಾಡುವುದಾಗಿ ಹೇಳಿತ್ತು. ಆದರೆ ಚುನಾವಣೆಯ ನಂತರ ಪಕ್ಷದ ಗ್ಯಾರಂಟಿಗಳು ಜನಪ್ರಿಯವಾಗುತ್ತಿದ್ದಂತೆ ಅಕ್ಕಿ ಕೊಡಲು ಎಫ್‌ಸಿಐ ನಿರಾಕರಿಸಿತು. ಕೇಂದ್ರ ಸರ್ಕಾರದವರಿಗೆ ಬಡವರಿಗೆ ಅನುಕೂಲವಾಗಬಾರದೆಂಬ ಉದ್ದೇಶ ಇದ್ದು ಅದಕ್ಕಾಗಿಯೇ ಅಡುಗೆ ಅನಿಲ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಹೆಚ್ಚು ಮಾಡಿತು ಎಂದು ಆರೋಪಿಸಿದರು.

ವಿದ್ಯಾರ್ಥಿಗಳ ಖಾತೆಗೆ 2 ಲಕ್ಷ: ವಿದೇಶದಲ್ಲಿ ವ್ಯಾಸಂಗ ಮಾಡಲು ಬಯಸುವ ಎಸ್‌ಸಿ, ಎಸ್‌ಟಿ ಮಕ್ಕಳಿಗೆ ಅನುಕೂಲ ಕಲ್ಪಿಸಿಕೊಡುವ ದೃಷ್ಟಿಯಿಂದ ವಿದ್ಯಾಭ್ಯಾಸಕ್ಕೆ ತೆರಳುವ ಒಂದು ವಾರ ಮುಂಚಿತವಾಗಿಯೇ ಅವರ ಖಾತೆಗೆ 2 ಲಕ್ಷ ರೂ.ಗಳನ್ನು ಹಾಕುವ ಯೋಜನೆಗೆ ಮೊನ್ನೆಯಷ್ಟೇ ಸಹಿ ಮಾಡಿದ್ದೇನೆ ಇದರಿಂದ ಹಳ್ಳಿಗಾಡಿನ ಪಜಾತಿ ಮತ್ತು ವರ್ಗದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಲು ಸಹಕಾರಿಯಾಗಲಿದೆ ಎಂದರು.

ಅಭಿವೃದ್ಧಿಗೆ ಹೆಚ್ಚಿನ ಒತ್ತು!: ಕ್ಷೇತ್ರಕ್ಕೆ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಪಟ್ಟಿ ಮಾಡಿ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ಆದ್ಯತೆ ಮೇರೆಗೆ ಕೆಲಸಗಳು ಆಗಲಿವೆ ಎಂದ ಮಹದೇವಪ್ಪ, ಜನತೆ ನನಗೆ ಅಧಿಕಾರ ಕೊಟ್ಟಿರುವುದೇ ಅಭಿವೃದ್ಧಿ ಮಾಡಲೆಂದು, ಹಾಗಾಗಿ ಜನ ಕೊಟ್ಟ ಅಧಿಕಾರವನ್ನು ಸದುಪಯೋಗಪಡಿಸಿಕೊಂಡು ಕ್ಷೇತ್ರ, ಜಿಲ್ಲೆ ಹಾಗೂ ರಾಜ್ಯದ ಸಮಗ್ರ ಅಭಿವೃದ್ಧಿ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಸೋಸಲೆ ಗ್ರಾಮಕ್ಕೆ ಸಚಿವರು ಆಗಮಿಸುತ್ತಿದ್ದಂತೆ ತೆರೆದ ವಾಹನದಲ್ಲಿ ಗ್ರಾಮದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಿ ಕಾರ್ಯಕ್ರಮದ ಸ್ಥಳಕ್ಕೆ ಕರೆದೊಯ್ಯಲಾಯಿತು. ಸೋಸಲೆ ವೃತ್ತದಲ್ಲಿ ಮೂಸಂಬಿ ಹಾಗು ಸೇಬಿನಿಂದ ತಯಾರಿಸಲಾದ ಬೃಹತ್ ಹಾರವನ್ನು ಕ್ರೇನ್ ಮೂಲಕ ಹಾಕಲಾಯಿತು.


ಕಾರ್ಯಕ್ರಮದಲ್ಲಿ ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್, ಪಿ ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಡಾ.ಕೆ.ಮಹದೇವ್, ತಾಪಂ ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಮಲ್ಲಿ ಕಾರ್ಜುನ ಸ್ವಾಮಿ, ಗುತ್ತಿಗೆದಾರ ಕಾರ್ಗಳ್ಳಿ ಶಿವಸ್ವಾಮಿ, ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ. ಪುರಸಭಾ ಮಾಜಿ ಅಧ್ಯಕ್ಷರಾದ ಪದ್ಮನಾಬ್, ಮುನಾವರ್ ಪಾಶ, ಮುತ್ತುವಾಡಿ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಶಿವರಾಂ, ಉಕ್ಕಲಗೆರೆ ಗ್ರಾಪಂ ಸದಸ್ಯ ರಾಜು, ಡೈರಿ ಕಾರ್ಯದರ್ಶಿ ನಿಂಗಯ್ಯ, ಮೈಸೂರು ಜಿಲ್ಲಾ ವಕೀಲ ಸಂಘದ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ (ರವಿ), ಗ್ರಾಪಂ ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ್, ಪುರಸಭಾ ಮಾಜಿ ಅಧ್ಯಕ್ಷ ಮಹಾದೇವಸ್ವಾಮಿ, ಮಾಜಿ ಗ್ರಾಪಂ ಅಧ್ಯಕ್ಷ ಮಹೇಶ್, ಪ್ರೊಫೆಸರ್ ಕೆ.ಬಿ. ಜ್ಞಾನ ಪ್ರಕಾಶ್, ಅನಿಲ್ ಬೋಸ್, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಪ್ರಥಮ ದರ್ಜೆ ಗುತ್ತಿಗೆದಾರ ಎ.ಎನ್. ಸ್ವಾಮಿ. ಕೆಎಂ ಮದುಕುಮಾರ್, ಎಪಿಎಂಸಿ ಮಾಜಿ ಸದಸ್ಯ ಬಸವಣ್ಣ, ಲಕ್ಷ್ಮಿ ನಾರಾಯಣ್, ನಂಜನಗೂಡು ಶ್ರೀಕಂಠೇಶ್ವರ ದೇವಾಲಯದ ನಿಕಟಪೂರ್ವಕ ಅಧ್ಯಕ್ಷ ಇಂದನ್ ಬಾಬು, ಮಹೇಶ್ ಪಿಳ್ಳೆ. ಗದ್ದೆ ಮೊಳೆ ಸಿದ್ದರಾಜು. ಸೋಮಣ್ಣ ಮತ್ತಿತರರಿದ್ದರು.

ಹೆಚ್.ಡಿ.ಕೋಟೆ ರೋಟರಿ ಕ್ಲಬ್ ಸಾಧನೆಗೆ ಪ್ಲಾಟಿನಮ್ ಪ್ರಶಸ್ತಿ

ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಬಣ್ಣನೆ

ಹೆಚ್.ಡಿ.ಕೋಟೆ, ಜು.2– ಮೈಸೂರು ಜಿಲ್ಲೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕೀರ್ತಿ ಹೆಚ್.ಡಿ. ಕೋಟೆ ರೋಟರಿ ಕ್ಲಬ್‌ಗೆ ಬಂದಿದೆ ಎಂದು ಡಿಸ್ಟ್ರಿಕ್ಟ್ ಗೌರ್ನರ್ ವಿಕ್ರಮ್‌ದತ್ ತಿಳಿಸಿದರು.

ತಾಲೂಕಿನ ಸೊಗಳ್ಳಿ ಗ್ರಾಮದ ಬಳಿ ಇರುವ ಕಬಿನಿ ಲೇಖ್ ವೀವ್ ಖಾಸಗಿ ರೆಸಾರ್ಟ್‌ನಲ್ಲಿ ಹೆಚ್.ಡಿ.ಕೋಟೆ ರೋಟರಿ ಕ್ಲಬ್ ನೂತನ ತಂಡದ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ರೋಟರಿ ಕ್ಲಬ್ ವತಿಯಿಂದ ಕೋಟೆ ಸರ್ಕಾರಿ ಆಸ್ಪತ್ರೆಗೆ ಬಡಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಡಯಾಲಿಸಿಸ್ ಯಂತ್ರ ಹಾಗೂ ತಾಲೂಕಿನ ವಿವಿಧ ಗ್ರಾಮಗಳ ಶಾಲೆಗಳಲ್ಲಿ, ಶಾಲಾ ಮಕ್ಕಳಿಗೆ ಅನುಕೂಲವಾಗುವ ಹಲವು ಮೂಲ ಸೌಕರ್ಯಗಳು ಸೇರಿದಂತೆ ಇನ್ನೂ ಹಲವಾರು ಸೇವಾ ಕಾರ್ಯಗಳನ್ನು ಮಾಡಿಕೊಂಡು ಬಂದಿರುವುದರಿಂದ ಹೆಚ್.ಡಿ. ಕೋಟೆ ರೋಟರಿ ಕ್ಲಬ್ಬಿಗೆ ಪ್ಲಾಟಿನಮ್ ಪ್ಲಸ್ ಪ್ರಶಸ್ತಿ ದೊರಕಿದೆ. ಅದಕ್ಕೆ ಮುಖ್ಯ ಕಾರಣ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಎಲ್ಲಾ ಸದಸ್ಯರುಗಳ ಶ್ರಮ.



ಇದೆ ವೇಳೆ ರೋಟರಿ ಕ್ಲಬ್ ಅಧ್ಯಕ್ಷ ಗಣೇಶ್ ಲಾಡ್ ಅವರಿಂದ ನೂತನ ಅಧ್ಯಕ್ಷ ಗಂಗಾಧರ್ ಅವರಿಗೆ ಅಧ್ಯಕ್ಷ ಸ್ಥಾನವನ್ನು ಹಸ್ತಾಂತರಿಸಲಾಯಿತು.

ಅಧಿಕಾರ ಸ್ವೀಕರಿಸಿದ ನೂತನ ಅಧ್ಯಕ್ಷ ಗಂಗಾಧರ್: ಕಾರ್ಯಕ್ರಮ ಕುರಿತು ಮಾತನಾಡಿದ ನೂತನ ಅಧ್ಯಕ್ಷ ಗಂಗಾಧರ್ ಹಿಂದೆ ಇದ್ದಂತ ಅಧ್ಯಕ್ಷ ಗಣೇಶ್ ಲಾಡ್ ಹಾಗೂ ಕಾರ್ಯದರ್ಶಿ ನಿರಂಜನ್ ಅವರುಗಳು ಕೋಟೆ ರೋಟರಿ ಕ್ಲಬ್‌ನಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ್ದು, ರೋಟರಿ ಕ್ಲಬ್ಬಿಗೆ ಪ್ಲಾಟಿನಮ್ ಪ್ಲಸ್ ಪ್ರಶಸ್ತಿ ಬರಲು ಹೆಚ್ಚಿನ ಶ್ರಮ ವಹಿಸಿದ್ದಾರೆ. ಅವರುಗಳ ಮಾರ್ಗದರ್ಶನದ ಮೇರೆಗೆ ಮುಂದಿನ ದಿನಗಳಲ್ಲಿ ನಾನು ಕೂಡ, ಕ್ಲಬ್ ವತಿಯಿಂದ ಉತ್ತಮ ಸೇವೆಯನ್ನು ಸಲ್ಲಿಸುವುದರ ಮೂಲಕ ಕ್ಲಬ್‌ಗೆ ಇನ್ನು ಹೆಚ್ಚಿನ ಮಟ್ಟದ ಹೆಸರು ತರುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ರೋಟರಿ ಕ್ಲಬ್‌ನ ನೂತನ ಅಧ್ಯಕ್ಷ ಗಂಗಾಧರ್ ಅವರ ಅಧ್ಯಕ್ಷತೆಯಲ್ಲಿ ಕಬಿನಿ ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ರೋಟರಿ ಕ್ಲಬ್ಬಿಗೆ ಹಲವಾರು ಮಂದಿ ನೂತನ ಸದಸ್ಯರಾಗಿ ಸೇರ್ಪಡೆಗೊಂಡರು. ಕಾರ್ಯಕ್ರಮದಲ್ಲಿ ಸಹಾಯಕ ಗವರ್ನರ್ ಎಂ.ಕೆ ನಂಜಯ್ಯ, ರೋ. ಕಾರ್ಯದರ್ಶಿ ಸ್ವಾಮಿ, ಮಾಜಿ ಅಧ್ಯಕ್ಷ ಗಣೇಶ್ ಲಾಡ್, ನಿರೆಂಜನ್, ವಲಯ ಸೇನಾನಿ ಜಗದೀಶ್, ಕವಿತಾ ಗಣೇಶ್ ಲಾಡ್, ಕೃಷ್ಣ ನಾರಾಯಣ್ ಲಾಲ್, ಬಿ.ಎನ್.ಶಿವಣ್ಣ, ಮಹೇಶ್, ಡಾ. ಮುರುಗೇಶ್, ಡಾ.ಜಯಂತ್, ಡಾ.ಮಹೇಶ್, ಶ್ರೀಕಂಠಯ್ಯ, ಸತೀಶ್, ಚಿನ್ನ ಬೆಳ್ಳಿ ರವಿ, ಬಸವ ರಾಜ್ ವಿಷ್ಣು, ಶಿವಕುಮಾರ್, ಧರ್ಮೇಶ್, ಮಹೇಂದ್ರನ್, ಸಿದ್ದನಾಯಕ, ನಾಗ ರೇಖಾ, ವಿದ್ಯಾಶ್ರೀ ಗಗನಶ್ರೀ, ಕೃಷ್ಣಕುಮಾರ್, ಶೈಲಾ ಸುಧಾಮಣಿ, ಮುದ್ದುಕೃಷ್ಣ, ಪುಟ್ಟರಾಜು, ಸತೀಶ್ ಸುರಭಿ ಪ್ರಸಾದ್, ಟಿ.ಎಸ್.ಬಸವರಾಜ್, ಎನ್.ಎಸ್.ಕೃಷ್ಣ, ಮಹೇಂದ್ರ ಹಾಜರಿದ್ದರು.

> ರೋಟರಿ ಕ್ಲಬ್‌ಗೆ ಪ್ಲಾಟಿನಮ್ ಪ್ರಶಸ್ತಿ ದೊರಕಿರುವುದು, ನನಗೆ ಜವಾಬ್ದಾರಿ ಹೆಚ್ಚಾಗಿದೆ. ಏಕೆಂದರೆ, ಹಿಂದೆ ಇದ್ದ ಅಧ್ಯಕ್ಷ ಗಣೇಶ್ ಲಾಡ್ ಹಾಗೂ ಕಾರ್ಯದರ್ಶಿ ನಿರಂಜನ್ ಇತರ ಎಲ್ಲಾ ಸದಸ್ಯರುಗಳು ಉತ್ತಮ ಸೇವೆ ಸಲ್ಲಿಸಿದ್ದಾರೆ. ಅದಕ್ಕೆ ಪ್ಲಾಟಿನಮ್ ಪ್ಲಸ್ ಪ್ರಶಸ್ತಿ ದೊರಕಿದೆ. ಮುಂದಿನ ದಿನಗಳಲ್ಲಿ ನಾನು ಉನ್ನತ ಮಟ್ಟದ ಪ್ರಶಸ್ತಿ ರೋಟರಿ ಕ್ಲಬ್‌ಗೆ ದೊರಕುವ ನಿಟ್ಟಿನಲ್ಲಿ ಉತ್ತಮ ಸೇವೆ ಸಲ್ಲಿಸುತ್ತೇನೆ.
>
> – ಗಂಗಾಧರ್, ಕ್ಲಬ್ ಅಧ್ಯಕ್ಷ.

ನರಸೀಪುರ ಬಳಿ ಬಸ್ ಡಿಕ್ಕಿ: ವ್ಯಕ್ತಿ ಸಾವು

ತಿ.ನರಸೀಪುರ, ಜು.2– ಸಾರಿಗೆ ಬಸ್ಸೊಂದು ಡಿಕ್ಕಿ ಹೊಡೆದ ಪರಿಣಾಮ ರಸ್ತೆ ಬದಿ ನಡೆದು ಹೋಗುತ್ತಿದ್ದ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಇಂಡವಾಳು ಗ್ರಾಮದ ಬಳಿ ಶನಿವಾರ ರಾತ್ರಿ ಸಂಭವಿಸಿದೆ.

ಇಂಡುವಾಳು ಗ್ರಾಮದ ಲೇಟ್ ಮಲ್ಲನಾಯಕ ಅವರ ಪುತ್ರ ನಾಗರಾಜು(67) ಅಪಘಾತದಲ್ಲಿ ಮೃತಪಟ್ಟವರು. ಇವರು ಗ್ರಾಮದ ಮುಖ್ಯರಸ್ತೆಯ ಎಡಭಾಗದಲ್ಲಿ ನಡೆದು ಹೋಗುತ್ತಿದ್ದ ವೇಳೆ ಮೈಸೂರು ಕಡೆಯಿಂದ ಟಿನರಸೀಪುರ ಕಡೆಗೆ ಬರುತ್ತಿದ್ದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ. ಗಾಯಗೊಂಡ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆತರಲಾಗಿ ಮೃತಪಟ್ಟಿರುವುದು ಗೊತ್ತಾಗಿದೆ. ಘಟನೆಯ ಸಂಬಂಧ ಮೃತನ ಸಹೋದರ ಮಲ್ಲಿಕಾರ್ಜುನ ಅವರು ನೀಡಿದ ದೂರಿನ ಮೇರೆಗೆ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿ ತನಿಖೆ ಮುಂದುವರೆದಿದೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಸತ್ಯಪ್ರೇಮ್ ಕಿ ಕಥಾ (ಹಿಂ):** ಬೆ10.15ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, **ಡೇರ್‌ಡೆವಿಲ್ ಮುಸ್ತಫಾ (ಕ):** ಮ.1.05ಕ್ಕೆ.
ಸ್ಕ್ರೀನ್ 2	**ಸ್ಪೈಡರ್ ಮ್ಯಾನ್ ಅಕ್ರಾಸ್ ದಿ ಸ್ಪೈಡರ್ ವರ್ಸ್ (ಇಂ):** ಬೆ10.25ಕ್ಕೆ, **ಸಲ್ಮಾನ್ (3ಡಿ)(ತ):** ಮ.1.15ಕ್ಕೆ, **ಸ್ಪೈ (ತೆ):** ಸಂ.4.30ಕ್ಕೆ, ರಾ.7.15ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	**ಮಾಮನ್ನನ್ (ತ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, **ಸರ್ಕಸ್ (ತು):** ರಾ.7ಕ್ಕೆ.
ಸ್ಕ್ರೀನ್ 4	**ಬೆಂಗಳೂರು ಬಾಯ್ಸ್ (ಕ):** ಬೆ.10.15ಕ್ಕೆ, **ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ):** ಮ.1.05ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಸತ್ಯಪ್ರೇಮ್ ಕಿ ಕಥಾ (ಹಿಂ):** ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ):** ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **ಸ್ಪೈ (ತೆ):** ಮ.1.10ಕ್ಕೆ, **ಸಾಮಜವರಗಮನ (ತೆ):** ಸಂ.4.10ಕ್ಕೆ.
ಸ್ಕ್ರೀನ್ 3	**ಸ್ಪೈ (ತೆ):** ಬೆ.9.50ಕ್ಕೆ, ರಾ.10.20ಕ್ಕೆ, **ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ):** ಮ.12.45ಕ್ಕೆ, **ಬೆಂಗಳೂರು ಬಾಯ್ಸ್ (ಕ):** ಸಂ.4ಕ್ಕೆ.
ಸ್ಕ್ರೀನ್ 4	**ಮಾಮನ್ನನ್ (ತ):** ಬೆ10.50ಕ್ಕೆ, ಮ.2.10ಕ್ಕೆ, **ಸರ್ಕಸ್ (ತು):** ಸಂ.6.10ಕ್ಕೆ, **ಸಾಮಜವರಗಮನ (ತೆ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ):** ಸಂ.4.50ಕ್ಕೆ, **ಚೌಕಾಬಾರ (ಕ):** ರಾ.7.50ಕ್ಕೆ, **ಕ್ರಿಡ್ 3 (ಇಂ):** ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ):** ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ):** ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ):** ಮ.2.45ಕ್ಕೆ, ರಾ.7.45ಕ್ಕೆ, **65 (ಇಂ):** ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೂಡಬಿದರೆಯಲ್ಲಿ ನಂ.ಗೂಡು ವಿದ್ಯಾರ್ಥಿ ಸಾವು

ಕಾಲೇಜಿನಲ್ಲಿ ಟೆನ್ನಿಸ್ ಆಡುತ್ತಿದ್ದಾಗ ಹೃದಯಾಘಾತ

ಕಳಲೆ, ಜು.2– ನಂಜನಗೂಡು ತಾಲೂಕಿನ ಕಳಲೆ ಗ್ರಾಮದ 24 ಮನೆ ತೆಲುಗು ಶೆಟ್ಟರ ಜನಾಂಗದ ಮುಖಂಡ ಕೆ.ಸಿ.ರಾಘವೇಂದ್ರ ಹಾಗೂ ವನಿತಾ ಅವರ ಪುತ್ರ ಅರ್.ಧನುಷ್(17) ಸಾವನ್ನಪ್ಪಿದ್ದಾರೆ.

ಮಂಗಳೂರು ಜಿಲ್ಲೆಯ ಮೂಡಬಿದರೆಯ ಎಕ್ಸ್‌ಲೆಂಟ್ ಕಾಲೇಜ್‌ನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಧನುಷ್ ಕಾಲೇಜ್‌ನಲ್ಲಿ ಶುಕ್ರವಾರ ಸಂಜೆ ಟೆನ್ನಿಸ್ ಆಡುತ್ತಿದ್ದಾಗ ಕುಸಿದು ಬಿದ್ದು ಹೃದಯಾಘಾತವಾಗಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ತಂದೆ, ತಾಯಿ, ಅಜ್ಜ–ಅಜ್ಜಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಸಂಜೆ ನಂಜನಗೂಡಿನ ಆರ್.ಪಿ.ರಸ್ತೆ 11ನೇ ಕ್ರಾಸ್‌ನಲ್ಲಿರುವ ಅವರ ನಿವಾಸದಲ್ಲಿ ಮೃತದೇಹವನ್ನು ಅಂತಿಮ ದರ್ಶನಕ್ಕಾಗಿ ಇರಿಸಲಾಗಿತ್ತು.

ಶಾಸಕ ದರ್ಶನ್ ಧ್ರುವನಾರಾಯಣ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಿಪಂ ಮಾಜಿ ಸದಸ್ಯ ಎನ್.ಮಹದೇವ್ ಸೇರಿದಂತೆ ಇನ್ನಿತರರು ಅಂತಿಮ ದರ್ಶನ ಪಡೆದರು. ನಂತರ ಕಳಲೆ ಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಕಾರು ಡಿಕ್ಕಿ: ಬೈಕ್ ಸವಾರ ಸ್ಥಳದಲ್ಲೇ ಸಾವು

ನಂಜನಗೂಡು, ಜು.2– ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಎಲಚಗೆರೆಬೋರೆಯ ಬಳಿ ಸಂಭವಿಸಿದೆ.

ಗುಂಡ್ಲುಪೇಟೆ ತಾಲೂಕಿನ ಕಾಳನಹುಂಡಿ ಗ್ರಾಮದ ಮಣಿಕಂಠ(24) ಮೃತ ದುರ್ದೈವಿ. ತಾಲೂಕಿನ ಸಿಂಧುವಳ್ಳಿಪುರ ಗ್ರಾಮದ ಬಳಿ ಇರುವ ರಿಷಿ ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ಕೆಲಸ ನಿರ್ವಹಿಸುತ್ತಿದ್ದ ಮಣಿಕಂಠ ಕೆಲಸ ಮುಗಿಸಿಕೊಂಡು ಸ್ವಗ್ರಾಮಕ್ಕೆ ಹಿಂತಿರುಗುತ್ತಿದ್ದ ವೇಳೆ ಅತಿ ವೇಗವಾಗಿ ಬಂದ ಕಾರು ಹಿಂದಿನಿಂದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಯಾಸ್ಮಿನ್ ತಾಜ್ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವೈದ್ಯರು, ನರ್ಸ್‌ಗಳ ಸೇವೆ ಶ್ಲಾಘನೀಯವಾದುದು

ಸರಗೂರು, ಜು.2– ತಾಲೂಕಿನ ಶಾಂತಿಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 25 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಶಿವನಂಜಮ್ಮರವರಿಗೆ ಆರೋಗ್ಯ ಇಲಾಖೆ ವತಿಯಿಂದ ಬೀಳ್ಕೊಡಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಚ್.ಪ್ರಸಾದ್ ಮಾತನಾಡಿ, ನರ್ಸ್ ಮತ್ತು ವೈದ್ಯರ ಸೇವೆ ಶ್ಲಾಘನೀಯವಾದುದು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಶಿವನಂಜಮ್ಮ ಅವರು ಒಂದೇ ಸ್ಥಳದಲ್ಲಿ 25 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ, ಗ್ರಾಮೀಣ ಭಾಗದ ಜನರಲ್ಲಿ ಒಳ್ಳೆಯ ಹೆಸರನ್ನು ಪಡೆದಿದ್ದಾರೆ. ಅವರಿಗೆ ದೇವರು ನಿವೃತ್ತಿ ಜೀವನದಲ್ಲಿ ಆಯಸ್ಸು ಆರೋಗ್ಯ ಐಶ್ವರ್ಯವನ್ನು ಕೊಟ್ಟು ಕಾಪಾಡಲಿ ಎಂದರು.



ಕಾಡಂಚಿನ ಶಾಂತಿಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶರತ್‌ರವರು ಸಹ ಒಳ್ಳೆಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೆಚ್ಚು ಜನರಿಗೆ ಪ್ರೀತಿ ಪಾತ್ರರಾಗಿದ್ದಾರೆ. ಅವರ ಸೇವೆಯೂ ಶ್ಲಾಘನೀಯವಾದುದು ಎಂದು ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಶಿವನಂಜಮ್ಮ ಅವರು ನಮ್ಮ ತಾಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಮಗೆ ಹೆಮ್ಮೆಯ ವಿಷಯ, ಇವರ ಸೇವೆಯನ್ನು ಎಂದಿಗೂ ಮರೆಯಲಾಗದು. ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೇವೆ ಮಾಡುವವರಿಗೆ ಇವರು ಮಾದರಿಯಾಗಿದ್ದಾರೆ ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶರತ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಾಧಿಕಾರಿ ಡಾ.ಮಹದೇವ ಪ್ರಸಾದ್, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಸೋಮಣ್ಣ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶರತ್, ಪ್ರಾಥಮಿಕ ಆರೋಗ್ಯದ ಸಿಬ್ಬಂದಿಗಳಾದ ಬಿಷ್ಣೀನ್, ಸವಿತಾ, ಕೃಷ್ಣ ಶಿವಕುಮಾರ್, ಸೋಮಶೇಖರ್, ನಟರಾಜು, ಪಾಲಾಕ್ಷ, ಆಶಾ ಕಾರ್ಯಕರ್ತರು ಗ್ರಾಮಸ್ಥರು ಹಾಜರಿದ್ದರು.



ಇತ್ತೀಚೆಗೆ ನಿವೃತ್ತಿಗೊಂಡ ಹುಣಸೂರು ಬಾಲಕಿಯರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಲಕ್ಷ್ಮಿ ಅವರನ್ನು ಕ್ಷೇತ್ರ ಸಮನ್ವಯ ಅಧಿಕಾರಿ ಸಂತೋಷ್ ಕುಮಾರ್, ನೌಕರರ ಸಂಘದ ಅಧ್ಯಕ್ಷ ಗೋವಿಂದೇಗೌಡ ಸನ್ಮಾನಿಸಿದರು.

ಪತ್ರಕರ್ತರ ಸೇವಾ ಮನೋಭಾವ ಶ್ಲಾಘನೀಯ: ಶಾಸಕ ಹರೀಶ್‌ಗೌಡ

ಪತ್ರಿಕಾ ದಿನಾಚರಣೆಯಲ್ಲಿ ಸಾಧಕರಿಗೆ, ಪತ್ರಕರ್ತರಿಗೆ ಗೌರವ ಸಮರ್ಪಣೆ



ಹುಣಸೂರು, ಜು.2– ಸಮಾಜದ ಅಂಕು–ಡೊಂಕುಗಳನ್ನು ತಿದ್ದುವ ಮಹತ್ಕಾರ್ಯದಲ್ಲಿ ಪಾಲ್ಗೊಂಡಿರುವ ಪತ್ರಕರ್ತರ ಸೇವಾ ಮನೋಭಾವ ಶ್ಲಾಘನೀಯವಾದುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ರೋಟರಿ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಪತ್ರಿಕಾ ಭವನಕ್ಕಾಗಿ ದಶಕಗಳಿಂದ ಒತ್ತಾಯ ಕೇಳಿ ಬರುತ್ತಿದೆ. ಭವನ ನಿರ್ಮಾಣಕ್ಕಾಗಿ ಈಗಾಗಲೇ ನಿವೇಶನ ಗುರುತಿಸಿದ್ದು, ತಮ್ಮ ಅಧಿಕಾರಾವಧಿಯಲ್ಲೇ ತಾಲೂಕು ಪತ್ರಕರ್ತರ ಸಂಘಕ್ಕೆ ನಿವೇಶನ ಹಾಗೂ ಪತ್ರಕರ್ತರ ಭವನ ನಿರ್ಮಾಣಕ್ಕೆ ಅಗತ್ಯವಿರುವ ಅನುದಾನವನ್ನು ನೀಡುವುದರ ಬಗ್ಗೆ ಕ್ರಮ ವಹಿಸಲಾಗುವುದು ಎಂದರು.

ಮಾಜಿ ಸಚಿವ ಹಾಗೂ ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ಗ್ರಾಮೀಣ ಭಾಗದ ಪತ್ರಕರ್ತರು ಯಾವುದೇ ವೇತನಗಳಿಲ್ಲದೆ ನಿಷ್ಠೆಯಿಂದ ಸಮಾಜದ ಒಳಿತಿಗಾಗಿ ದುಡಿಯುತ್ತಿದ್ದಾರೆ. ಆದುದರಿಂದಲೇ ಪತ್ರಿಕೆ ಹಾಗೂ ಪತ್ರಕರ್ತರ ಮೇಲೆ ಇಂದಿಗೂ ಜನರು ಅಪಾರ ವಿಶ್ವಾಸವಿಟ್ಟಿದಾರೆ. ಪತ್ರಿಕೆಯಲ್ಲಿ ಬರುವ ಸುದ್ದಿಗಳು ಸತ್ಯದಿಂದ ಕೂಡಿರುತ್ತದೆ ಎಂದು ನಂಬುತ್ತಾರೆ. ಇದರಿಂದ ಪತ್ರಕರ್ತರಿಗೆ ಜವಾಬ್ದಾರಿ ಹೆಚ್ಚಿರುತ್ತದೆ ಎಂದರು.

ವಿಧಾನಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಮಾತನಾಡಿ, ಮಾಧ್ಯಮಗಳು ಸತ್ಯವನ್ನು ಅರಿತು ಜವಾಬ್ದಾರಿಯುತವಾಗಿ ಸಮಾಜದ ಒಳಿತಿಗಾಗಿ ಸೇವೆ ಸಲ್ಲಿಸಬೇಕು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಶಾಸಕಾಂಗದ ವ್ಯವಸ್ಥೆ ಹಾಗೂ ರಾಜಕೀಯ ಚಟುವಟಿಕೆಗಳ ಕುರಿತು ಸತ್ಯಾನ್ವೇಷಣೆ ಹಾಗೂ ವಿಸ್ತೃತ ಅಧ್ಯಯನಗಳನ್ನು ಮಾಡಿ ಸುದ್ದಿಗಳನ್ನು ಬಿತ್ತರಿಸುವಲ್ಲಿ ಮಾಧ್ಯಮಗಳು ವಿಫಲವಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ ಅಧ್ಯಕ್ಷ ಕೆ. ದೀಪಕ್ ಮಾತನಾಡಿ, ಪತ್ರಕರ್ತರು ತಮ್ಮ ಮೌಲ್ಯಗಳನ್ನು ಕಾಪಾಡಿಕೊಂಡರೆ ಮಾತ್ರ ಸಮಾಜದಲ್ಲಿ ಗೌರವ ಸ್ಥಾನ ದೊರೆಯಲಿದೆ ಎಂದು ಪತ್ರಕರ್ತರಿಗೆ ಕಿವಿಮಾತು ಹೇಳಿದರು.

ಪ್ರಶಸ್ತಿ ಪುರಸ್ಕಾರ: ಇದೇ ವೇಳೆ ದಿವಂಗತ ಎಚ್.ಆರ್.ಶ್ರೀನಿವಾಸ್‌ರವರ ಸ್ಮರಣಾರ್ಥ ನೀಡುವ ಗ್ರಾಮೀಣ ಪ್ರಶಸ್ತಿಯನ್ನು 2023–2024ರ ಸಾಲಿನ ಅತ್ಯುತ್ತಮ ಜಿಲ್ಲಾ ಗ್ರಾಮಾಂತರ ವರದಿಗಾಗಿ ಹಲೋ ಮೈಸೂರು ವರದಿಗಾರ ಗಜೇಂದ್ರ ಅವರಿಗೆ ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್ ಗೌಡರು ನೀಡಿ ಸನ್ಮಾನಿಸಿದರು.

ಗೌರವ ಸಮರ್ಪಣೆ: ನಗರ ಪ್ರದೇಶದ ಹಿರಿಯ ಸದಸ್ಯರಾದ ಶಿವಕುಮಾರ್.ವಿ. ರಾವ್, ಸಂಪತ್‌ಕುಮಾರ್ ಹಾಗೂ ದಾ.ರಾ. ಮಹೇಶ್ ಮತ್ತು ಅರುಣ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಇದೇ ಪ್ರಥಮ ಬಾರಿಗೆ ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಆರೋಗ್ಯ, ಶಿಕ್ಷಣ, ಕೃಷಿ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಕೊಡುಗೆ ನೀಡಿದ ಮೂರು ಮಂದಿ ಸಾಧಕರನ್ನು ಗುರುತಿಸಿ ಸನ್ಮಾನಿಸಲಾಯಿತು

ಸೇವಾ ಚೇತನ ಪ್ರಶಸ್ತಿ: ವೈದಕೀಯ ರಂಗದಲ್ಲಿನ ಸೇವೆಗಾಗಿ ಸೇವಾ ಚೇತನ ಪ್ರಶಸ್ತಿಯನ್ನು, ಸಾರ್ವಜನಿಕ ಆಸ್ಪತ್ರೆಯ ಡಾ. ಸರ್ವೇಶ್‌ರಾಜ್ ಅರಸ್ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಭೂಮಿಪುತ್ರ ಪ್ರಶಸ್ತಿ: ಕೃಷಿ ಕ್ಷೇತ್ರದಲ್ಲಿ ರಾಸಾಯನಿಕ ಪದಾರ್ಥ ಬಳಸದೆ ಗಣನೀಯ ಸಾಧನೆ ಮಾಡಿರುವ ತಾಲೂಕಿನ ಶಿರಿಯೂರು ಗ್ರಾಮದ ಪಗತಿಪರ ರೈತ ಜಗದೀಶ್ ಅವರಿಗೆ ಭೂಮಿಪುತ್ರ ಪ್ರಶಸ್ತಿಯನ್ನು ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಕ್ರೀಡಾಕೂಟದಲ್ಲಿ ವಿಜೇತರಾದ ಪತ್ರಕರ್ತರಿಗೆ, ಪತ್ರಕರ್ತರ ಮಕ್ಕಳಿಗೆ ಹಾಗೂ ಪತ್ರಿಕಾ ವಿತರಕರಿಗೆ ನಡೆಸಲಾದ ವಿವಿಧ ಕ್ರೀಡೆಗಳು ಮತ್ತು ಚಟುವಟಿಕೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿಗಳನ್ನು ವಿತರಿಸಲಾಯಿತು.

ಹೆಚ್.ಎನ್.ಗಿರೀಶ್‌ಗೆ ವಿದ್ಯಾರಕ್ಷಕ ಪ್ರಶಸ್ತಿ



ಶಿಕ್ಷಣ ಕ್ಷೇತ್ರ ಮತ್ತು ಸಮಾಜ ಸೇವೆಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಹುಣಸೂರು ತಾಲೂಕಿ ಹಿಂಡಗೂಡ್ಲು ಗ್ರಾಮದ ಹೆಚ್.ಎನ್. ಗಿರೀಶ್ ಅವರಿಗೆ ಹುಣಸೂರು ತಾಲೂಕು ಪತ್ರಕರ್ತರ ಸಂಘ ವಿದ್ಯಾರಕ್ಷಕ ಪ್ರಶಸ್ತಿ ನೀಡಿ ಗೌರವಿಸಿದೆ.

ಹುಣಸೂರಿನ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕರಾಗಿರುವ ಗಿರೀಶ್ ಅವರಿಗೆ ಗುರುಕುಲ ರಾಜ್ಯ ಪ್ರಶಸ್ತಿ, ದಕ್ಷಿಣ ಕೇಸರಿ ಉತ್ತಮ ಶಿಕ್ಷಕ ಪ್ರಶಸ್ತಿ, ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ, ರಾಜ್ಯ ಉತ್ತಮ ಉಪನ್ಯಾಸಕ ಪ್ರಶಸ್ತಿ ಮತ್ತು ಶಿಷ್ಯರು ಮೆಚ್ಚಿದ ಗುರು ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿವೆ.

ವೃತ್ತಿಯಲ್ಲಿ ಉಪನ್ಯಾಸಕರಾಗಿರುವ ಇವರು ಪ್ರವೃತ್ತಿಯಲ್ಲಿ ಸಮಾಜ ಸೇವೆಯನ್ನು ವಿಭಿನ್ನವಾಗಿ ಹಾಗೂ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಗ್ರಾಮೀಣ ಜನರಲ್ಲಿ ಏಡ್ಸ್ ಜನಜಾಗೃತಿಗಾಗಿ ನಿರ್ಮಿಸಿದ್ದ 'ಏಡ್ಸ್ ಅಮ್ಮ ದೇವಾಲಯ' ವಿಶ್ವವಿಖ್ಯಾತವಾಗಿದೆ. ಏಡ್ಸ್ ಜಾಗೃತಿ ಕುರಿತು ಪ್ರತಿಷ್ಠಿತ ಅಮೆರಿಕಾ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಸಂಶೋಧನಾ ಪ್ರಬಂಧವಾಗಿದೆ. ಜೊತೆಗೆ 2007 ರಲ್ಲಿ ನಡೆದ ವಿಶ್ವ ಏಡ್ಸ್ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಇದರೊಂದಿಗೆ ಜ್ಞಾನದೀಪ್ತಿ ಟ್ರಸ್ಟ್ ಮೂಲಕ ಸಾವಿರಾರು ಬಡ ಗ್ರಾಮೀಣ ನಿರುದ್ಯೋಗಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿದ್ದಾರೆ.

ಪದ್ಮ ಚಿತ್ರಮಂದಿರ	(ದೂ: 2521923)
ಫೀಚ್ಚೆಕಾರನ್ – 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬೆಂಗಳೂರು ಬಾಯ್ಸ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸತ್ಯಂ ಪ್ರೇಮ್ ಕಿ ಕಥಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಮಬಾಣಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಮಾಮನ್ನಾನ್ (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಪೈ (ತೆ)	4 ಪ್ರದರ್ಶನಗಳು
ಸಂಗಂ	
ಸತ್ಯಂ ಪ್ರೇಮ್ ಕಿ ಕಥಾ (ಹಿಂ)	4 ಪ್ರದರ್ಶನಗಳು
ಲಿಡೋ	
ಸ್ಪೈ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೋರ್ ತಾಹಿಲ್(ತ)	4 ಪ್ರದರ್ಶನಗಳು
ಪ್ರಭಾ	
ರಾಘವೇಂದ್ರ ಸ್ಟೋರ್ಸ್ (ಕ)	4 ಪ್ರದರ್ಶನಗಳು

ಸಾಹಿತಿಗಳ ಜೊತೆಗಿನ ಒಡನಾಟ, ಬರಹಗಾರನ ಬರಹ ಪಕ್ವತೆಗೆ ಸಹಕಾರಿ

ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅಭಿಮತ



ಮೈಸೂರು ಜಿಲ್ಲಾ ಕಸಾಪ, ಹೊಯ್ಸಳ ಕನ್ನಡ ಸಂಘ ಹಾಗೂ ಸವಿಗನ್ನಡ ಪತ್ರಿಕಾ ಬಳಗದ ಸಹಯೋಗದಲ್ಲಿ ವಿಜಯನಗರದ ಸಾಹಿತ್ಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಕಾಶವಾಣಿ ನಿವೃತ್ತ ನಿರ್ದೇಶಕಿ ಡಾ.ಎಂ.ಎಸ್.ವಿಜಯಾ ಹರನ್ ಅವರ 'ವಿಶ್ವ ಸಾಹಿತಿ ಭೈರಪ್ಪ: ಅನುವಾದಕರ ಅನುಭವಗಳು' ಮತ್ತು 'ಆನಂದರ ಬದುಕು ಬರಹ' ಕೃತಿಗಳನ್ನು ಪ್ರಸಿದ್ಧ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಬಿಡುಗಡೆ ಮಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ.ನಾಗರಾಜರಾವ್, ಸಾಹಿತಿ ಸಿ.ನಾಗಣ್ಣ, ಲೇಖಕಿ ಡಾ.ಎಂ.ಎಸ್.ವಿಜಯಾ ಹರನ್, ಚೀಲೂರು ಚಂದ್ರಶೇಖರ್, ಕೆಂಪಣ್ಣ, ರಂಗನಾಥ್ ಮೈಸೂರು, ಮೂಗೂರು ನಂಜುಂಡ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಜು.2(ಜಿಎ)–ಹಿರಿಯ ವಿದ್ವಾಂಸರು, ಸಾಹಿತಿಗಳ ಜೊತೆಗಿನ ಒಡನಾಟ ಹಾಗೂ ಅವರ ನಡುವಿನ ಚರ್ಚೆಗಳು ಬರಹಗಾರನ ಬರಹ ಪಕ್ವತೆಯನ್ನು ಪಡೆಯಲು ಸಹಕಾರಿಯಾಗುತ್ತದೆ ಎಂದು ಪ್ರಸಿದ್ಧ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪ ಸಲಹೆ ನೀಡಿದರು.

ಜಿಲ್ಲಾ ಕಸಾಪ, ಹೊಯ್ಸಳ ಕನ್ನಡ ಸಂಘ ಹಾಗೂ ಸವಿಗನ್ನಡ ಪತ್ರಿಕಾ ಬಳಗವು ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಕಾಶವಾಣಿ ನಿವೃತ್ತ ನಿರ್ದೇಶಕಿ ಡಾ.ಎಂ.ಎಸ್.ವಿಜಯಾಹರನ್ ಅವರ 'ವಿಶ್ವ ಸಾಹಿತಿ ಭೈರಪ್ಪ: ಅನುವಾದಕರ ಅನುಭವಗಳು' ಮತ್ತು 'ಆನಂದರ ಬದುಕು ಬರಹ' ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸಾಹಿತಿಯ ಬರಹಗಳ ಬಗ್ಗೆ ಅನುವಾದಕರು ವಿಮರ್ಶೆ ಮಾಡುವಾಗ ಸಾಹಿತಿಯ ಹಿನ್ನೆಲೆ ತಿಳಿದುಕೊಂಡಿದ್ದರೆ ಬರಹ ತಾಜಾತನದಿಂದ ಕೂಡಿರುತ್ತದೆ. ಓದುಗನಿಗೆ ಸಾಹಿತಿ ಹಾಗೂ ಸಾಹಿತ್ಯದ ಬಗ್ಗೆ ಆಸಕ್ತಿ ಹುಟ್ಟಿಸುತ್ತದೆ. ಅವರ ನಡುವಿನ ಚರ್ಚೆಗಳು ಬರಹಗಾರನ ಬರಹ ಪಕ್ವತೆಯನ್ನು ಪಡೆಯಲು ಸಹಕಾರಿಯಾಗುತ್ತದೆ. ಸ್ವಂತ ಅನುಭವಕ್ಕೆ ಬಾರದೇ ಇದ್ದ ಪ್ರಸಂಗವನ್ನು ಬರೆಯಲು ಹೋಗಬಾರದು. ಅದು ಕೃತಿಯ ಅಂದವನ್ನು ಕೆಡಿಸುತ್ತದೆ. ಕೃತಿಯೊಂದನ್ನು ಸಹೃದಯತೆಯಿಂದ ವಿಮರ್ಶಾತ್ಮಕವಾಗಿ ಬರೆದಾಗ ಅವು ಓದುಗನ ಮನಮುಟ್ಟುವಲ್ಲಿ ಯಶಸ್ವಿಯಾಗುತ್ತದೆ ಎಂದು ತಿಳಿಸಿದರು.

ಆನಂದರ ಜೊತೆಗೆ ಕಾಲೇಜು ದಿನಗಳಲ್ಲಿ ಒಡನಾಟವಿತ್ತು, ನನ್ನ ಪುಸ್ತಕದ ತಪ್ಪುಗಳನ್ನು ತಿದ್ದುವ ಕೆಲಸ ಮಾಡಿದ್ದರು. ಅವರ ಕಥೆಗಳ ಬಗ್ಗೆ ಸಂಶೋಧನೆ ನಡೆಸಿರುವ ವಿಜಯಾ ಹರನ್ ಬರೆದಿರುವ ಪುಸ್ತಕವು ಆನಂದರನ್ನು ಪ್ರತಿಧ್ವನಿಸುತ್ತದೆ. ಲೇಖಕಿಗೆ ಹಾ.ಮಾ ನಾಯಕರು ನೀಡಿರುವ ಮಾರ್ಗದರ್ಶನದ ಸೊಬಗು ಬರಹದ ರೂಪದಲ್ಲಿ ಬಂದಿದೆ. ಇಲ್ಲಿ ಕಥೆಯ ಜೊತೆಗೆ ಅವರ ಜೀವನದ ಬಗ್ಗೆಯೂ ಉಲ್ಲೇಖವಿದೆ ಎಂದು ವಿವರಿಸಿದರು.

ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕ ಡಾ.ಸಿ.ನಾಗಣ್ಣ ಮಾತನಾಡಿದರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ. ನಾಗರಾಜರಾವ್, ಆಕಾಶವಾಣಿ ನಿವೃತ್ತ ನಿರ್ದೇಶಕಿ ಡಾ. ಎಂ.ಎಸ್.ವಿಜಯಾಹರನ್ ಇನ್ನಿತರರು ಉಪಸ್ಥಿತರಿದ್ದರು.

ಲಾರಿ ಮಗುಚಿ ಸಂಚಾರ ವ್ಯತ್ಯಯ



ಮೈಸೂರು, ಜು.2– ಲಾರಿಯೊಂದು ಬಸವನಹಳ್ಳಿ ಕ್ರಾಸ್ ಸಮೀಪದ ರಿಂಗ್ ರಸ್ತೆಯಲ್ಲಿ ಮಗುಚಿ ಬಿದ್ದ ಪರಿಣಾಮ ಕೆಲಕಾಲ ಈ ಮಾರ್ಗದ ಸಂಚಾರದಲ್ಲಿ ವ್ಯತ್ಯಯವಾಗಿ ವಾಹನ ಸವಾರರು ಪರದಾಡಿದರು. ಹಿನಕಲ್ ಕಡೆಯಿಂದ ಬೋಗಾದಿ ಕಡೆಗೆ ಬರುತ್ತಿದ್ದಾಗ ಬಸವನಹಳ್ಳಿ ಜಂಕ್ಷನ್ ಬಳಿ ವೇಗವಾಗಿ ಆಗಮಿಸಿದ ಕೆಎ51 ಡಿ 4520 ಲಾರಿ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ. ಅದೃಷ್ಟವಶಾತ್ ಯಾರಿಗೂ ಪ್ರಾಣಾಪಾಯವಾಗಿಲ್ಲ. ವಿಷಯ ತಿಳಿದ ವಿವಿ ಪುರಂ ಸಂಚಾರಿ ಪೊಲೀಸರು ಸ್ಥಳಕ್ಕೆ ಆಗಮಿಸಿ, ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಲಾರಿಯನ್ನು ಕ್ರೇನ್ ಸಹಾಯದಿಂದ ತೆರವುಗೊಳಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ಲಿಂಗತ್ವ ತಾರತಮ್ಯ ಮೆಟ್ಟಿನಿಂತು ಸಾಧನೆಗೈದ ಯಶೋಗಾಥೆ ಕಣ್ಣಿಗೆ ಕಟ್ಟಿದ ಮಂಜಮ್ಮ ಜೋಗತಿ, ರೂಮಿ ಹರೀಶ್



ಮೈಸೂರು, ಜು.2(ಎಸ್‌ಬಿಡಿ)– ಹೆಣ್ಣಾಗಿ ಹುಟ್ಟಿ ಗಂಡಾಗುವುದು ಹಾಗೂ ಗಂಡಾಗಿ ಹುಟ್ಟಿ ಹೆಣ್ಣಾಗಿ ಜೀವನ ನಡೆಸುವುದೊಂದು ಹೋರಾಟ. ಅಪಮಾನ, ನೋವು, ಹತಾಶೆ, ಕಣ್ಣೀರಿನ ನಡುವೆ ಧೈರ್ಯವಾಗಿ ತಮ್ಮ ಲಿಂಗತ್ವ ಪ್ರತಿಪಾದಿಸಿ, ತಮ್ಮಿಷ್ಟದ ಬದುಕಿನತ್ತ ಹೆಜ್ಜೆ ಹಾಕಿದ ಸಾಧಕರಿಬ್ಬರು 'ಮೈಸೂರು ಸಾಹಿತ್ಯೋತ್ಸವ'ದಲ್ಲಿ ಮನಬಿಚ್ಚಿ ಮಾತನಾಡಿದರು.

ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್–2015 ಸಹಯೋಗದಲ್ಲಿ 'ಮೈಸೂರು ಸಾಹಿತ್ಯೋತ್ಸವದ ಗಾರ್ಡೇನಿಯಾ ವೇದಿಕೆಯಲ್ಲಿ ನಡೆದ 'ಮಂಜು ಇಂದ ಮಂಜಮ್ಮ ಮತ್ತು ಜೋನ್ಪುರಿ ಖಯಾಲ್–ಸಮಾಜದ ಪುಟಗಳ ಅಂಚಿನಲ್ಲಿ ಗೀಚಿದ ಕತೆಗಳು' ಕುರಿತ ವಿಚಾರಗೋಷ್ಠಿಯಲ್ಲಿ ಪದ್ಮಶ್ರೀ ಪುರಸ್ಕೃತೆ ಮಂಜಮ್ಮ ಜೋಗತಿ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರರೂ ಆದ ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರರಾದ ಆದ ರೂಮಿ ಹರೀಶ್, ತಮ್ಮ ಜೀವನ ಪಯಣವನ್ನು ನೆನೆದು ಕಣ್ಣೀರಾದರಲ್ಲದೆ ಲಿಂಗತ್ವ ಸಮಾನತೆಗೆ ಸಹಕಾರ ಕೋರಿದರು.

ಮಂಜಮ್ಮ ಜೋಗತಿ: ನಾನು ಬಳ್ಳಾರಿ ಜಿಲ್ಲೆಯವಳು. ಆರ್ಯವೈಶ್ಯ ಕುಲದಲ್ಲಿ ಹುಟ್ಟಿದವಳು. ತಂದೆ–ತಾಯಿ ಜನ್ಮನೀಡಿದ್ದ 21 ಜನ ಮಕ್ಕಳಲ್ಲಿ ನಾನೂ ಒಬ್ಬ ಮಗನಾಗಿದ್ದೆ. ಎಲ್ಲರಂತೆ ನಾನೂ ಶಾಲೆಗೆ ಹೋಗುತ್ತಿದ್ದೆ. ಆದರೆ ಚಿಕ್ಕಂದಿನಿಂದಲೇ ಹೆಣ್ಣುಮಕ್ಕಳಂತೆ ಇರಬೇಕು, ಅವರು ಮಾಡುವ ಕೆಲಸ ಮಾಡಬೇಕೆಂದು ಎನ್ನಿಸುತ್ತಿತ್ತು. ಅದಕ್ಕೆ ಮನೆಯವರ ವಿರೋಧವಿತ್ತು. ನನ್ನಲ್ಲಿನ ಬದಲಾವಣೆ ಗಮನಿಸಿ ಅಂಗಡಿ, ಹೋಟೆಲ್, ಪಿಗ್ಮಿ ಸಂಗ್ರಹಣೆ ಹೀಗೆ ಹಲವು ಕೆಲಸ ವಹಿಸಿದರೂ ನನ್ನಿಂದ ನಷ್ಟವಾಯಿತು. ಕಡೆಗೆ ನನಗೆ ದೇವರು ಕಟ್ಟಿಸಿದರಾದರೂ ಮನೆಗೆ ಸೇರಿಸಲಿಲ್ಲ. ಮನೆಯೊಳಗಿರಲಿ, ಹೊರಗಿರಲಿ, ಗಂಡು–ಹೆಣ್ಣು ಯಾರ ಜೊತೆ ಮಾತನಾಡಿದರೂ ಬಯ್ಯುತ್ತಿದ್ದರು. ದಾವಣಗೆರೆಗೆ ಹೋಗಿ ಭಿಕ್ಷಾಟನೆ ಮಾಡಿ, 2 ರೂ. ಕೊಟ್ಟು ವಿಷ ಸೇವಿಸಿ, ಮಲಗಿಬಿಟ್ಟೆ, ಆಸ್ಪತ್ರೆಗೆ ಸೇರಿಸಿದ್ದರಿಂದ ಬದುಕುಳಿದೆ. ನಂತರ ಮನೆಯಿಂದ ಹೊರಕಳುಹಿಸಿದರು. ಮತ್ತೊಮ್ಮೆ ಭಿಕ್ಷಾಟನೆ ಮಾಡಿ ಬರುವಾಗ ರಾತ್ರಿ ವೇಳೆ ಐದಾರು ಜನ ದೌರ್ಜನ್ಯ ನಡೆಸಿದರು. ಕಚ್ಚಿದರು, ಅಕ್ಕಿಯನ್ನು ನೆಲಕ್ಕೆ ಚೆಲ್ಲಿದರು, ಹಣ ಕಿತ್ತುಕೊಂಡು ಫುಟ್ಬಾಲ್ ರೀತಿ ಚೆಂಡಾಡಿದರು ಎಂದು ನೆನೆದ ಮಂಜಮ್ಮ ಜೋಗತಿ ಕಣ್ಣೀರಾದರು.

ಆಗಲೂ ಸಾಯಬೇಕು ಎನ್ನಿಸಿತು. ಆದರೆ ಇದ್ದು ಏನಾದರೂ ಸಾಧಿಸಬೇಕೆಂದು ಬಸ್ ನಿಲ್ದಾಣದಲ್ಲಿ ಜೋಗತಿ ನೃತ್ಯ ಮಾಡಲು ಶುರು ಮಾಡಿದೆ. ಯಾರೋ ಗಮನಿಸಿ ಅವರೊಂದಿಗೆ ಕರೆದುಕೊಂಡು ಹೋದರು. ದಿನವಿಡೀ ನೃತ್ಯ ಮಾಡಿದರೂ ಒಂದು ಪೈಸೆ ಕೊಡುತ್ತಿರಲಿಲ್ಲ. ಹೊರಗೆ ಕುಳಿತು ಊಟ ಮಾಡುತ್ತಿದ್ದೆ. ನಂತರ ಲಿಂಗಾಯತರೊಬ್ಬರು ನನ್ನನ್ನು ಮಗನಾಗಿ–ಮಗಳಾಗಿ ಸ್ವೀಕಾರ ಮಾಡಿ, ಸಲಹಿದರು. ಬೀದಿ ಬೀದಿಯಲ್ಲಿ ಇಡ್ಲಿ ಮಾರಿ, ಸಂಜೆ ಟ್ಯೂಷನ್ ಹೇಳಿ ಕೊಡುತ್ತಿದೆ. ಜನ ತರಕಾರಿ, ಅಕ್ಕಿ, ಹಣ ಕೊಡುತ್ತಿದ್ದರು. ಗುರುವಿನ ಮೇಲೆ ಕೈಮಾಡಿ ಅವರಿಂದ ದೂರಹೋಗಿ ಬಹಳ ಕಷ್ಟದ ದಿನಗಳನ್ನು ಎದುರಿಸಿದೆ. ಮತ್ತೆ ಗುರುವಿನ ಕಾಲಿಡಿದು ಕ್ಷಮೆಯಾಚಿಸಿ, ಅವರಿಂದ ಕಲಿತೆ. ಸರ್ಕಾರ ಮಂಗಳಮುಖಿ ಎಂದು ಗುರುತಿಸಿದ ನಂತರ ಮೋಹಿನಿ ಭಸ್ಮಾಸುರ ನಾಟಕದಲ್ಲಿ ಕೀಚಕನ ಪಾತ್ರ ನಿರ್ವಹಿಸಿದೆ. ಜಾನಪದ ಅಕಾಡೆಮಿ ಅಧ್ಯಕ್ಷರಾಗಲು, ಪದ್ಮಶ್ರೀ ಪ್ರಶಸ್ತಿ ದಕ್ಕಲು ಜಾನಪದ ಕಲೆಯೇ ಕಾರಣ ಎನ್ನುವುದಕ್ಕೆ ಸಂತಸವಾಗುತ್ತದೆ ಎಂದರು.

ಮಂಜಮ್ಮ ಮನವಿ: ಇದು ಸ್ವತಂತ್ರ ಭಾರತ, ತಮ್ಮಿಷ್ಟದಂತೆ ಬದುಕುವ ಹಕ್ಕು ಎಲ್ಲರಿಗೂ ಇದೆ. ಹೆಣ್ಣು ಗಂಡಾಗಬಹುದು, ಗಂಡು ಹೆಣ್ಣಾಗಬಹುದು. ಈ ಪ್ರಕೃತಿಯ ನಿಯಮವನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಉನ್ನತ ಶಿಕ್ಷಣದ ಆಯ್ಕೆಯನ್ನು ಮಕ್ಕಳಿಗೇ ನೀಡುವಂತೆ ಲಿಂಗತ್ವವನ್ನೂ ಒಪ್ಪಿಕೊಳ್ಳಿ. ಆಸ್ತಿ, ಹಣ, ಸಂಪತ್ತು ಏನೂ ಬೇಡ, ಎಲ್ಲರಂತೆ ವಿದ್ಯಾಭ್ಯಾಸ ಕೊಡಿಸಿ. ಲಿಂಗತ್ವ ಅಲ್ಪಸಂಖ್ಯಾತರಿಗೆ ಸರ್ಕಾರ ಶೇ.1ರಷ್ಟು ಮೀಸಲಾತಿ ನೀಡಿದೆ. ಅನ್ಯಾಯ, ಮೋಸ ಮಾಡಿ ಜೈಲಿಗೆ ಹೋಗಿ ಬಂದವರನ್ನು ಮಗ–ಮಗಳು ಎಂದು ಒಪ್ಪಿಕೊಳ್ಳುತ್ತೀರಿ. ನಮ್ಮಂತಹವರನ್ನು ಏಕೆ ಒಪ್ಪಿಕೊಳ್ಳುವುದಿಲ್ಲ ಎಂದು ಪ್ರಶ್ನಿಸಿದರು.

ಭಾವುಕರಾದ ರೂಮಿ ಹರೀಶ್: ಲಿಂಗ ಪರಿವರ್ತನೆ ಎಂದರೆ ಸಾಮಾನ್ಯವಾಗಿ ಗಂಡಾಗಿ ಹುಟ್ಟಿ ಹೆಣ್ಣಾಗಿ ಬದಲಾಗುವುದು ಎಂಬ ಭಾವನೆಯಿದೆ. ಇದಕ್ಕೆ ಪೂರಕವಾದ ಸಂಗತಿಗಳು ಎಲ್ಲಾ ಕಡೆ ಕಾಣಬಹುದು. ಆದರೆ ಹೆಣ್ಣಾಗಿ ಹುಟ್ಟಿ ಗಂಡಾದರೆ ನೀವು ನಿಜವಾಗಿ ಗಂಡಸಾ, ಅದು ಇದೆಯಾ ಎಂದೆಲ್ಲಾ ಚುಚ್ಚಿ ಮಾತನಾಡುತ್ತಾರೆ. ನಾನು ಗಂಡಸಾಗಬೇಕು ಎಂದು ಮನಸ್ಸಿನಲ್ಲಿದ್ದರೂ 32 ವರ್ಷ ಹೇಳಲಾಗದೆ ಒದ್ದಾಡಿದ್ದೇನೆ. ಹಿಂದೂಸ್ತಾನಿ ಗಾಯಕಿಯಾಗಿದ್ದ ನಾನು ಈ ವಿಚಾರಕ್ಕೆ ಮದುವೆ ಮಾಡಿಕೊಳ್ಳುವುದಿಲ್ಲ ಎಂದಾಗ ಥುತ್ ಎಂದು ಶಾಸ್ತ್ರೀಯ ಸಂಗೀತದಿಂದ ದೂರವಾಗಬೇಕಾಯಿತು. ನನ್ನ ಲೈಂಗಿಕತೆಯನ್ನು ಹೇಳಿಕೊಳ್ಳಲು ಸಾಧ್ಯವಾಗಿದ್ದು ಚಳವಳಿಯಿಂದ ಲಿಂಗತ್ವವನ್ನು ಜಗತ್ತಿಗೆ ಹೇಗೆ ತಿಳಿಸಬೇಕೆಂದು ನಾವು ದಿನನಿತ್ಯ ಸಾಯುತ್ತೇವೆ ಎಂದು ಕಣ್ಣೀರಾದರು.

ಆತ್ಮಕತೆಗಳ ಬಗ್ಗೆ ಯಾವ ನಂಬಿಕೆ ಇಲ್ಲ. ಆದರೆ ನಮ್ಮಂತಹ ಜನ ಸಾಯಬಾರದು ಎಂಬ ಕಾರಣಕ್ಕೆ ಜೀವನದ ಕತೆ ಹೇಳಿಕೊಂಡಿದ್ದೇನೆ. ನಾನು ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ್ದರಿಂದ ಸಂಗೀತ ಸಾಧನೆಗೆ ನನಗೆ ಸಾಕಷ್ಟು ಅವಕಾಶಗಳಿದ್ದವು. ತಾಯಿಯೂ ಪ್ರಸಿದ್ಧ ಗಾಯಕಿಯಾಗಿದ್ದರು. ಆದರೆ ಅವರೂ ನನ್ನ ಬದಲಾವಣೆ ಒಪ್ಪಲಿಲ್ಲ. ಹೆಣ್ಣು ಮಕ್ಕಳಿಗೆ ಗಂಡಾಗಬೇಕು ಎನ್ನಿಸಿದರೆ ದೊಡ್ಡ ತಪ್ಪಾ. ನನ್ನ ಬದುಕಿಗೆ ನೆರವಾಗಿದ್ದು ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ. ಹೇಗಿದ್ದರೂ ಸರಿ ಮನುಷ್ಯ ಆದ ಮೇಲೆ ಎಲ್ಲಾ ರೀತಿಯ ಹಕ್ಕು ಇದೆ ಎಂಬ ಹೃದಯ ಅವರದು. ಯಾರಿಗೂ ಲಿಂಗತ್ವ ಹಚ್ಚಬೇಡಿ. ನಮ್ಮ ಕನ್ನಡ ಅದ್ಭುತ ಭಾಷೆ ಯಾವ ಲಿಂಗತ್ವ ಇಲ್ಲದೆ ಬದುಕುಹುದು. ಲೇಖಕರು, ಇವರು, ಅವರು ಹೀಗೆ ಬಹುವಚನ ಅನುಸರಿಸಿದರೆ ಸಾಕು. ಗಂಡು ಹೆಣ್ಣಾದರೆ ಹಲವು ಹೆಸರುಗಳಿಂದ ಗುರುತಿಸುತ್ತಾರೆ. ಆದರೆ ಹೆಣ್ಣಾಗಿ ಹುಟ್ಟು ಗಂಡಾಗಿ ಬದಲಾದವರಿಗೆ ಗುರುತಿಸುವ ಹೆಸರಿಲ್ಲ. ನನ್ನಂತಹವರು ಗಂಡಾಗಿ ಬದಲಾಗಲು ಸಾಧ್ಯವಾಗದೆ ಮತ್ತೊಂದು ಹೆಣ್ಣನ್ನು ಪ್ರೀತಿಸಿ ಬದುಕಲಾರದೆ ಪ್ರಾಣ ಕಳೆದುಕೊಂಡಿದ್ದಾರೆ. ಇಂತಹ ಘಟನೆಗಳನ್ನು ತಡೆಯಲು ನೀವೆಲ್ಲಾ ಕೈಜೋಡಿಸಬೇಕು. ಮೂರು ವರ್ಷದಿಂದ ಹಾರ್ಮೋನ್ ಬದಲಾವಣೆ ಥೆರಪಿ ಪಡೆಯುತ್ತಿರುವುದರಿಂದ ಧ್ವನಿ ಬದಲಾಗುತ್ತಿದೆ. ಶ್ರುತಿ ಬದಲಾಗಿದೆ ಮನೆಯಲ್ಲಿ ಮತ್ತೆ ಅಭ್ಯಾಸ ಶುರು ಮಾಡಿದ್ದೇನೆ. ನನ್ನ ಎಷ್ಟೋ ನೋವುಗಳನ್ನು ಜೋನ್ಪುರಿ ಖಯಾಲ್ ರಾಗ ನಿವಾರಣೆ ಮಾಡಿದೆ ಎಂದು ತಿಳಿಸಿದರು. ಮಂಜಮ್ಮ ಜೋಗತಿ ಅವರ 'ಫ್ರಮ್ ಮಂಜುನಾಥ ಟು ಮಂಜಮ್ಮ' ಆತ್ಮಕಥನದ ಲೇಖಕಿ ಹರ್ಷಾ ಭಟ್, ತಮ್ಮ ಬರವಣಿಗೆ ಸಂದರ್ಭ, ಅನುಭವನ್ನು ಪ್ರೇಕ್ಷಕರೊಂದಿಗೆ ಹಂಚಿಕೊಂಡರು. ಲೇಖಕ ದಾದಾಪೀರ್ ಜೈಮನ್ ಗೋಷ್ಠಿ ನಡೆಸಿಕೊಟ್ಟರು.



'ಮೈಸೂರು ಸಾಹಿತ್ಯೋತ್ಸವ'ದ ಗಾರ್ಡೇನಿಯಾ ವೇದಿಕೆಯಲ್ಲಿ 'ಬೆಳ್ಳಿತೆರೆಯ ಮಿಂಚಿನೊಂದಿಗೆ ಬರಹಗಾರ್ತಿಯ ಸಂವಾದ' ಕಾರ್ಯಕ್ರಮದಲ್ಲಿ ಚಿತ್ರನಟಿ ಸುಧಾರಾಣಿ ಹಾಗೂ ಲೇಖಕಿ ಪೂರ್ಣಿಮಾ ಮಾಳಗಿಮನಿ ಭಾಗವಹಿಸಿ, ಹಲವು ವಿಚಾರಗಳನ್ನು ಹಂಚಿಕೊಂಡರು. ಸಂಶೋಧಕ, ಲೇಖಕ ಧರ್ಮೇಂದ್ರ ಕುಮಾರ್ ಅರೇನಹಳ್ಳಿ ಸಂವಾದ ನಡೆಸಿಕೊಟ್ಟರು.

ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರಿಗೆ ಚಾತುರ್ಮಾಸ್ಯ ವ್ರತಕ್ಕೆ ಸ್ವಾಗತ



ಮೈಸೂರು, ಜು.2(ಎಸ್‌ಬಿಡಿ)– ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ವ್ರತದ ಸ್ವಾಗತ ಸಮಾರಂಭ ಭಾನುವಾರ ನೆರವೇರಿತು. ಮೈಸೂರಿನ ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಜು.3ರಿಂದ ಸೆಪ್ಟೆಂಬರ್ 28ರವರೆಗೆ 36ನೇ ಚಾತುರ್ಮಾಸ್ಯ ವ್ರತ ಕೈಗೊಳ್ಳಲಿರುವ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರಿಗೆ ಶ್ರೀಕೃಷ್ಣ ಟ್ರಸ್ಟ್ ಚಾತುರ್ಮಾಸ್ಯ ಸಮಿತಿ ವತಿಯಿಂದ ಭವ್ಯ ಸ್ವಾಗತ ನೀಡಲಾಯಿತು.

ನಗರಕ್ಕೆ ಆಗಮಿಸಿದ ಶ್ರೀಗಳನ್ನು ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಬಳಿ ಸ್ವಾಗತಿಸಿ, ಮಂಗಳವಾದ್ಯ, ಚೆಂಡೆಮದ್ದಳೆ ಸೇರಿದಂತೆ ವಿವಿಧ ವಾದ್ಯಗೋಷ್ಠಿಯೊಂದಿಗೆ ರಥದಲ್ಲಿ ಮೆರವಣಿಗೆ ಮೂಲಕ ಶ್ರೀ ಕೃಷ್ಣಧಾಮಕ್ಕೆ ಕರೆತರಲಾಯಿತು.

ಬಳಿಕ ನಡೆದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅರಮನೆ ಗುರು ಪರಂಪರೆ, ಉಡುಪಿ ಮಠದೊಂದಿಗಿನ ಸಂಬಂಧವನ್ನು ಸ್ಮರಿಸಿಕೊಂಡು, ಶ್ರೀಗಳಿಗೆ ಗೌರವ ಸಮರ್ಪಿಸಿದರು.

ಈ ವೇಳೆ ಆಶೀರ್ವಚನ ನೀಡಿದ ಶ್ರೀಗಳು, ಮೀನು ಸದಾ ಸಂಚಾರ ಮಾಡಿದರೆ ನೀರು ಸ್ವಚ್ಛವಾಗಿರುತ್ತದೆ. ಮೀನು ಬದುಕಿರಬೇಕಾದರೆ ಅದು ನೀರಿನಲ್ಲಿಯೇ ಇರಬೇಕು. ಯತಿಗಳು ಹಾಗೂ ಸನ್ಯಾಸಿಗಳಿಗೆ ಸಮಾಜದೊಂದಿಗಿನ ಸಂಬಂಧವೂ ಹೀಗೆಯೇ ಇದೆ. ಸಮಾಜ ಸ್ವಚ್ಛವಾಗಿರಬೇಕಾದರೆ ಯತಿಗಳು ಪರಿತ್ಯಾಗಿಗಳಾಗಿ ಸಂಚಾರದಲ್ಲಿರಬೇಕು. ಸನ್ಯಾಸಿಗಳು ಸಮಾಜದ ಮಧ್ಯೆಯೇ ಇರಬೇಕು. ಈ ನಡುವೆ ಆಧ್ಯಾತ್ಮಿಕ ಸಾಧನೆಗೂ ಸಮಯ ಮುಡಿಪಾಗಿಡಬೇಕು. ಈ ನಿಟ್ಟಿನಲ್ಲಿ ಯತಿಗಳು ಕೈಗೊಳ್ಳುವ ಮಹಾವ್ರತವೆಂದರೆ ಅದು ಚಾತುರ್ಮಾಸ್ಯ ವ್ರತ. ಈ ವೇಳೆ ಯಾವುದೇ ಉತ್ಸವಗಳಿರುವುದಿಲ್ಲ. ವ್ರತ ಅನುಷ್ಠಾನದೊಂದಿಗೆ ಸಮಾಜಕ್ಕೆ ಮಾರ್ಗದರ್ಶನ ನೀಡಬೇಕು. ಭಕ್ತವೃಂದ ಸೇರಿ ಆಚರಿಸುವ ಚಾತುರ್ಮಾಸ್ಯ ವ್ರತಕ್ಕೆ ಮೈಸೂರಿನ ಜನತೆ ಭವ್ಯ ಸ್ವಾಗತ ನೀಡಿದ್ದೀರಿ. ಪೇಜಾವರ ಮಠಕ್ಕೆ ಯಾವ ಮತಭೇದವಿಲ್ಲ. ನಿಮ್ಮೆಲ್ಲರ ಸಹಕಾರದಿಂದ ಚಾತುರ್ಮಾಸ್ಯ ವ್ರತ ನೆರವೇರಲಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಸಮಿತಿಯ ಗೌರವಾಧ್ಯಕ್ಷ ಆರ್.ವಾಸುದೇವ ಭಟ್, ಅಧ್ಯಕ್ಷ ಎಂ.ಕೃಷ್ಣದಾಸ್ ಪುರಾಣಿಕ್, ಕಾರ್ಯಾಧ್ಯಕ್ಷ ರವಿಶಾಸ್ತ್ರಿ, ಉಪಾಧ್ಯಕ್ಷರಾದ ಪಿ.ಜಯರಾಮ್ ಭಟ್, ಸಿ.ಜೆ.ಮೋಹನ್, ಎಸ್.ಪುಟ್ಟಣ್ಣ ಭಟ್, ಡಿ.ಟಿ.ಪ್ರಕಾಶ್, ಪಿ.ಎಸ್.ರಮೇಶ್, ಪ್ರಧಾನ ಕಾರ್ಯದರ್ಶಿ ಸುಬ್ರಮಣ್ಯ ಆರ್.ತಂತ್ರಿ, ಕಾರ್ಯದರ್ಶಿಗಳಾದ ಎಸ್.ರವಿಕುಮಾರ್, ಬಿ.ಎನ್.ಪದ್ಮನಾಭ್ ಭಟ್, ಸುಧೀರ್ ಆಚಾರ್ಯ, ಶ್ರೀವತ್ಸ, ಖಜಾಂಚಿ ಎಚ್.ಎಂ.ಗುರುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಅಧಿಕ ಮಾಸ ಇರುವುದರಿಂದ ಶ್ರೀಗಳು ಈ ಬಾರಿ 80 ದಿನಗಳವರೆಗೆ ಚಾತುರ್ಮಾಸ್ಯ ವ್ರತ ಕೈಗೊಳ್ಳಲಿದ್ದಾರೆ. ಜೊತೆಗೆ ಜಯಲಕ್ಷ್ಮೀಪುರಂನ ರಾಯರಮಠ, ಉದಯಗಿರಿಯ ಶ್ರೀರಾಮಧಾಮ, ಜೆಪಿ.ನಗರದ ವಿಠಲಧಾಮ, ಅಗ್ರಹಾರದ ಉತ್ತರಾಧಿಮಠ, ಉಡುಪಿಯ ಶ್ರೀಕೃಷ್ಣಮಂದಿರ, ಕೃಷ್ಣಮೂರ್ತಿಪುರಂನ ವ್ಯಾಸರಾಯ ಮಠ, ಚಾಮರಾಜ ರಸ್ತೆಯ ವೆಂಕಟಾಚಲಧಾಮ, ಟಿ.ಕೆ.ಬಡಾವಣೆಯ ರಾಯರ ಮಠ ಇನ್ನಿತರ ಧಾರ್ಮಿಕ ಕೇಂದ್ರಗಳಲ್ಲೂ ಶ್ರೀಗಳು ಆಸ್ಥಾನ ಪೂಜೆ ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪಾಠ, ಜಪ, ತಪ, ಪೂಜೆ ಜೊತೆಗೆ ಬೆಳಗಿನ ಹೊತ್ತು ಭಕ್ತರ ಮನೆಯಲ್ಲಿ ಶ್ರೀಗಳ ಪಾದಪೂಜೆ, ಮಧ್ಯಾಹ್ನದ ಮಹಾಪೂಜೆ ನಂತರ ಭಿಕ್ಷೆ ಮತ್ತು ಮಂತ್ರಾಕ್ಷತೆ ಕೈಂಕರ್ಯಗಳು ಜರುಗಲಿವೆ. ವಿದ್ಯಾರ್ಥಿಗಳೊಡನೆ ಸಂವಾದ, ದೀನ, ದಲಿತರ ಕೇರಿಗಳ ಭೇಟಿ, ಆಶೀರ್ವಚನ, ವಿವಿಧ ಸೇವಾ ಕಾರ್ಯ ಶ್ರೀಗಳಿಂದ ನೆರವೇರಲಿದೆ.

